ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# Swabhimani Sahakari

# ಸ್ವಾಭಿಮಾನಿ ಸಹಕಾರಿ

Pages : 36 | 12₹

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 16
Issue - 3
March - 2019

ಮಹಿಳಾ ದಿನಾಚರಣೆ
ವಿಶೇಷ ಸಂಚಿಕೆ



## ಸಮುದ್ರ ಸುತ್ತಿ ಬಂದ 'ತಾರಿಣಿ'ಯರು

**ಮಹಿಳಾ ಲೆಫ್ಟಿನೆಂಟ್ ಕಮಾಂಡರ್‌ಗಳ ಸಾಧನೆ,
40 ಸಾವಿರ ಕಿ.ಮೀ. ಪ್ರಯಾಣ,
254 ದಿನ ನೀರಿನಲ್ಲಿ ತೇಲಿದರು**



ಸೌಹಾರ್ದ ಸಹಕಾರಿಗಳ
ಸಂಖ್ಯೆ : 4559

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1214



ಬಿ.ಹೆಚ್. ಕೃಷ್ಣಾರೆಡ್ಡಿ

**ಸಹಕಾರ ಕ್ಷೇತ್ರದಲ್ಲಿ ಕರ್ನಾಟಕದಲ್ಲಿ 1250ಕ್ಕೂ ಹೆಚ್ಚು ಮಹಿಳಾ ಸಹಕಾರ ಸಂಘಗಳು, ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 150ಕ್ಕೂ ಹೆಚ್ಚು ಮಹಿಳಾ ಸೌಹಾರ್ದ ಸಹಕಾರಿ ಸಂಸ್ಥೆಗಳು, ಪ್ರತಿಯೊಂದು ಸಾಮಾನ್ಯ ಸಹಕಾರಿ ಸಂಸ್ಥೆಗಳಲ್ಲಿಯೂ 2 ಮಹಿಳಾ ಸಹಕಾರಿ ನಿರ್ದೇಶಕರಿರುವುದು ಮಹಿಳಾ ಸಹಕಾರಿಗಳ ಶಕ್ತಿಯನ್ನು ಹೆಚ್ಚಿಸಿದೆ.**

# ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ : ಅರ್ಥಪೂರ್ಣ ಆಚರಣೆ ಅವಶ್ಯಕ ಮಾರ್ಚ್ 8, 2019

ಸಹಕಾರ ಕ್ಷೇತ್ರದ ಮೂಲಕ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಕ್ರಮ ಅಗತ್ಯ. ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ ಮಹಾಶಿವರಾತ್ರಿಯ ಹಾಗೂ ಹೋಲಿ ಹಬ್ಬದ ಶುಭಾಶಯಗಳು. ನಮ್ಮಲ್ಲಿರುವ ದುಷ್ಟ ಶಕ್ತಿಗಳ ದಮನವಾಗಿ ಉತ್ತಮ ವ್ಯಕ್ತಿತ್ವ, ಸಮಾಜ, ಸಹಕಾರಿ ಸಂಸ್ಥೆಗಳ ಹಾಗೂ ರಾಷ್ಟ್ರ ನಿರ್ಮಾಣದತ್ತ ಮನಸ್ಸು ಕೇಂದ್ರೀಕರಿಸುವ ಶಕ್ತಿಯನ್ನು ಶಿವಪರಮಾತ್ಮ ಶಕ್ತಿಯನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ.

ವಿಶ್ವ ಸಂಸ್ಥೆಯ ಸೂಚನೆಯ ಮೇರೆಗೆ 1975 ರಿಂದ ಪ್ರತಿ ವರ್ಷ ಮಾರ್ಚ್ 8, 2019 ಅಂತರರಾಷ್ಟ್ರೀಯ ಮಹಿಳಾ ವರ್ಷದ ಆಚರಣೆಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಈ ಆಚರಣೆಯ ಪರಿಣಾಮವಾಗಿ ಸಮಾಜದಲ್ಲಿ ಮಹಿಳೆಯರ ಬಗ್ಗೆ ಗೌರವ, ಮಹಿಳೆಯರ ಆರ್ಥಿಕ ಸಬಲತೆಯ ಕಾರ್ಯಚಟುವಟಿಕೆಗಳು, ಮಹಿಳೆಯರಿಗೆ ಶಿಕ್ಷಣ ಹಾಗೂ ಹೆಚ್ಚಿನ ಆರೋಗ್ಯ ಸೌಲಭ್ಯಗಳು, ಸಾಮಾಜಿಕ ಸ್ಥಾನಮಾನಗಳು, ರಾಜಕೀಯ ಸ್ಥಾನಮಾನಗಳು ಹಾಗೂ ಕಾನೂನಿನ ರಕ್ಷಣೆ ಲಭ್ಯವಾಗುತ್ತಿರುವುದನ್ನು ಕಾಣಬಹುದಾಗಿದೆ. ಪರಿಣಾಮವಾಗಿ ಮಹಿಳೆ ಇಂದು ಸಮಾಜದ ಜೀವನದ ಎಲ್ಲ ಸ್ತರಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದಾಳೆ. ಮಹಿಳೆ ಇಂದು ಅವಕಾಶ ವಂಚಿತಳು ಅಥವಾ ಅಬಲಳು ಎನಿಸುವುದಿಲ್ಲ.

ಆದಾಗ್ಯೂ ಸಮಾಜ ಪುರುಷ ಪ್ರಧಾನ ವ್ಯವಸ್ಥೆಯಲ್ಲಿಯೇ ಮುಂದುವರೆಯುತ್ತಿರುವುದು ಅನಿವಾರ್ಯವಾಗಿರುವುದರಿಂದ ಈಗಿರುವ ಸೌಲಭ್ಯಗಳು ಸಾಕಾಗುವುದಿಲ್ಲ. ಈ ಸೌಲಭ್ಯಗಳ ಜೊತೆಗೆ ಸಹಕಾರಿ ಸಂಘ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ಸಾಮಾಜಿಕ ಅಭಿವೃದ್ಧಿಯ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಸಂಸ್ಥೆಗಳು, ಕಂಪನಿಗಳು ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವುದು ಅಗತ್ಯವೆಂದು ನನ್ನ ಅಭಿಪ್ರಾಯವಾಗಿದೆ. ಮಹಿಳೆಯರಿಗೆ ಅವಕಾಶಗಳನ್ನು ಒದಗಿಸುವ ಜೊತೆಗೆ ಜವಾಬ್ದಾರಿಯನ್ನು ನೀಡುವುದು ಮತ್ತು ಜವಾಬ್ದಾರಿ ನಿರ್ವಹಣೆಗೆ ಸಹಕಾರ ನೀಡುವುದು ಅಗತ್ಯ.

ಸಹಕಾರ ಕ್ಷೇತ್ರದಲ್ಲಿ ಕರ್ನಾಟಕದಲ್ಲಿ 1250ಕ್ಕೂ ಹೆಚ್ಚು ಮಹಿಳಾ ಸಹಕಾರ ಸಂಘಗಳು, ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 150ಕ್ಕೂ ಹೆಚ್ಚು ಮಹಿಳಾ ಸೌಹಾರ್ದ ಸಹಕಾರಿ ಸಂಸ್ಥೆಗಳು, ಪ್ರತಿಯೊಂದು ಸಾಮಾನ್ಯ ಸಹಕಾರಿ ಸಂಸ್ಥೆಗಳಲ್ಲಿಯೂ 2 ಮಹಿಳಾ ಸಹಕಾರಿ ನಿರ್ದೇಶಕರಿರುವುದು ಮಹಿಳಾ ಸಹಕಾರಿಗಳ ಶಕ್ತಿಯನ್ನು ಹೆಚ್ಚಿಸಿದೆ. ಕೇವಲ ಮಹಿಳಾ ಸಹಕಾರಿಗಳ ಸಂಖ್ಯೆ ಹೆಚ್ಚಿದರೆ ನಿರ್ದೇಶಕರ ಸಂಖ್ಯೆ ಹೆಚ್ಚಿದರೆ ಸಾಲದು ಅವರಿಗೆ ಶಿಕ್ಷಣ ನೀಡಿ, ಸೌಲಭ್ಯ ಹಾಗೂ ಸಹಕಾರ ನೀಡಿ ಜವಾಬ್ದಾರಿಯನ್ನು ನಿರ್ವಹಿಸುವ ಶಕ್ತಿಯನ್ನು ತುಂಬುವುದು ಇಂದಿನ ಅವಶ್ಯಕತೆ.

ಯತ್ರ ನಾರ್ಯಸ್ತು ಪೂಜ್ಯಂತೆ ತತ್ರ ರಮಂತೆ ದೇವತಾಃ ಎಂದು ವೇದದಲ್ಲಿ ಹೇಳಿರುವಂತೆ ಮಹಿಳೆಯರಿಗೆ ಪೂರ್ಣ ಪ್ರಮಾಣದ ಗೌರವ, ಆರ್ಥಿಕ ಸಬಲತೆ, ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯ ಸಮಾನತೆ, ಆರೋಗ್ಯ ಹಾಗೂ ಕಾನೂನಿನ ರಕ್ಷಣೆಗಳನ್ನು ಒದಗಿಸುವ ನಿಟ್ಟಿನಲ್ಲಿ ಸಹಕಾರಿ ಸಂಸ್ಥೆಗಳು ಕ್ರಿಯಾಯೋಜನೆಗಳನ್ನು ಹಾಕಿಕೊಂಡು ಕಾರ್ಯನಿರತರಾದಾಗ ಮಾತ್ರ ಮಹಿಳಾ ದಿನಾಚರಣೆಗೆ ವಿಶೇಷ ಮಹತ್ವ ಬರುತ್ತದೆ ಅಲ್ಲಿ ದೇವತೆಗಳು ವಾಸಿಸುತ್ತಾರೆ. ಆದ್ದರಿಂದ ಈ ನಿಟ್ಟಿನಲ್ಲಿ ಸೌಹಾರ್ದ ಸಹಕಾರಿಗಳು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ವಿನಂತಿಸಿ ಎಲ್ಲ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಿರೆಂದು ಆಶಿಸುತ್ತ ಎಲ್ಲ ಮಾತೆಯರಿಗೆ ಸಮಸ್ತ ಸಹಕಾರ ಬಂಧು ಭಗಿನಿಯರಿಗೆ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಹಾಗೂ ಸಂಯುಕ್ತ ಸಹಕಾರಿಯ ಪರವಾಗಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭ ಹಾರೈಕೆಗಳನ್ನು ಸಲ್ಲಿಸುತ್ತೇನೆ.

# ಸಂಪಾದಕೀಯ

## ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಮಸೂದೆ ಠೇವಣಿದಾರರ ಸುರಕ್ಷತೆಗೆ ಆದ್ಯತೆ ನೀಡುವ ಕಾನೂನು ಜಾರಿ ಸ್ವಾಗತಾರ್ಹ

ಫೆಬ್ರವರಿ 21, 2019ರಂದು ಕೇಂದ್ರ ಸರಕಾರ ಅನಿಯಂತ್ರಿತ ಠೇವಣಿಗಳ ನಿಷೇಧ ಕಾಯ್ದೆಯನ್ನು ಸುಗ್ರೀವಾಜ್ಞೆಯ ಮೂಲಕ ಜಾರಿಗೊಳಿಸಿರುವುದು ದೇಶದಲ್ಲಿ ವ್ಯಕ್ತಿಗಳು, ವ್ಯಕ್ತಿಗಳ ಗುಂಪುಗಳ ಮಾಲೀಕತ್ವದ ಸಂಸ್ಥೆಗಳು, ಪಾಲುದಾರ ಸಂಸ್ಥೆಗಳು, ಕಂಪನಿಗಳು, ಅಸೋಸಿಯೇಶನ್‌ಗಳು, ನ್ಯಾಸಗಳು ಹಾಗೂ ಸಹಕಾರ ಬ್ಯಾಂಕುಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ ಹಾಗೂ ಸಹಕಾರ ಸಂಸ್ಥೆಗಳಲ್ಲಿ ಠೇವಣಿ ಮಾಡುವ ಠೇವಣಿದಾರರಿಗೆ / ಗ್ರಾಹಕರಿಗೆ ವಿಶೇಷ ರಕ್ಷಣೆ ಒದಗಿಸಿದಂತಾಗಿದೆ ಮತ್ತು ಆರ್ಥಿಕ ಶಿಸ್ತು ಅಳವಡಿಸುವಲ್ಲಿ ದಿಟ್ಟ ಹೆಜ್ಜೆಯಾಗಿದೆ ಎಂದು ವಿಶ್ಲೇಷಿಸಬಹುದಾಗಿದೆ.

ಸಹಕಾರಿ ಸಂಸ್ಥೆಗಳು ಈ ಮಸೂದೆಯ ವ್ಯಾಪ್ತಿಗೆ ಬರುವುದರಿಂದ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧದ ಜೊತೆಗೆ ಸಹಕಾರಿ ಸಂಸ್ಥೆಗಳ ಠೇವಣಿದಾರರ ಹಿತರಕ್ಷಣೆ ಉದ್ದೇಶವನ್ನು ಈ ಕಾಯ್ದೆ ಹೊಂದಿದಂತಾಗಿದೆ. ಈ ಅಧ್ಯಾದ್ದೇಶದ ಪ್ರಕಾರ ಯಾವುದೇ ಸಂಸ್ಥೆಗಳು ತಾವು ಸ್ವೀಕರಿಸುವ ಠೇವಣಿಯನ್ನು ಸಕಾಲದಲ್ಲಿ ಹಿಂತಿರುಗಿಸದಿದ್ದಲ್ಲಿ ಸದರಿ ಸಂಸ್ಥೆಯ ವಿರುದ್ಧ ಕ್ರಮ ಜರುಗಿಸುವ ಅಧಿಕಾರವನ್ನು ಸರಕಾರ ಹೊಂದಿರುತ್ತದೆ. ಠೇವಣಿಗಳನ್ನು ಕ್ರೋಢೀಕರಣ ಮಾಡಲು ಜಾಹಿರಾತು ನೀಡುತ್ತಿದ್ದಲ್ಲಿ ಅಥವಾ ಹೂಡಿಕೆಯನ್ನು ಮಾಡುವುದಕ್ಕೆ ವ್ಯಕ್ತಿಗಳನ್ನು ಪ್ರಚೋದಿಸುವವರು ಹೆಚ್ಚಿನ ಬಡ್ಡಿಯನ್ನು ನೀಡುವುದರ ಮೂಲಕ ಹಾಗೂ ಜನರಿಗೆ ಠೇವಣಿಗಳಿಗೆ ಹೆಚ್ಚಿನ ಮೊತ್ತವನ್ನು ಹಿಂತಿರಿಗಿಸುವ ಪ್ರಲೋಭವನ್ನು ನೀಡುವವರು, ಜನರಿಗೆ ಆಮಿಷವನ್ನು ತೋರಿಸುವವರು, ಅಪರಾಧಿಯೆಂದು ಪರಿಗಣಿಸಲಾಗುತ್ತದೆ ಈ ಅಪರಾಧಿಗಳು ಶಿಕ್ಷೆ ಹಾಗೂ ದಂಡನೆಗೆ ಒಳಪಡಿಸಲು ಹಾಗೂ ಸದರಿಯವರ ಸ್ಥಿರ ಹಾಗೂ ಚರ ಆಸ್ತಿಗಳನ್ನು ಜಪ್ತಿಮಾಡಲು ಅವಕಾಶವಿದೆ.

ನಿಯಂತ್ರಿತ ಠೇವಣಿ ಯೋಜನೆಗಳು ಯಾವವು ಎಂಬುದರ ಬಗ್ಗೆ ಅಧ್ಯಾಧೇಶದಲ್ಲಿ ಸಹಕಾರ ಸಂಸ್ಥೆಗಳು ಸೇರಿದಂತೆ 12 ವಿಧವಾದ ಸಂಸ್ಥೆಗಳ ಹಾಗೂ ವ್ಯಕ್ತಿಗಳ ಪಟ್ಟಿಯನ್ನು ನೀಡಲಾಗಿರುವುದನ್ನು ಗಮನಿಸಿದರೆ ಹಣಕಾಸಿನ ಶಿಸ್ತು ಬೆಳೆಸುವುದಕ್ಕೆ ಕೇಂದ್ರ ಸರಕಾರ ಈ ಅಧ್ಯಾದ್ಯೇಶದ ಮೂಲಕ ಕಟ್ಟುನಿಟ್ಟಿನ ಕ್ರಮ ಜರುಗಿಸಿದಂತಾಗಿದೆ. ಈ ಅಧ್ಯಾದೇಶದ ಪ್ರಕಾರ ಠೇವಣಿ ಸ್ವೀಕರಿಸುವ ಪ್ರತಿಯೊಬ್ಬ ವ್ಯಕ್ತಿ/ಸಂಸ್ಥೆಗಳು ನಿಗದಿತ ನಮೂನೆಯಲ್ಲಿ ಸಮುಚಿತ ಪ್ರಾಧಿಕಾರಕ್ಕೆ ಮಾಹಿತಿ ನೀಡುವುದು ಅವಶ್ಯಕ.

ಈ ಅಧ್ಯಾಧೇಶದ ಪ್ರಕಾರ ಸಹಕಾರ ಸಂಸ್ಥೆಗಳು ಮತದಾನ ಯೋಗ್ಯ ಸದಸ್ಯರಿಂದ ಸ್ವೀಕರಿಸುವ ಠೇವಣಿಗಳು ಮಾತ್ರ ನಿಯಂತ್ರಿತ ಠೇವಣಿ ಯೋಜನೆಗಳಾಗಿರುತ್ತವೆ. ಸಹಕಾರ ಸಂಸ್ಥೆಗಳು ತನ್ನ ಸಹ ಸದಸ್ಯರು ಮತ್ತು ನಾಮ ಮಾತ್ರ ಸದಸ್ಯರಿಂದ ಸ್ವೀಕರಿಸುವ ಠೇವಣಿಗಳು ಅನಿಯಂತ್ರಿತ ಠೇವಣಿಗಳು ಎಂಬುದನ್ನು ಸಹಕಾರಿ ಸಂಸ್ಥೆಗಳು ತಿಳಿಯಬೇಕಾದ ವಿಷಯ.

ಸೌಹಾರ್ದ ಸಹಕಾರಿ ಕಾಯ್ದೆ ಜಾರಿಯಾದ ಪ್ರಾರಂಭದ 4 ವರ್ಷಗಳಲ್ಲಿ ಕೇವಲ ಒಂದೇ ವಿಧದ ಸದಸ್ಯತ್ವದ ಅವಕಾಶ ಕಲ್ಪಿಸಲಾಗಿತ್ತು. ನಂತರ ಕಾಯ್ದೆ ತಿದ್ದುಪಡಿ ಆದಾಗ ಸಹ ಸದಸ್ಯರು ಹಾಗೂ ನಾಮಮಾತ್ರ ಸದಸ್ಯರಿಗೆ ಅವಕಾಶ ಕಲ್ಪಿಸಲಾಗಿತ್ತು. ಪ್ರಸುತ್ತ ಠೇವಣಿದಾರರ ಸುರಕ್ಷತೆಗೆ ಆದ್ಯತೆ ನೀಡುವ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಮಸೂದೆ ಸೌಹಾರ್ದ ಸಹಕಾರಿಗಳ ಮೂಲ ಆಶಯಕ್ಕೆ ಪೂರಕವಾಗಿದೆ.

ಸಹಕಾರಿ ಸಂಸ್ಥೆಗಳು ಅಧ್ಯಾದೇಶದ ಪೂರ್ಣ ವಿವರಗಳನ್ನು ತಿಳಿದುಕೊಂಡು ಠೇವಣಿದಾರರ ಹಿತರಕ್ಷಣೆಗಾಗಿ ಕೇಂದ್ರ ಸರಕಾರ ರಚಿಸಿರುವ ಈ ಕಾನೂನಿನ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವುದು ಅವಶ್ಯಕ ಹಾಗೂ ಸಹಕಾರ ಸಂಸ್ಥೆಗಳಲ್ಲಿ ಹಣಕಾಸಿನ ಶಿಸ್ತು ಬೆಳವಣಿಗೆಗೆ ಪೂರಕ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408, 23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

**ಒ ಳ ಪು ಟ ಗ ಳ ಲ್ಲಿ . . .**

ಜ್ಞಾನ ಜ್ಯೋತಿ ........ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು ........ 5–10
ಸುತ್ತೋಲೆ ........ 11
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 12–16
ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ವಿಶೇಷ ಲೇಖನಗಳು ........ 17–27
ಲೇಖನ ........ 28–34
ಆರ್‌ಬಿಐ ನ್ಯೂಸ್ ........ 34–36

# "ಸ್ವಾರ್ಥವ ತೊರೆದು ವಿಶ್ವ ಪ್ರೇಮಿಯಾಗು"



## ಜ್ಞಾನ ಜ್ಯೋತಿ

ಎಂ.ಬಸಪ್ಪ, ಸಹಕಾರ ಸಂಘಗಳ ನಿವೃತ್ತ ಉಪನಿಬಂಧಕರು ಬೆಂಗಳೂರು.

"ಸರ್ವೇಜನಾ ಸುಖಿನೋ ಭವಂತು" ಹಾಗೂ 'ವಸುದೈವಕುಟುಂಬಕಂ' ಎನ್ನುವ ಲೋಕೋಕ್ತಿಗಳ ಮೂಲಕ ವಿಶ್ವವನ್ನೇ ಒಂದು ಕುಟುಂಬವೆಂದು ಭಾವಿಸಿರೆಂದು ವೇದೋಪನಿಷತ್ತುಗಳು ಕರೆ ನೀಡುವ ಮೂಲಕ ವಿಶ್ವಪ್ರೇಮವನ್ನು, ವಿಶ್ವಭ್ರಾತೃತ್ವವನ್ನು ಬೆಳೆಸಿಕೊಳ್ಳಲು ಸೂಚಿಸಲಾಗಿದೆ. ಬಹಳ ಹಿಂದಿನದೇನಲ್ಲ 50 ವರ್ಷಗಳ ಹಿಂದಿನ ಅವಧಿಗೆ ನಮ್ಮ ಮನಃಸ್ಥಿತಿಯನ್ನು ಹರಿಸಿದಾಗ ಅಂದು ಮಾನವ ಸಂಬಂಧಗಳು ಸಮೃದ್ಧವಾಗಿದ್ದವು. ಒಬ್ಬರನ್ನೊಬ್ಬರು ಪ್ರೀತಿ ಸಲುಗೆಗಳಿಂದ ವರ್ತಿಸುತ್ತಾ, ರಕ್ತಸಂಬಂಧಿಗಳಂತೆ ಇದ್ದುದಿನ್ನೂ ನಮ್ಮ ಸ್ಮೃತಿಪಟದಲ್ಲಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಮಾನವ ಸಂಬಂಧಗಳು ತೀರಾ ಕೃಷವಾಗಿವೆ, ಹಗುರವಾಗಿವೆ. ತಾನಾಯಿತು, ತನ್ನದಾಯಿತು ಮತ್ತುತನ್ನ ಆಸ್ತಿ, ಸಂಸಾರ, ವೈಭೋಗಗಳ ಕಡೆಗೇ ಹೆಚ್ಚು ಕೇಂದ್ರೀಕೃತವಾಗಿದ್ದು, ಪಕ್ಕಾ ಸ್ವಾರ್ಥಿಗಳಾಗುತ್ತಿರುವುದು ಕಂಡುಬರುತ್ತಿದೆ. ಏನನ್ನೇ ಮಾಡಿದರೂಯಾವುದನ್ನೇ ನಿರ್ವಹಿಸಿದರೂ ನನಗೆ ಇದರಿಂದೇನು ಲಾಭಎಂದುಯೋಚಿಸುವ ಪರಿ ಸೃಷ್ಟಿಯಾಗಿದೆಯೆಂಬ ಬಗ್ಗೆ ಆಧಾತ್ಮ ಕವಿ ಡಿ.ವಿ.ಜಿ.ಯವರು ಈ ಕೆಳಗಿನ ಪದ್ಯದಲ್ಲಿತನ್ನದನ್ನು ಬಿಟ್ಟುಜಗದ ಒಳಿತಿಗೆ ಒಂದಷ್ಟು ಚಿಂತಿಸಿ ಎಂದಿರುವ ಪದ್ಯ ಕೆಳಗಿನಂತಿದೆ:

"ಗತಿಯೇನುಎನಗೆನುತ ಕೇಳ್ವವರೆ ಎಲ್ಲರುಂ ।
ಹಿತವೆಂತುಜಗಕೆಂದು ಕೇಳುವವರಾರು?
ಮತಿಯ ವಿಶ್ವದಿ ಬೆರೆಸಿ ಜೀವಿತವ ವಿಸ್ತರಿಸೆ।
ಪಥ ಮುಕ್ತಿಗಾಗಲೇ ॥ ಮಂಕುತಿಮ್ಮ ॥

ಭವಿಷ್ಯದ ಬಗ್ಗೆ ಅತಿಚಿಂತನೆ ಮಾಡಿ ಪ್ರತಿನಿತ್ಯ ಇಷ್ಟರಮತ್ತಷ್ಟರ ಆಸೆ ಪಡುವಜನರೇ ಹೆಚ್ಚಾಗಿದ್ದಾರೆಂದಿದ್ದಾರೆ. ನಾನಾಯಿತು, ನನ್ನ ಪಾಡಾಯಿತು ಜಗದಗೊಡವೆ ನನಗೇಕೆ ಎಂಬ ಸಾರ್ವತ್ರಿಕ ಭಾವ ಆವೃತವಾಗಿರುವುದನ್ನು ಮೇಲಿನ ಪದ್ಯದಲ್ಲಿ ವಿವರಿಸಿದ್ದಾರೆ. ಯಾವುದೇ ವರ್ಗದ ಜನರ ನಿರೀಕ್ಷೆಗಳನ್ನೇ ಆಗಲಿ ಪರಿಶೀಲಿಸಿದಾಗ ಹೊರಬರುವ ಅಂಶವೆಂದರೆ, ಈ ಕೆಲಸ ಮಾಡುವುದರಿಂದ ನನಗೇನು ಬರುತ್ತದೆ ಎಂಬ ಪ್ರಶ್ನೆಯನ್ನು ಮುಂದಿಡುವವರೇ ಹೊರತು ಜಗದ ನಿರ್ವಹಣೆಗೆ ಏನು ಗತಿ ನಮ್ಮಿಂದಲೇನಾದರೂ ಸೇವೆ ಶ್ರಮಗಳು ಬೇಕಿವೆಯಾ ಎಂದು ಕೇಳುವ ವರ್ಗದ ಜನಗಳೇ ಕಡಿಮೆಯಾಗಿದ್ದಾರೆಂದು ತಿಳಿಸುತ್ತಾ, ಕವಿಯವರು ಮನದ ಆಲೋಚನೆಯನ್ನು ವಿಸ್ತಾರಗೊಳಿಸಿ, ಸ್ವಾರ್ಥವನ್ನು ಬಿಟ್ಟು ಜಗಚ್ಚಿಂತನೆಯಲ್ಲಿ ಸರ್ವರ ಹಿತಅಡಗಿದೆಯೆಂದೂ ಅಂಥಹ ಸ್ಥಿತಿಯನ್ನು ವೃದ್ಧಿಸಿಕೊಂಡಲ್ಲಿ ವ್ಯಕ್ತಿಯ ಮುಕ್ತಿಗೆ ದಾರಿಎಂದಿದ್ದಾರೆ.

ನಾವೆಲ್ಲರೂ ಸಹಕಾರ ಭಾವವನ್ನು ಹೊಂದಿ ಸರ್ವರ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇವೆಂಬ ಭಾವವನ್ನು ತಳೆಯೋಣವೆನ್ನುವುದೇ ಈ ಪದ್ಯದ ಸಾರಾಂಶ.

# ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 5,000 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 2,800 ಪ್ರಕರಣಗಳು ಸೇರಿದಂತೆಒಟ್ಟು 7800 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 4,000 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 1,274 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 184 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 141 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 949 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 835 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 73 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 70 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 692 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

## ಶ್ರೀಮತಿ ಎಸ್.ಜಿ. ಸಂಧ್ಯಾ, ನೂತನ ಪೀಠಾಧಿಕಾರಿಗಳು



ಶ್ರೀಮತಿ ಎಸ್. ಜಿ. ಸಂಧ್ಯಾ, ನೂತನ ಪೀಠಾಧಿಕಾರಿಗಳು, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ. ಇವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ದಾವಾ ಪಂಚಾಯತಿ ನ್ಯಾಯಾಲಯದ ನೂತನ ಪೀಠಾಧಿಕಾರಿಯಾಗಿ ದಿನಾಂಕ : 01.03.2019ರಂದು ಅಧಿಕಾರ ವಹಿಸಿಕೊಂಡಿದ್ದಾರೆ.

# ಸಹಕಾರ ಭಾರತೀಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ





**ಬೆಳಗಾವಿ :** ದಿನಾಂಕ : 16 ಮತ್ತು 17 ಫೆಬ್ರವರಿ 2019 ರಂದು ಸಹಕಾರ ಭಾರತೀಯ ರಾಷ್ಟ್ರೀಯ ಕಾರ್ಯಕಾರಣಿ ಸಭೆಯು ಕೆ.ಎಲ್.ಇ. ಸಂಸ್ಥೆಯ ಜೀರಿಗೆ ಸಭಾಭವನ, ಬೆಳಗಾವಿಯಲ್ಲಿ ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಮೇಶ ವೈದ್ಯರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಭಾಗವಹಿಸಿದ ಗಣ್ಯರನ್ನು ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಸ್ವಾಗತಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ರಮೇಶ ವೈದ್ಯರು ಇವರು 'ಸಂಸ್ಕಾರವಿಲ್ಲದೆ ಸಹಕಾರ ಇಲ್ಲ, ಸಹಕಾರವಿಲ್ಲದೆ ಉದ್ಧಾರವಿಲ್ಲ' ಎಂಬ ಘೋಷವಾಕ್ಯ ಹೊಂದಿರುವ ಸಹಕಾರ ಭಾರತಿ ರಾಷ್ಟ್ರಾದ್ಯಂತ ಸಹಕಾರ ಚಳುವಳಿ ಬಲವರ್ಧನೆಗಾಗಿ ಶ್ರಮಿಸುತ್ತಿದೆ. ಸದ್ಯ ಸಹಕಾರ ಭಾರತಿ 27 ರಾಜ್ಯಗಳಲ್ಲಿ 450 ಕ್ಕೂ ಹೆಚ್ಚು ಜಿಲ್ಲಾ ಕೇಂದ್ರಗಳನ್ನು ಹೊಂದಿದೆ. ಸಾಮಾಜಿಕ, ಆರ್ಥಿಕ ಉದ್ದಿಮೆಯಾಗಿ ಬೆಳೆಯುತ್ತಿದೆ. ಇದಕ್ಕೆ ಸರಕಾರದ ಸಂಪೂರ್ಣ ಪ್ರೋತ್ಸಾಹ ಅಗತ್ಯ ಎಂದು ತಿಳಿಸಿದರು.

## ಸಹಕಾರ ಕಾನೂನುಗಳಲ್ಲಿ ತಿದ್ದುಪಡಿ ಅವಶ್ಯಕ – ಡಾ. ಪ್ರಭಾಕರ ಕೋರೆ



ಉದ್ಘಾಟಕರಾದ ಶ್ರೀ ಪ್ರಭಾಕರ ಕೋರೆ, ಮಾನ್ಯ ರಾಜ್ಯಸಭಾ ಸದಸ್ಯರು, ಇವರು ಮಾತನಾಡುತ್ತ ಆರಂಭದಿಂದಲೂ ಸಮಾಜದಲ್ಲಿ ವಿಶೇಷ ಸ್ಥಾನ ಪಡೆದಿರುವ ಸಹಕಾರ ಕ್ಷೇತ್ರ ಜನಮೆಚ್ಚುಗೆಯ ಕಾರ್ಯನಿರ್ವಹಿಸುತ್ತಿದೆ. ರೈತರು ಮತ್ತು ಜನಸಾಮಾನ್ಯರ ಆರ್ಥಿಕ ವ್ಯವಹಾರಗಳಿಗೆ ಸಹಕಾರ ಕ್ಷೇತ್ರ ವಿಶೇಷ ಸಂಬಂಧ ಹೊಂದಿದೆ. ಕೆಲ ಸಹಕಾರಿ ನಿಯಮಗಳ ಬದಲಾವಣೆಯೊಂದಿಗೆ ಇನ್ನಷ್ಟು ಗಟ್ಟಿಗೊಳಿಸಿದರೆ ಪ್ರಭಾವಿ ಕ್ಷೇತ್ರವಾಗಿ ಬೆಳೆಯಲಿದೆ ಎಂದರು.



## ಸರಕಾರಗಳು ಸಹಕಾರ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು – ಶ್ರೀ ಮಹಂತೇಶ ಕವಟಗಿಮಠ

ಅತಿಥಿಗಳಾದ ಶ್ರೀ ಮಹಾಂತೇಶ ಕವಟಗಿಮಠ, ಮಾನ್ಯ ಮುಖ್ಯ ಸಚೇತಕರು, ವಿರೋಧ ಪಕ್ಷ, ವಿಧಾನ ಪರಿಷತ್ತು, ಕರ್ನಾಟಕ ಸರ್ಕಾರ, ಇವರು ಸಹಕಾರಿ ಕ್ಷೇತ್ರಕ್ಕೂ ಮತ್ತು ಕರ್ನಾಟಕಕ್ಕೂ ಒಂದು ಅವಿನಾಭಾವ ಸಂಬಂಧವಿದೆ, ವಿಶೇಷವಾಗಿ ಕರ್ನಾಟಕಕ್ಕೂ ಸಹಕಾರಿ ಕ್ಷೇತ್ರಕ್ಕೂ ಸುಮಾರು 110 ವರ್ಷಗಳ ಇತಿಹಾಸವಿದೆ. ಕರ್ನಾಟಕದ ಬೆಳಗಾವಿಯಲ್ಲಿ ಈ ಸಹಕಾರ ಭಾರತೀಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಡೆಯುತ್ತಿರುವುದು ನಮ್ಮೆಲ್ಲರ ಸೌಭಾಗ್ಯ ಎಂದು ಹರ್ಷ ವ್ಯಕ್ತಪಡಿಸಿದರು.

ಸಹಕಾರಿ ಕ್ಷೇತ್ರಕ್ಕೂ ಮತ್ತು ಬೆಳಗಾವಿಗೂ ಕೂಡ ಒಂದು ಅವಿನಾಭಾವ ಸಂಬಂಧವಿದೆ. ಸಹಕಾರಿ ಕ್ಷೇತ್ರದ ವಿವಿಧ ಆಯಾಮಗಳಿಗೆ ಬೆಳಗಾವಿ ಒಂದು ಮೂಲ ಕಾರಣ ಎಂದರು. ಅದು ಸಹಕಾರಿ ಸಕ್ಕರೆ ಕಾರ್ಖಾನೆಯಾಗಿರಬಹುದು, ಸಹಕಾರಿ ನೂಲಿನ ಗಿರಣಿಯಾಗಿರಬಹುದು, ಸಹಕಾರಿ ವಿದ್ಯುತ್ ಸಂಸ್ಥೆಯಾಗಿರಬಹುದು, ಸಹಕಾರಿ ಕ್ರೀಡಾ ಸಂಸ್ಥೆಯಾಗಿರಬಹುದು ಮತ್ತು ಸಹಕಾರಿ ಸಂಸ್ಥೆಯ ಶಾಲೆಯಾಗಿರಬಹುದು, ಹೀಗೆ ಸಹಕಾರಿ ಕ್ಷೇತ್ರ ಮುಟ್ಟದೇ ಇರುವಂತಹ ಯಾವುದೇ ವಿಭಾಗಗಳು ಬೆಳಗಾವಿಯಲ್ಲಿ ಉಳಿದಿಲ್ಲ ಎಂದು ಅಭಿಮಾನದಿಂದ ಹೇಳಿದರು.

ರಾಜ್ಯ ಹಾಗೂ ಕೇಂದ್ರ ಸರಕಾರಗಳು ಸಹಕಾರಿ ಕ್ಷೇತ್ರವನ್ನು ನೋಡುವ ದೃಷ್ಟಿ ಬದಲಾಗಬೇಕಿದೆ, ಸಹಕಾರ ಎಂದರೆ ಅದು ಸರಕಾರಕ್ಕಿಂತ ಹೆಚ್ಚು ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತದೆ ಅನ್ನುವ ಭಾವನೆ ರಾಜ್ಯದಲ್ಲಿರುವ ಮತ್ತು ಕೇಂದ್ರದಲ್ಲಿರುವ ಮಂತ್ರಿಗಳಿಗೆ ಕಾಣುತ್ತಿರುತ್ತದೆ. ಸಹಕಾರ ಕ್ಷೇತ್ರದಲ್ಲಿ ಗ್ರಾಮೀಣ ಮಟ್ಟದ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳಿಂದ ರಾಷ್ಟ್ರ ಮಟ್ಟದ ಸಂಸ್ಥೆಗಳನ್ನಾಗಿ ಬೆಳೆಸಬೇಕಾದರೆ ಅದಕ್ಕೆ ನಿರಂತರವಾದ ಪರಿಶ್ರಮ ಹಾಗೂ ಆ ಸಂಸ್ಥೆಯಲ್ಲಿರುವ ಸದಸ್ಯರುಗಳು ಆ ಆಡಳಿತ ಮಂಡಲಿಯವರ ಮೇಲೆ ಇಡುವಂತಹ ವಿಶ್ವಾಸದಿಂದ ಆ ಸಂಸ್ಥೆಯನ್ನು ಅಷ್ಟು ಎತ್ತರಕ್ಕೆ ಬೆಳೆಸಲು ಸಾಧ್ಯವಾಗಿರುತ್ತದೆ. ಇವತ್ತು ಕ್ರೆಡಿಟ್ ಸೌಹಾರ್ದ ಸಂಸ್ಥೆಗಳಿಗೆ ಬಂದಂತಹ ಆದಾಯ ತೆರಿಗೆ ಸಮಸ್ಯೆಯಾಗಿರಬಹುದು ಅಥವಾ ರಾಜ್ಯ ಹಾಗೂ ರಾಷ್ಟ್ರದಲ್ಲಿರುವಂತಹ ಸರಕಾರಗಳ ಹಸ್ತಕ್ಷೇಪವನ್ನು ದೂರ ಮಾಡುವಂತಹ ರೀತಿಯಲ್ಲಿ ಶ್ರೀ ರಮೇಶ ವೈದ್ಯ ಹಾಗೂ ಅವರ ತಂಡ ಕಾರ್ಯನಿರ್ವಹಿಸಬೇಕೆಂದು ಅಪೇಕ್ಷಿಸುತ್ತೇವೆ. ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯನ್ನು ಬೆಳಗಾವಿಯಲ್ಲಿ ಆಯೋಜಿಸಿದ್ದು ನಮಗೆ ಸಂತೋಷಕರ ವಿಷಯವಾಗಿದೆ. ಇಂತಹ ಅನೇಕ ವಿಚಾರಗಳಿಗೆ ಈ ವೇದಿಕೆ ಚಿಂತನ ಮಂಥನ ಮಾಡಬೇಕಾಗಿದೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳಿಂದ ಹಿಡಿದು ರಾಷ್ಟ್ರಮಟ್ಟದಲ್ಲಿರತಕ್ಕಂತಹ ಸಹಕಾರಿ ಸಂಸ್ಥೆಗಳಿಗೆ ಒಂದು ಹೊಸ ಮರು ಜೀವ ಕೊಡುವಂತಹ ಕೆಲಸ ಸಹಕಾರ ಭಾರತಿ ಮಾಡಲಿ ಎಂದು ಆಶಯ ವ್ಯಕ್ತಪಡಿಸಿದರು.



## ಮಹಿಳೆಯರ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರದ ಪಾತ್ರ ಮಹತ್ವದ್ದು – ಶಶಿಕಲಾ ಜೊಲ್ಲೆ

ಉದ್ಘಾಟನಾ ಸಮಾರಂಭದ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀಮತಿ ಶಶಿಕಲಾ ಜೊಲ್ಲೆ, ಮಾನ್ಯ ವಿಧಾನಸಭಾ ಸದಸ್ಯರು, ನಿಪ್ಪಾಣಿ, ಇವರು ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಸಹಕಾರಿ ಕ್ಷೇತ್ರ ಸಮಾಜದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.



ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಹಕಾರಿಗಳು

ಕಾರ್ಯಕ್ರಮದಲ್ಲಿ ಶ್ರೀ ಉದಯ ಜೋಶಿ, ಮಾನ್ಯ ಪ್ರಧಾನ ಕಾರ್ಯದರ್ಶಿ, ಸಹಕಾರ ಭಾರತಿ, ಶ್ರೀ ಅಣ್ಣಾಸಾಹೇಬ ಜೊಲ್ಲೆ, ಮಾನ್ಯ ಅಧ್ಯಕ್ಷರು, ಕೆಓಎಫ್, ಶ್ರೀ ಎಸ್.ಆರ್. ಸತೀಶಚಂದ್ರ, ಮಾನ್ಯ ರಾಜ್ಯ ಅಧ್ಯಕ್ಷರು, ಸಹಕಾರ ಭಾರತಿ, ಕರ್ನಾಟಕ, ಶ್ರೀ ಜಗದೀಶ ಕವಟಗಿಮಠ, ಮಾನ್ಯ ಅಧ್ಯಕ್ಷರು, ಸ್ವಾಗತ ಸಮಿತಿ, ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಮುಕುಂದ ಪೂಜಾರಿ ಇವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಶ್ರೀ ಎಸ್ ಆರ್ ಸತೀಶ್ಚಂದ್ರ ಇವರು ನಡೆಸಿಕೊಟ್ಟರು.

## ಸಹಕಾರ ಕ್ಷೇತ್ರದ ವ್ಯಾಪ್ತಿ ಇನ್ನೂ ಬೆಳೆಯಬೇಕು – ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ



ಉದ್ಘಾಟನಾ ಸಮಾರಂಭದ ದಿವ್ಯ ಸಾನಿಧ್ಯವನ್ನು ವಹಿಸಿದ್ದ ಶ್ರೀ ಶ್ರೀ ಶ್ರೀ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿಯವರು ತಮ್ಮ ಆಶೀರ್ವಚನದಲ್ಲಿ ಸರಕಾರ ಮಾಡಬೇಕಿದ್ದ ಕೆಲಸವನ್ನು ಸಹಕಾರ ರಂಗ ಮಾಡುತ್ತ ರೈತರ ಬೆನ್ನಿಗೆ ನಿಂತಿರುವ ಕಾರ್ಯ ನಿಜಕ್ಕೂ ಶ್ಲಾಘನೀಯ. ಬಡತನ ನಿರ್ಮೂಲನೆಗಾಗಿ ತಲೆ ಎತ್ತಿರುವ ಸಹಕಾರ ರಂಗ ನಿರೀಕ್ಷೆಗೂ ಮೀರಿ ಕೆಲಸ ಮಾಡುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಬಡತನ ನಿರ್ಮೂಲನೆಯ ಮೂಲ ಉದ್ದೇಶವನ್ನು ಇಂದಿಗೂ ಕಾಯ್ದಿರಿಸಿಕೊಂಡಿರುವ ಸಹಕಾರ ರಂಗ ಸರಕಾರದ ಜೊತೆಜೊತೆಗೆ ಹೆಜ್ಜೆ ಹಾಕುತ್ತ ತನ್ನದೆ ಆದ ಛಾಪು ಮೂಡಿಸಿದೆ. ಗ್ರಾಮೀಣ ಪ್ರದೇಶದಲ್ಲಿ ಸಹಕಾರ ಸಂಘ ಹೆಚ್ಚಿದಷ್ಟು ಅಲ್ಲಿನ ಜನರು ಸ್ವಾವಲಂಬಿಗಳಾಗಿ ಬೆಳೆಯುತ್ತಾರೆ.ಆದ್ದರಿಂದ ಗ್ರಾಮಗಳಲ್ಲಿ ಹೆಚ್ಚೆಚ್ಚು ಸಹಕಾರ ಸಂಘ ಸ್ಥಾಪನೆಯಾಗಲಿ ಎಂದು ಆಶಯ ವ್ಯಕ್ತಪಡಿಸಿದರು.



ಸಂಯುಕ್ತ ಸಹಕಾರಿಯ ಪುಸ್ತಕ ಮಳಿಗೆ ಉದ್ಘಾಟನೆ

## ಆದಾಯ ತೆರಿಗೆ ತೊಂದರೆಗಳ ನಿವಾರಣೆಗೆ ನಿರಂತರ ಪ್ರಯತ್ನ ಕೇಂದ್ರ ಸಚಿವ ಶ್ರೀ ಪಿಯೂಶ ಗೋಯಲ್‌ರಿಗೆ ಮನವಿ



**ನವದೆಹಲಿ :** ಸಹಕಾರ ಸಂಸ್ಥೆಗಳಿಗೆ ಆಗುತ್ತಿರುವ ಆದಾಯ ತೆರಿಗೆ ತೊಂದರೆಗಳ ನಿವಾರಣೆಯ ಪ್ರಯತ್ನದ ಮುಂದುವರಿದ ಭಾಗವಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಇವರು ದಿನಾಂಕ 05.02.2019 ರಂದು ದೆಹಲಿಗೆ ಭೇಟಿ ನೀಡಿದ್ದು ಮಾನ್ಯ ಹಣಕಾಸು ಸಚಿವರಾದ ಶ್ರೀ ಪಿಯೂಶ ಗೋಯಲ್, ಸಿಬಿಡಿಟಿ ಅಧ್ಯಕ್ಷರಾದ ಶ್ರೀ ಸುಶೀಲ ಚಂದ್ರ, ಗೃಹ ಸಚಿವರಾದ ಶ್ರೀ ರಾಜನಾಥ ಸಿಂಗ್ ಹಾಗೂ ಸಾಂಖ್ಯಿಕ & ಅನುಷ್ಠಾನ ಸಚಿವ ಶ್ರೀ ಸದಾನಂದ ಗೌಡ ಇವರನ್ನು ಭೇಟಿ ಮಾಡಿ ಚರ್ಚಿಸಿರುತ್ತಾರೆ.

ಈ ಸಂದರ್ಭದಲ್ಲಿ ಕ್ಯಾಂಪ್ಕೋ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ ಚಂದ್ರ, ಮ್ಯಾಮ್ಕೋಸ್ ಉಪಾಧ್ಯಕ್ಷರಾದ ಶ್ರೀ ಯಡಗೆರೆ ಸುಬ್ರಹ್ಮಣ್ಯ, ಹಿರಿಯ ಸಹಕಾರಿಗಳಾದ ಶ್ರೀ ಮಂಜಪ್ಪ ಹೊಸಬಾಳೆ ಹಾಗೂ ಇನ್ನಿತರ ಸಹಕಾರಿ ಗಣ್ಯರು ಉಪಸ್ಥಿತರಿದ್ದರು.

ಸೌಹಾರ್ದ ಸಹಕಾರಿಗಳು 'ಸಹಕಾರಿ ಸಂಘ' ಅಲ್ಲ ಎನ್ನುವ ಆದಾಯ ತೆರಿಗೆ ಇಲಾಖೆಯ ಪರಿಗಣನೆಯನ್ನು ಬದಲಾಯಿಸುವ ಕುರಿತು ಸ್ಪಷ್ಟನೆ ನೀಡಲಾಗುವುದು ಹಾಗೂ ಸಹಕಾರಿಗಳು ಎದುರಿಸುತ್ತಿರುವ ಇನ್ನಿತರ ಆದಾಯ ತೆರಿಗೆ ಸಮಸ್ಯೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ದೊರೆತಿದೆ.

## ಆದಾಯ ತೆರಿಗೆ ತೊಂದರೆ ನಿವಾರಣೆಗೆ ಮುಂದುವರೆದ ಪ್ರಯತ್ನ ಸಂಯುಕ್ತ ಸಹಕಾರಿಯ ನಿಯೋಗದಿಂದ ಕೇಂದ್ರ ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿ ಹಾಗೂ ಸಿಬಿಡಿಟಿ ನೂತನ ಅಧ್ಯಕ್ಷ ಪ್ರಮೋದಚಂದ್ರ ಮೋದಿ ಭೇಟಿ

ದಿನಾಂಕ : 28.02.2019ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಮಾಜಿ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಕೇಂದ್ರದ ಹಣಕಾಸು ಸಚಿವರಾದ ಶ್ರೀ ಅರುಣ್ ಜೇಟ್ಲಿರವರನ್ನು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಕೆಲವು ತೊಂದರೆಗಳು ಆಗಿಂದ್ದಾಗೆ ಆಗುತ್ತಿರುದನ್ನ ವಿವರಿಸಿದರು.

ನಂತರ ಅರುಣ್ ಜೇಟ್ಲಿ ಈ ಎಲ್ಲಾ ಸಮಸ್ಯೆಗಳನ್ನು ಶೀಘ್ರದಲ್ಲಿಯೇ ನಿವಾರಿಸಲು ಕ್ರಮವಿಡುವುದಾಗಿ ತಿಳಿಸಿದರು. ಸಿಬಿಡಿಟಿ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ಶ್ರೀ ಪ್ರಮೊದಚಂದ್ರ ಮೋದಿಯವರನ್ನು ಭೇಟಿ ಮಾಡಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಆಗುತ್ತಿರುವ ತೊಂದರೆಯನ್ನು ನಿವಾರಿಸುವುದಕ್ಕಾಗಿ ಕ್ರಮ ವಿಡುವಂತೆ ವಿನಂತಿಸಿದರು. ಸಿಬಿಡಿಟಿ ನೂತನ ಅಧ್ಯಕ್ಷ ಶ್ರೀ ಪ್ರಮೊದಚಂದ್ರ ಮೋದಿರವರು ಮಾತನಾಡಿ ಸೌಹಾರ್ದಗಳಿಗೆ ಆಗಿರುವ ಸಮಸ್ಯೆ ಬಗ್ಗೆ ನಾನು ಅಧ್ಯಯನ ಮಾಡಿ ಹಾಗೂ ಈ ಬಗ್ಗೆ ಕರ್ನಾಟಕದ ಆದಾಯ ತೆರಿಗೆ ಅಧಿಕಾರಿಗಳ ಜೊತೆಗೆ ಚರ್ಚಿಸಿದ ನಂತರ ಸೂಕ್ತ ಕ್ರಮವಿಡುವುದಾಗಿ ತಿಳಿಸಿದ್ದಾರೆ.



ಶ್ರೀ ಪ್ರಮೊದಚಂದ್ರ ಮೋದಿ, ಐ.ಆರ್.ಎಸ್.

## ಸೌಹಾರ್ದ ಸಹಕಾರಿಗಳಿಗೆ ಎನ್.ಸಿ.ಡಿ.ಸಿ ಯಿಂದ ಸಾಲ

ಎನ್.ಸಿ.ಡಿ.ಸಿ. ವ್ಯವಸ್ಥಾಪಕ ನಿರ್ದೇಶಕ ಇವರನ್ನು ಭೇಟಿ ಮಾಡಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ 15 ರಿಂದ 20 ಲಕ್ಷಗಳ ಆಧಾರ ರಹಿತ (without security) ಸಾಲ ನೀಡಲು ಕ್ರಮವಿಡಬೇಕೆಂದು ವಿನಂತಿಸಿದರು.

ಈ ಸಂದರ್ಭದಲ್ಲಿ ಎನ್.ಸಿ.ಡಿ.ಸಿ ನಾಮ ನಿರ್ದೇಶಕರಾದ ಕರ್ನಾಟಕದವರಾದ ಶ್ರೀ ಮಂಜಪ್ಪ ಹೊಸಬಾಳೆಯವರು ಜೊತೆಯಲ್ಲಿದ್ದು ಈ ಯೋಜನೆಯನ್ನು ಶೀಘ್ರದಲ್ಲಿಯೇ ಜಾರಿಗೊಳಿಸಲು ಕ್ರಮವಿಡುವುದಾಗಿ ತಿಳಿಸಿದರು.

## ಎಲ್ಲಾ ರಾಜ್ಯಗಳ ಸಹಕಾರಿ ಮಂತ್ರಿಗಳ ಸಭೆಗೆ ಎನ್.ಸಿ.ಯು.ಐ ಒಪ್ಪಿಗೆ

ಸಹಕಾರ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಗಾಗಿ ಹಾಗೂ ದೇಶಾದಾದ್ಯಂತ ಸಹಕಾರ ಚಳುವಳಿಯ ಏಕರೂಪ ಬೆಳವಣಿಗೆಗಾಗಿ ಮತ್ತು ಎಲ್ಲಾ ರಾಜ್ಯಗಳ ಕಾನೂನುಗಳಲ್ಲಿ ಏಕರೂಪ ವಿಧಿ–ವಿಧಾನಗಳ ವ್ಯವಸ್ಥೆಗಳ ಜಾರಿಗೆ ತರುವಂತಹ ಹಾಗೂ ದೇಶದ ರೈತರ ಮತ್ತು ಕಾರ್ಮಿಕರ ಮತ್ತು ಬಡವರ ಅಭಿವೃದ್ಧಿಗಾಗಿ ದೇಶದ ಸಹಕಾರ ಚಳುವಳಿಯ ಮಹತ್ವವಾದ ಪಾತ್ರದ ಕುರಿತು ಹಾಗೂ ಸೌಹಾರ್ದ ಸಹಕಾರಿಯ ಕಾಯ್ದೆ ರೀತಿ Parallel liberal actನ್ನು ದೇಶದ ಇನ್ನೂ ಬೇರೆ ರಾಜ್ಯಗಳಲ್ಲಿ ಜಾರಿಗೆ ತರಲು ಮತ್ತು ಸಂಯುಕ್ತ ಸಹಕಾರಿ ಮಾದರಿಯನ್ನು ಅಳವಡಿಸಿಕೊಳ್ಳಲು ಚರ್ಚಿಸುವುದಾಗಿ ರಾಷ್ಟ್ರೀಯ ಸಹಕಾರಿ ಯೂನಿಯನ್ ನೇತೃತ್ವದಲ್ಲಿ ಎಲ್ಲಾ ರಾಜ್ಯಗಳ ಸಭೆಯನ್ನು ಬೆಂಗಳೂರಿನಲ್ಲಿ ವ್ಯವಸ್ಥೆ ಮಾಡಲು ಎನ್.ಸಿ.ಯು.ಐ ಒಪ್ಪಿದೆ. ಮುಂದಿನ ದಿನಗಳಲ್ಲಿ ಈ ಬಗ್ಗೆ ಸಂಯುಕ್ತ ಸಹಕಾರಿಯು ಈ ಸಭೆಯ ರೂಪ ರೇಷೆಗಳನ್ನು ಸಿದ್ದಪಡಿಸಲಿದೆ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷ ಬಿ.ಹೆಚ್. ಕೃಷ್ಣಾರೆಡ್ಡಿಯವರು ತಿಳಿಸಿರುತ್ತಾರೆ.

## "ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಸಹಕಾರ ಸಂಸ್ಥೆಗಳ ಪಾತ್ರ"

## ಇಂಡಿಯನ್ ಸೊಸೈಟಿ ಫಾರ್ ಸ್ಟಡಿ ಇನ್ ಕೋ-ಆಪರೇಟಿವ್ 34ನೇ ರಾಷ್ಟ್ರೀಯ ವಿಚಾರಗೋಷ್ಠಿ ತ್ರಿಶೂರ - ಕೇರಳ

ಕೇರಳದ ಕೃಷಿ ವಿಶ್ವವಿದ್ಯಾಲಯ ತ್ರಿಶೂರ ಹಾಗು ವೈಕುಂಠ ಮೆಹತಾ ನ್ಯಾಶನಲ್ ಇನಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮೆನೆಜ್‌ಮೆಂಟ್, ಪುಣೆ ಇವರುಗಳ ಸಂಯೋಗದಿಂದ ದಿನಾಂಕ 01 ಹಾಗೂ 02ನೇ ಫೆಬ್ರವರಿ 2019ರಂದು ಕೇರಳದ ಕೃಷಿ ವಿಶ್ವವಿದ್ಯಾಲಯದ ಸಹಕಾರ ಹಾಗೂ ಬ್ಯಾಂಕಿಂಗ್ ಅಧ್ಯಯನ ವಿಭಾಗದಲ್ಲಿ 34 ರಾಷ್ಟ್ರೀಯ ವಿಚಾರಣಾಗೋಷ್ಠಿ ಆಯೋಜಿಸಲಾಗಿತ್ತು.

ರಾಷ್ಟ್ರೀಯ ವಿಚಾರಗೊಷ್ಠಿಯನ್ನು ಡಾ॥ ಆರ್ ಚಂದ್ರಬಾಬು, ಮಾನ್ಯ ಕುಲಪತಿಗಳು, ಕೇರಳ ಕೃಷಿ ವಿಶ್ವವಿದ್ಯಾಲಯ ತ್ರಿಶೂರ ಇವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಡಾ॥ ಟಿ.ಎನ್.ಪ್ರಕಾಶ ಕಮ್ಮಾರೆಡ್ಡಿ, ಅಧ್ಯಕ್ಷರು ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಹಾಗೂ ಭಾರತೀಯ ಸಹಕಾರ ಅಧ್ಯಯನ ಸಂಸ್ಥೆ, ಪುಣೆ ಇದರ ಅಧ್ಯಕ್ಷರಾದ ಶ್ರೀ ಜಿ.ಎಚ್.ಅಮಿನ್ ವೈಕುಂಠ ಮೆಹತಾ ನ್ಯಾಶನಲ್ ಇನಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮೆನೆಜ್‌ಮೆಂಟ್, ಪುಣೆ ಕಾರ್ಯದರ್ಶಿಗಳಾದ ಪ್ರೊ॥ ಅನೀಲ ಕರಂಜೆಕರ ಹಾಗೂ ಸಹಕಾರ ಬ್ಯಾಂಕಿಂಗ್ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ॥ ಪಿ ಶಹಿನಾ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಈ ಎರಡು ದಿನಗಳ ವಿಚಾರಗೋಷ್ಠಿಯಲ್ಲಿ 25ಕ್ಕೂ ಹೆಚ್ಚು "ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಸಹಕಾರ ಸಂಸ್ಥೆಗಳ ಪಾತ್ರದ" ಕುರಿತು ವಿಷಯಗಳನ್ನು ಮಂಡನೆಯಾದವು. ಸಹಕಾರ ಕ್ಷೇತ್ರ ಕಟ್ಟುವ ಮೂಲಕ ರೈತರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಂಶೋಧಕರು, ನಿವೃತ ಸಹಕಾರ ಇಲಾಖೆಯ ಅಧಿಕಾರಿಗಳು ಸಹಕಾರ / ಕೃಷಿ ಕ್ಷೇತ್ರದ ಅಧ್ಯಯನದಲ್ಲಿ ತೊಡಗಿಕೊಂಡರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಸಹಕಾರ ಕ್ಷೇತ್ರವನ್ನು ಬಲಪಡಿಸಿದರೆ ರೈತರ ಆದಾಯವನ್ನು ದ್ವಿಗುಣ ಸಾಧ್ಯವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಇಂದಿನ ವಿಚಾರಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್. ಪಾಟೀಲ್, ಶ್ರೀ ಎ.ಆರ್. ಪ್ರಸನ್ನ ಕುಮಾರ, ಶ್ರೀ ಎಮ್.ಜಿ. ಪಾಟೀಲ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಸಿಬ್ಬಂದಿಗಳಾದ ಶ್ರೀ ಗುರುಪ್ರಸಾದ, ಶ್ರೀ ವೀರಶೆಟ್ಟಿ ಭಾಗವಹಿಸಿದರು.

ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ನಿರ್ದೇಶಕರಾದ ಶ್ರೀ ಎಮ್.ಜಿ. ಪಾಟೀಲ್ ಅವರು ರೈತರ ಆದಾಯ ದ್ವಿಗುಣ ಮಾಡುವಲ್ಲಿ ಸಹಕಾರಿಗಳ ಪಾತ್ರ ಮಹತ್ವವಾಗಿದೆ. ಸಹಕಾರಿಗಳು ರೈತರಿಗೆ ಸಕಾಲದಲ್ಲಿ ಸಾಲ ಸೌಲಭ್ಯಗಳನ್ನು ನೀಡಿ ರೈತರು ಬೆಳೆದ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆಯಲ್ಲಿ ಖರೀದಿಸಿದಾಗ ಮಾತ್ರ ರೈತ ತನ್ನ ಆದಾಯವನ್ನು ಗಳಿಸಬಹುದು. ಸರ್ಕಾರ ಇಂದು ರೈತರಿಗೆ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ ರೈತರ ನೆರವಿಗೆ ಅನೇಕ ಕಾರ್ಯಕ್ರಮಗಳನ್ನು ನಬಾರ್ಡ ಸಂಸ್ಥೆಯ ಮೂಲಕ ರಾಷ್ಟ್ರದಲ್ಲಿ ಅನುಷ್ಠಾನಗೊಳಿಸಲಾಗಿದೆ. ಆದರೂ ಸಹ ಕೃಷಿ ಕ್ಷೇತ್ರದಲ್ಲಿ ಬೆಳವಣಿಗೆ ಮಂದಗತಿಯಲ್ಲಿ ಸಾಗಿದೆ ಎಂದು ನುಡಿದರು.



ಜನರಿಗೆ ಕೃಷಿ ಒಂದು ಲಾಭದಾಯಕ ಕ್ಷೇತ್ರ ಎಂಬುವದನ್ನು ನಾವು ಇಂದು ಸಾಧಿಸಿ ತೋರಿಸುವ ಜವಾಬ್ದಾರಿ ಇಂದಿನ ಸಂಶೋಧಕರ ವಿಜ್ಞಾನಿಗಳ ಮೇಲಿದೆ ಎಂದು ತಿಳಿಸಿದರು. ಸಹಕಾರಿಗಳು ಈ ನಿಟ್ಟಿನಲ್ಲಿ ಕಾರ್ಯಪ್ರವರ್ತರಾಗುವುದು ಅವಶ್ಯಕ ಎಂದರು.

ಮಾನ್ಯ ನಿರ್ದೇಶಕರಾದ ಶ್ರೀ ಎ.ಆರ್. ಪ್ರಸನ್ನಕುಮಾರ ಅವರು ವಿಚಾರಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಸಹಕಾರಿಗಳು ಇಂದು ಪ್ರತಿಯೊಂದು ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದೆ, ಆದರೆ ಸರ್ಕಾರವು ತನ್ನ ಅಧಿಕವಾದ ಹಸ್ತಕ್ಷೇಪದಿಂದ ಸದಸ್ಯರುಗಳಿಗೆ ಹೆಚ್ಚಿನ ಸೇವೆಯನ್ನು ನೀಡಲು ವಿಫಲವಾಗತೊಡಗಿವೆ ಅದಕ್ಕಾಗಿ ಸಹಕಾರಿಗಳಿಗೆ ಮುಕ್ತ ಹಾಗೂ ಸ್ವತಂತ್ರವಾಗಿರಬೇಕು. ಸರ್ಕಾರಗಳು ಸಹಕಾರಿಗಳಿಗೆ ಪ್ರೋತ್ಸಹ ನೀಡುವುದು ಅವಶ್ಯಕ ಎಂದರು.

ವಿಚಾರಗೋಷ್ಠಿಯಲ್ಲಿ ರೈತರ ಆದಾಯವನ್ನು ದ್ವಿಗುಣಗೊಳಿಸುವಲ್ಲಿ ಸಹಕಾರಿಗಳ ಪಾತ್ರ, ಸ್ವ-ಸಹಾಯ ಸಂಘಗಳ ಪಾತ್ರ, ರೈತರ ಉತ್ಪಾದಕ ಸಂಘಗಳ ಪಾತ್ರ, ಸಹಕಾರ ಮಾರುಕಟ್ಟೆಯ ಪಾತ್ರಗಳ ಕುರಿತು ಪ್ರಬಂಧಗಳನ್ನು ಮಂಡಿಸಲಾಯಿತು.

ಇದೇ ಸಂದರ್ಭದಲ್ಲಿ ಇಂಡಿಯನ್ ಸೋಸೈಟಿ ಫಾರ್ ಸ್ಟಡಿಸ್ ಇನ್ ಕೋ-ಆಪರೇಶನ್ ಪುಣೆ ಇದರ ವಾರ್ಷಿಕ ಸಾಮಾನ್ಯ ಸಭೆಯನ್ನು ಜರುಗಿತ್ತು. ಈ ಸಭೆಯಲ್ಲಿ ನಿರ್ದೇಶಕರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಪಾಲಗೊಂಡಿದ್ದರು.

ವಿಚಾರಗೋಷ್ಠಿಯ ಚರ್ಚೆಯಲ್ಲಿ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಆರೋಗ್ಯದಾಯಕ ಚರ್ಚೆಗಳು ಹಾಗೂ ಅವುಗಳಿಗೆ ಪರಿಹಾರ ಕಂಡುಕೊಳ್ಳುವ ವೇದಿಕೆ ಇದಾಗಿತ್ತು. ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಸಹಕಾರಿಗಳ ಪಾತ್ರ ಮಹತ್ವದಾಗಿದೆ ಎಂಬುದರ ಬಗ್ಗೆ ಪುನರ್ ಮನನ ಮಾಡಲಾಯಿತು.

## ಆದಾಯ ತೆರಿಗೆ ಮತ್ತು ಜಿ.ಎಸ್.ಟಿ ಹಾಗೂ ಬಡ್ಡಿಯೇತರ ಆದಾಯ ಮೂಲಗಳ ತರಬೇತಿ ಕಾರ್ಯಕ್ರಮ



**ದಾವಣಗೆರೆ :** ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ನಡೆದ ಆದಾಯ ತೆರಿಗೆ ಮತ್ತು ಜಿ.ಎಸ್.ಟಿ ಹಾಗೂ ಬಡ್ಡಿಯೇತರ ಆದಾಯ ಮೂಲಗಳ ತರಬೇತಿ ಕಾರ್ಯಕ್ರಮವನ್ನು 44 ಜನ ಹುತಾತ್ಮ ಸಿ.ಆರ್.ಪಿ.ಎಫ್ ಯೋಧರಿಗೆ ಗೌರವ ನಮನಗಳನ್ನು ಸಲ್ಲಿಸುವುದರ ಮೂಲಕ ಪ್ರಾರಂಭಿಸಲಾಯಿತು.

ಸದರಿ ತರಬೇತಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ನಂಜನಗೌಡರವರು ಉದ್ಘಾಟಿಸಿದರು, ಮುಖ್ಯ ಅತಿಥಿಯಾಗಿ ಕರ್ನಾಟಕದ ಹೆಸರಾಂತ ಬಟ್ಟೆ ಷೋರಂ ಆದ ಬಿ.ಎಸ್ ಚೆನ್ನಬಸಪ್ಪ & ಸನ್ಸ್ ನ ಮಾಲೀಕರು ಹಾಗೂ ದಿ ದಾವಣಗೆರೆ ಅರ್ಬನ್ ಕೋ-ಅಪರೇಟಿವ್ ಬ್ಯಾಂಕ್ ನ ಅಧ್ಯಕ್ಷರಾದ ಶ್ರೀ ಬಿ.ಸಿ. ಉಮಾಪತಿರವರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಿ.ವಿ ರವೀಂದ್ರನಾಥರವರು, ಶ್ರೀ ಯು ಪ್ರಸನ್ನರವರು ಆಗಮಿಸಿದ್ದರು. ಬೆಂಗಳೂರು ಪ್ರಾಂತದ ಕಾನೂನು ಅಧಿಕಾರಿಯಾದ ಸಂಜಯ್ ಕೋರಟಕರ್ ರವರು, ಜಿಲ್ಲಾ ಸಂಯೋಜಕರಾದ ನಟರಾಜರವರು ಉಪಸ್ಥಿತರಿದ್ದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 65 ಪ್ರತಿನಿಧಿಗಳು ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿಗಳು ತಮಗೆ ನೀಡಿರುವ ಅಧಿಕಾರವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಬೇಕು - ಶ್ರೀ ತಿಪ್ಪೇಸ್ವಾಮಿ, ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ



**ಶಿವಮೊಗ್ಗ :** ಇಂದು ದಿನಾಂಕ : 26-2-2019 ರಂದು ಚಾಣಕ್ಯ ಸಭಾಂಗಣ, ಮಥುರಾ ಪ್ಯಾರಡೈಸ್, ಶಿವಮೊಗ್ಗದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವತಿಯಿಂದ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗೆ ಹಮ್ಮಿಕೊಂಡಿರುವ ದಾವಾ ದಾಖಲಾತಿ ಹಾಗೂ ವಸೂಲಾತಿ ಪ್ರಕ್ರಿಯೆ ಮತ್ತು ಆಡಳಿತ ಮಂಡಳಿ ಸಭೆಗಳ ಕುರಿತು ತರಬೇತಿಯ ಕಾರ್ಯಾಗಾರವನ್ನು ಶಿವಮೊಗ್ಗ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ತಿಪ್ಪೇಸ್ವಾಮಿಯವರು ಉದ್ಘಾಟಿಸಿ ಮಾತನಾಡುತ್ತ ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಕಾಯ್ದೆಯಲ್ಲಿ ಆಡಳಿತಾತ್ಮಕ ಸ್ವಾತಂತ್ರ ನೀಡಿದೆ. ಆದ್ದರಿಂದ ಆಡಳಿತ ಮಂಡಲಿ ಸದಸ್ಯರು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು. ಜವಾಬ್ದಾರಿಯುತ ಸದಸ್ಯರು ಇದ್ದಾಗ ಸೌಹಾರ್ದ ಚಳುವಳಿ ಯಶಸ್ಸು ಗಳಿಸಲು ಸಾಧ್ಯ. ಅದರಂತೆ ಕಾಯ್ದೆಯಲ್ಲಿ ಸಹಕಾರ ಇಲಾಖೆಗೂ ಸಹ ಕೆಲವು ಅಧಿಕಾರಗಳನ್ನು ನೀಡಿದ್ದು, ಸಹಕಾರಿಗಳಿಗೆ ನೀಡಿರುವ ಸ್ವಾತಂತ್ರ್ಯ ದುರುಪಯೋಗವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸಹಕಾರ ಇಲಾಖೆಗೆ ಇದೆ ಎಂದು ಅಭಿಪ್ರಾಯಪಟ್ಟರು.

ಪತ್ತಿನ ಸಹಕಾರಿಗಳ ಪ್ರಮುಖ ಚಟುವಟಿಕೆ ಸಾಲ ನೀಡಿಕೆ ಆಗಿದ್ದು, ವಸೂಲಾತಿ ಸರಿಯಾಗಿ ಆಗುತ್ತಿಲ್ಲದಿದ್ದಲ್ಲಿ, ಕಾಯ್ದೆಯಡಿ ವಸೂಲಾತಿಗಾಗಿ ನಿಬಂಧಕರ ನ್ಯಾಯಾಲಯದಲ್ಲಿ ವ್ಯಾಜ್ಯ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಸಮರ್ಪಕ ದಾಖಲಾತಿಗಳು ಅಗತ್ಯ. ಈ ಕುರಿತು ತರಬೇತಿ ಆಯೋಜಿಸಿರುವುದು ಸಂತಸದ ವಿಷಯ. ಎಲ್ಲಾ ಸಹಕಾರಿಗಳು ಇದರ ಸದುಪಯೋಗ ಪಡೆಯಬೇಕು ಎಂದು ತಿಳಿಸಿದರು.

"ಪುಲ್ವಾಮ ದಾಳಿಯಲ್ಲಿ ವೀರಮರಣವನ್ನು ಅಪ್ಪಿದ ಭಾರತೀಯ ಸೈನಿಕರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು ಮತ್ತು ಪಾಕ್ ಆಕ್ರಮಿತ ಕಾಶ್ಮೀರಲ್ಲಿದಲ್ಲಿ ಉಗ್ರರ ಅಡಗು ತಾಣದ ಮೇಲೆ ವಾಯು ದಾಳಿಗೆ ಹರ್ಷ ವ್ಯಕ್ತಪಡಿಸಿ ಭಾರತ ಮಾತೆಗೆ ಪುಷ್ಪಾಚರಣೆ ಮಾಡಲಾಯಿತು."

ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲೆಯ ನಿರ್ದೇಶಕರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು ಮತ್ತು ಸಹಕಾರ ರತ್ನ ಪುರಸ್ಕೃತರಾದ ಶ್ರೀ ವಿಶ್ವನಾಥ ಹಿರೇಮಠ ಮತ್ತು ನಿವೃತ್ತ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಎಸ್.ಎಸ್.ಕಟಗೇರಿ ಅವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ಮೊದಲಿಗೆ ಶ್ರೀಮತಿ ಸುಮಿತ್ರರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಶ್ರೀ ನಾರಾಯಣ ಹೆಗಡೆ ಹಾಗೂ ನಿರೂಪಣೆಯನ್ನು ಶಶಿಕುಮಾರ ಎಸ್ ಅಚ್ಚುಕಟ್ಟಾಗಿ ನಿರ್ವಹಿಸಿದ್ದರು. ಕಾರ್ಯಕ್ರಮದಲ್ಲಿ ಶಿವಮೊಗ್ಗ ಜಿಲ್ಲೆಯ 54 ಸೌಹಾರ್ದ ಸಹಕಾರಿಗಳಿಂದ 115 ಸಹಕಾರಿಗಳು ಭಾಗವಹಿಸಿ ತರಬೇತಿಯ ಲಾಭ ಪಡೆದುಕೊಂಡರು.

## ಆಡಳಿತ ಪರಿಣಿತಿ ತರಬೇತಿ - ಯಾದಗಿರಿ

**ಯಾದಗಿರಿ** : ದಿನಾಂಕ : 27.02.2019ರಂದು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗು ನಿರ್ದೇಶಕರುಗಳಿಗೆ ಆಡಳಿತ ಪರಿಣಿತಿ ತರಬೇತಿಯನ್ನು ಶಹಾಪುರದ ಮೋಟಗಿ ರೆಸಿಡೇನ್ಸಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವೈ.ಟಿ ಪಾಟೀಲ ರವರು ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಸಂಜೀವ ಮಹಾಜನ ರವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ 32 ಸೌಹಾರ್ದ ಸಹಕಾರಿಗಳಿಂದ 75 ಸಹಕಾರಿಗಳು ಭಾಗವಹಿಸಿದರು.



## ಆದಾಯ ತೆರಿಗೆ, ಸರಕು ಮತ್ತು ಸೇವಾ ತೆರಿಗೆ ತರಬೇತಿ ಕಾರ್ಯಕ್ರಮ

**ಬೆಂಗಳೂರು** : ದಿನಾಂಕ : 28.02.2019ರ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ದೇವೇಗೌಡ ಪೆಟ್ರೋಲ್ ಬಂಕ್ ಎದುರು) ಪದ್ಮನಾಭನಗರ, ಬೆಂಗಳೂರು ಇಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "GST And Income Tax" ಹಾಗೂ "ಬಡ್ಡಿಯೇತರ ಆದಾಯ ಮೂಲಗಳು" ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆ ಹಾಗೂ ಅಧ್ಯಕ್ಷತೆಯನ್ನು ಸಹಕಾರಿಯ ನಿರ್ದೇಶಕರಾದ ಶ್ರೀ ಗುಂಡುರಾವ್‌ರವರು ವಹಿಸಿದ್ದರು, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಧುಕರ ಹೆಗಡೆರವರು ಆಗಮಿಸಿದ್ದರು, ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ನಾರಾಯಣ ಹೆಗಡೆರವರು ಉಪಸ್ಥಿತರಿದ್ದರು, ತರಬೇತಿಯಲ್ಲಿ ಒಟ್ಟು 122 ಸೌಹಾರ್ದ ಸಹಕಾರಿಗಳಿಂದ 130 ಪ್ರತಿನಿಧಿಗಳು ಭಾಗವಹಿಸಿದ್ದರು.





**ತುಮಕೂರು** : ದಿನಾಂಕ : 27.02.2019 ಸೆಕ್ರೆಡ್ ಹಾರ್ಟ್ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಸಭಾಂಗಣ, ಕೋತಿತೋಪು, ಹೊರಪೇಟೆ ಮುಖ್ಯರಸ್ತೆ, ಅಮಾನಿಕೆರೆಯ ಹತ್ತಿರ, ತುಮಕೂರು ಇಲ್ಲಿ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "GST And Income Tax" ಹಾಗೂ "ದಾವಾದಾಖಲಾತಿ" ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ತರಬೇತಿಯನ್ನು ಸೌಹಾರ್ದ ಸಂಯೋಜಕರಾದ ಶ್ರೀ ರವಿಕುಮಾರ್‌ರವರು ನಡೆಸಿಕೊಟ್ಟರು, ತರಬೇತಿಯ ಉದ್ಘಾಟನೆ ಹಾಗೂ ಅಧ್ಯಕ್ಷತೆಯನ್ನು ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಜಿ. ಗಂಗಾಧರಯ್ಯರವರು ವಹಿಸಿದ್ದರು, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ನಾಗರಾಜಯ್ಯರವರು ಹಾಗೂ ಮಧುಕರ ಹೆಗಡೆರವರು ಆಗಮಿಸಿದ್ದರು, ಬೆಂಗಳೂರು ಪ್ರಾಂತದ ಕಾನೂನು ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ರವರು ಉಪಸ್ಥಿತರಿದ್ದರು, ತರಬೇತಿಯಲ್ಲಿ ಒಟ್ಟು 64 ಸೌಹಾರ್ದ ಸಹಕಾರಿಗಳಿಂದ 83 ಪ್ರತಿನಿಧಿಗಳು ಭಾಗವಹಿಸಿದ್ದರು.



### ಭೇಟಿ

**ಬೆಂಗಳೂರು** : ಮುಖ್ಯಮಂತ್ರಿಗಳ ಉಪ ಕಾರ್ಯದರ್ಶಿಯಾದ ಶ್ರೀ ಅಶ್ವಿನ್ ಡಿ. ಗೌಡ, ಐಆರ್‌ಎಸ್ ರವರನ್ನು ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ. ಪಾಟೀಲ ಭೇಟಿ ಮಾಡಿ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ ಆಧ್ಯಾದೇಶವನ್ನು ಹೊರಡಿಸಲು ಕ್ರಮವಿಡುವಂತೆ ಮನವಿ ಮಾಡಿದರು.

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ
ನಿರ್ಮಾಣ ಭವನ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
www.souharda.coop, Ph: 080-23378375-80, E-mail: souharda@souharda.coop

ಕ್ರ.ಸಂ.1 : ಸಂಸ/ಡಿಸಿಬಿಎಂ/ ಕ.ತರಗತಿ-01/229/2018-19 ದಿನಾಂಕ : 26.02.2019

ಮಾನ್ಯರೇ,

**ವಿಷಯ : ಸಹಕಾರ ಮತ್ತು ಬ್ಯಾಂಕಿಂಗ ಮೆನೆಜಮೆಂಟ್ ಡಿಪ್ಲೋಮಾ – ದೂರ ಶಿಕ್ಷಣ, ಕೋರ್ಸ್‌ನ ಸಂಪರ್ಕ ವರ್ಗ (Contact Class) ಹಾಗೂ ಅಂತಿಮ ಪರೀಕ್ಷೆಯ ದಿನಾಂಕಗಳನ್ನು ನಿಗಧಿಪಡಿಸಿರುವ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, "ಸಹಕಾರ ಮತ್ತು ಬ್ಯಾಂಕಿಂಗ ಮೆನೆಜಮೆಂಟ್ ಡಿಪ್ಲೋಮಾ" – ದೂರ ಶಿಕ್ಷಣ, ಕೋರ್ಸ್‌ಗೆ ಸಂಬಂಧಿಸಿದಂತೆ ಈಗಾಗಲೇ "ಪ್ರವೇಶ ಪತ್ರ"ವನ್ನು ಕಳುಹಿಸಿದೆ. ಡಿಪ್ಲೋಮಾ ತರಗತಿಯ ಸಂಪರ್ಕ ವರ್ಗ (Contact Class)ಗಳ ಮತ್ತು ಅಂತಿಮ ಪರೀಕ್ಷೆಯ ದಿನಾಂಕಗಳು ಈ ಕೆಳಕಂಡಂತೆ ಇರುತ್ತವೆ. ಶಿಬಿರಾರ್ಥಿಗಳು ಸಂಪರ್ಕ ವರ್ಗ (Contact Class)ಗಳಿಗೆ ಹಾಗೂ ಪರೀಕ್ಷಾ ಸಮಯದಲ್ಲಿ ಪ್ರವೇಶ ಪತ್ರವನ್ನು ಕಡ್ಡಾಯವಾಗಿ ಹಾಜರು ಪಡಿಸಲು ಸೂಚಿಸಿದೆ.

1. 6 ವಿಷಯಗಳ 6 ಅಧ್ಯಯನ ಸಾಹಿತ್ಯವನ್ನು ಕಳುಹಿಸಲಾಗುತ್ತದೆ.
2. ಪ್ರತೀ ಕಂಟ್ಯಾಕ್ಟ್ ಕ್ಲಾಸಿಗೆ 20 ಅಂಕಗಳಂತೆ, 3 ಕಂಟ್ಯಾಕ್ಟ್ ಕ್ಲಾಸುಗಳಿಗೆ ಒಟ್ಟು 60 ಅಂಕಗಳನ್ನು ಹಾಗು ಒಂದು ಸಹಕಾರಿ ಸಂಸ್ಥೆಯ ಕೇಸ್‌ಸ್ಟಡಿಗೆ 40 ಅಂಕಗಳು ಇರುತ್ತದೆ.
3. ಒಟ್ಟು 6 ವಿಷಯಗಳಿಗೆ 100ರಂತೆ, 600 ಅಂಕಗಳು ಹಾಗೂ 1 ಕೇಸ್ ಸ್ಟಡಿಗೆ ಹಾಗೂ 3 ಸಂಪರ್ಕ ವರ್ಗ (Contact Class) ಸೇರಿದಂತೆ 100 ಅಂಕಗಳು. ಒಟ್ಟಾರೆ 700 ಅಂಕಗಳಿಗೆ ಉತ್ತೀರ್ಣರಾಗಲು ಶೇಕಡಾ 40 ಅಂಕಗಳನ್ನು ಕಡ್ಡಾಯವಾಗಿ ಪಡೆಯಬೇಕು. ಪರೀಕ್ಷೆಯ ನಂತರ ಮೌಲ್ಯಮಾಪನ ಮಾಡಲಾಗುವುದು ನಂತರ ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.
4. ಕಂಟ್ಯಾಕ್ಟ್ ಕ್ಲಾಸುಗಳನ್ನು ಹಾಗೂ ಪರೀಕ್ಷೆಗಳನ್ನು ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (RICM) ಬೆಂಗಳೂರು ಇವರ ಸಹಯೋಗದಲ್ಲಿ ನಡೆಸಲಾಗುವುದು.
5. ಸಂಪರ್ಕ ವರ್ಗ (Contact Class)ಗಳು ನಿಗಧಿಪಡಿಸಿದ ದಿನಗಳಂದು ಪ್ರತಿದಿನ ಬೆಳ್ಳಿಗೆ 10ರಿಂದ ಸಂಜೆ 05.30ರ ವರೆಗೆ.

**ಸಂಪರ್ಕ ವರ್ಗ (Contact Class) ಗಳ ದಿನಾಂಕಗಳು ಮತ್ತು ಸ್ಥಳಗಳ ವಿವರಗಳು**

| ಕ್ರ.ಸಂ. | ಮಾಹೆ | ದಿನಾಂಕ | ಸ್ಥಳ | |
|---|---|---|---|---|
| 1 | ಮಾರ್ಚ್ | 09.03.2019 | ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (RICM) ಬೆಂಗಳೂರು. | ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ, ಬೆಳಗಾವಿ |
| | | 10.03.2019 | ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (RICM) ಬೆಂಗಳೂರು. | ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.ಬೆಲ್ಲದ ಬಾಗೇವಾಡಿ, ಬೆಳಗಾವಿ |
| 2 | ಏಪ್ರಿಲ್ | 27.04.2019 | ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (RICM) ಬೆಂಗಳೂರು. | ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.ಬೆಲ್ಲದ ಬಾಗೇವಾಡಿ, ಬೆಳಗಾವಿ |
| | | 28.04.2019 | ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (RICM) ಬೆಂಗಳೂರು. | ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.ಬೆಲ್ಲದ ಬಾಗೇವಾಡಿ, ಬೆಳಗಾವಿ |
| 3 | ಜೂನ್ | 08.06.2019 | ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (RICM) ಬೆಂಗಳೂರು. | ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.ಬೆಲ್ಲದ ಬಾಗೇವಾಡಿ, ಬೆಳಗಾವಿ |
| | | 09.06.2019 | ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (RICM) ಬೆಂಗಳೂರು. | ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.ಬೆಲ್ಲದ ಬಾಗೇವಾಡಿ, ಬೆಳಗಾವಿ |

**ಸೂಚನೆ :**

1. ಅಂತಿಮ ಪರೀಕ್ಷೆಯ ದಿನಾಂಕಗಳು : 21, 22, ಮತ್ತು 23ನೇ ಜೂನ್ 2019.
2. ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (RICM) ಬೆಂಗಳೂರಿನಲ್ಲಿ, ಬೆಂಗಳೂರು, ಮೈಸೂರು ಹಾಗೂ ಕಲಬುರ್ಗಿ ವಿಭಾಗದ ಅಭ್ಯರ್ಥಿಗಳು ಭಾಗವಹಿಸುವುದು.
3. ಬೆಳಗಾವಿ ವಿಭಾಗದ ಅಭ್ಯರ್ಥಿಗಳಿಗೆ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನ ಸಭಾಂಗಣದಲ್ಲಿ ವ್ಯವಸ್ಥೆ ಮಾಡಲಾಗಿದೆ.
4. ಬೆಳಗಾವಿ ವಿಭಾಗದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ, (ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನ ಅಭ್ಯರ್ಥಿಗಳನ್ನು ಹೊರತುಪಡಿಸಿ) ವಸತಿ ವ್ಯವಸ್ಥೆಯನ್ನು ಚಿಕ್ಕೋಡಿಯಲ್ಲಿ ಮಾಡಲಾಗುವುದು. (ಬೆಳಗಾವಿಯಿಂದ ಬೆಲ್ಲದ ಬಾಗೇವಾಡಿಗೆ 65ಕಿ.ಮೀ ದೂರವಿದೆ. ಬೆಳಗಾವಿಯಿಂದ ನೇರ ಬಸ್ಸಿನ ವ್ಯವಸ್ಥೆಯಿದೆ. ಬೆಲ್ಲದ ಬಾಗೇವಾಡಿಯಿಂದ ಚಿಕ್ಕೋಡಿ 13ಕಿ.ಮೀ. ಇದೆ. ಇಲ್ಲಿಂದ ಸಾಕಷ್ಟು ಬಸ್ಸಿನ ಸೌಕರ್ಯವಿದೆ.)



## ಶಾಖೆ ಉದ್ಘಾಟನೆ

**ಉತ್ತರಕನ್ನಡ** : ವೀ – ಕೇರ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿಮಿಟೆಡ್ ಇದರ ನೂತನ ಕುಮಟಾ ಶಾಖೆಯ ಉದ್ಘಾಟನೆಯನ್ನು ಕಾರವಾರ ಧರ್ಮ ಪ್ರಾಂತ್ಯದ ಬಿಷಪ ಡಾ॥ ಡೇರಕ ಪರ್ನಾಂಡೀಸ್ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಸರಸ್ವತಿರವರು ಹಾಗೂ ಶಾಖಾ ವ್ಯವಸ್ಥಾಪಕರಾದ ಶ್ರೀ ಕೇವಿನ ಎಮ. ನೊರೊನ್ಹಾರವರು ಉಪಸ್ಥಿತರಿದ್ದರು.

---



**ಉಡುಪಿ** : ದಿನಾಂಕ : 11.02.2019ರಂದು ಶ್ರೀ ಮೂಕಾಂಬಿಕಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಇದರ ನೂತನ ಉಡುಪಿ ಶಾಖೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಹಾಗೂ ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟ ನಿ., ಇದರ ಅಧ್ಯಕ್ಷರಾದ ಶ್ರೀ ಮಂಜುನಾಥ ಹಾಗೂ ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಒಡಿಯೂರು ಇದರ ಅಧ್ಯಕ್ಷರಾದ ಹಾಗೂ ಶಾಖಾ ಕೊಠಡಿಯ ಮಾಲೀಕರಾಗಿರುವ ಶ್ರೀ ಸುರೇಶರೈರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಕಾರ್ಯದರ್ಶಿ ಭುವನೇಶ್ ಪ್ರಭು, ಸಹಕಾರಿಯ ಸದಸ್ಯರು, ಆಮಂತ್ರಿತ ಅತಿಥಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

---



## ಉದ್ಘಾಟನಾ ಕಾರ್ಯಕ್ರಮ

**ಚಿತ್ರದುರ್ಗ** : ಮೊಳಕಾಲ್ಮುರಿನ ವಿಶ್ವಾಸ ಸೌಹಾರ್ದ ಸಹಕಾರಿಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಹಾಗೂ ಪೂಜಾ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್. ಲಕ್ಷ್ಮಿಕಾಂತರೆಡ್ಡಿಯವರು ಭಾಗವಹಿಸಿ ಶುಭಕೋರಿದರು. ಕಾರ್ಯಕ್ರಮದಲ್ಲಿ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಂಯೋಜಕರಾದ ನಟರಾಜರವರು, ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್‌ನ ನಿರ್ದೇಶಕರಾದ ರಘುರಾಮ ರೆಡ್ಡಿಯವರು ಹಾಗೂ ಸದರಿ ಸಹಕಾರಿಯ ನಿರ್ದೇಶಕ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನಿಂದ ಕಾನೂನು ಅರಿವು ಮಾಹಿತಿ ಕಾರ್ಯಗಾರ

**ಪುತ್ತೂರು :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಹ ಸಂಸ್ಥೆ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಕೊಳ್ತಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಪಾಲ್ತಾಡಿ ಶಾಖೆಯ ನವೋದಯ ಸಭಾಂಗಣದಲ್ಲಿ 'ಕಾನೂನು ಅರಿವು–ಮಹಿಳಾ ದೌರ್ಜನ್ಯ' ಎಂಬ ವಿಷಯದ ಕುರಿತು ಮಾಹಿತಿ ಕಾರ್ಯಗಾರ ದಿನಾಂಕ : 08.02.2019ರಂದು ನಡೆಯಿತು.

ನವೋದಯ ಸ್ವಸಹಾಯ ಗುಂಪುಗಳ ಒಕ್ಕೂಟ ಪಾಲ್ತಾಡಿ ಇದರ ಅಧ್ಯಕ್ಷರಾದ ಶ್ರೀಮತಿ ವಸಂತಿಗೌಡ ಕಾರ್ಯಕ್ರಮವನ್ನು ಉದ್ಘಾಟಿಸಿ ಕಾರ್ಯಕ್ರಮಕ್ಕೆ ಶುಭಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.) ಪುತ್ತೂರು ಇದರ ಟ್ರಸ್ಟಿಯಾದ ಶ್ರೀ ಪುರುಷೋತ್ತಮ ಪ್ರಭು, ಮಹಿಳೆಯರು ಅಬಲರಲ್ಲ ಸಬಲರು, ಮೊದಲು ಕೇವಲ ಮನೆಕೆಲಸಕ್ಕೆ ಮಾತ್ರ ಸೀಮಿತವಾಗಿದ್ದ ಮಹಿಳೆಯರು ಪ್ರಸ್ತುತ



ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ತಮ್ಮ ಛಾಪನ್ನು ಮೂಡಿಸಿ ಸಮಾಜದ ಸರ್ವತೋಮುಖ ಅಭಿವೃದ್ಧಿಯಲ್ಲಿ ವಿಶಿಷ್ಟ ಕೊಡುಗೆಯನ್ನು ನೀಡುತ್ತಿದ್ದಾರೆ ಎಂದು ಹೇಳಿ ಕಾನೂನಿನ ಜ್ಞಾನವನ್ನು ಹೊಂದಿ ಯಶಸ್ವೀ ಜೀವನವನ್ನು ನಡೆಸುವಂತಾಗಲಿ ಎಂದು ಶುಭಹಾರೈಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಪುತ್ತೂರಿನ ವಕೀಲರ ಸಂಘದ ಮಾಜಿ ಅಧ್ಯಕ್ಷರೂ ಖ್ಯಾತ ನ್ಯಾಯವಾದಿಗಳೂ ಆದ ಶ್ರೀ ಭಾಸ್ಕರ ಕೋಡಿಂಬಾಳರವರು ಮಹಿಳಾ ದೌರ್ಜನ್ಯ ಎಂಬ ವಿಷಯದ ಕುರಿತು ಮಾಹಿತಿ ಕಾರ್ಯಾಗಾರವನ್ನು ನಡೆಸಿಕೊಟ್ಟರು.

# ಮಾದಕ ದ್ರವ್ಯ ಮುಕ್ತ ಯುವ ಸಮಾಜ ಜಾಗೃತಿ ಕಾರ್ಯಕ್ರಮ

**ವಿಟ್ಲ :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ದರ್ಬೆ ಪುತ್ತೂರು, ಇದರ ಸಹಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ವಿಟ್ಲ ಪ್ರಥಮದರ್ಜೆ ಕಾಲೇಜಿನಲ್ಲಿ ಯುವ ಸಬಲೀಕರಣ ಯೋಜನೆಯಡಿ "ಮಾದಕ ದ್ರವ್ಯ ಮುಕ್ತ ಯುವ ಸಮಾಜ" ಎಂಬ ವಿಷಯದ ಕುರಿತು ಜಾಗೃತಿ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಛಾಲಾವಲೀಕಾರ್ ರಾಜಾಪುರ ಸಾರಸ್ವತ ಸೇವಾ ಸಂಘ (ರಿ.) ವಿಟ್ಲ ಇದರ ಅಧ್ಯಕ್ಷರಾದ ಶ್ರೀ ವಾಸುದೇವ ಪ್ರಭು ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭಹಾರೈಸಿದರು. ಸರಕಾರಿ ಪ್ರಥಮ ದರ್ಜೆ ಕಾಲೇಜು ವಿಟ್ಲ ಇದರ ಪ್ರಾಂಶುಪಾಲರಾದ




ಡಾ. ಶಂಕರ ಪಾಟಾಳಿ ವೈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ವಿದ್ಯಾರ್ಥಿಗಳು ಆದರ್ಶ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ದಿನನಿತ್ಯದ ಜೀವನದಲ್ಲಿ ಅನುಸರಿಸಬೇಕಾದ ವಿಷಯಗಳ ಕುರಿತು ಮಾತನಾಡಿದರು.

# ಆರ್ಥಿಕ ಸಾಕ್ಷರತೆ ಮಾಹಿತಿ ಕಾರ್ಯಾಗಾರ

**ವಿರಾಜಪೇಟೆ :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ದರ್ಬೆ ಪುತ್ತೂರು, ಇದರ ಸಹಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಶ್ರೀ ವಿನಾಯಕ ಭಜನಾ ಮಂಡಳಿ ರಾಮನಗರ ಇವರ ಸಹಭಾಗಿತ್ವದಲ್ಲಿ ವಿರಾಜಪೇಟೆಯ ರಾಮನಗರದ ಶ್ರೀ ಅಯ್ಯಪ್ಪ ಸಭಾಭವನದಲ್ಲಿ ಮಹಿಳಾ ಸಬಲೀಕರಣ ಮತ್ತು ಕೌಶಲ್ಯಾಬಿವೃದ್ಧಿ ಯೋಜನೆಯಡಿ "ಆರ್ಥಿಕ ಸಾಕ್ಷರತೆ" ಎಂಬ ವಿಷಯದ ಕುರಿತು ಮಾಹಿತಿ ಕಾರ್ಯಗಾರ ನಡೆಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿ ಮಾತನಾಡಿದ ನಿವೃತ್ತ ಶಿಕ್ಷಕರಾದ ಶ್ರೀ ಜಯೇಂದ್ರ ಬಿ.ಎಸ್. ಮಾನವನ ಸರ್ವತೋಮುಖ ಅಭಿವೃದ್ಧಿಯಲ್ಲಿ ಆರ್ಥಿಕ ಶಿಸ್ತು ಅತ್ಯಂತ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತದೆ. ಬಾಲ್ಯದಿಂದಲೇ ಮಕ್ಕಳಿಂದ ದಿನನಿತ್ಯದ ಲೆಕ್ಕಾಚಾರಗಳನ್ನು ಮಾಡಿಸುತ್ತಾ ಅವರಲ್ಲಿ ಆರ್ಥಿಕತೆಯ ಅರಿವನ್ನು ಮೂಡಿಸಬೇಕು. ನಾವು ಸಂಪಾದಿಸಿದ ಹಣದಲ್ಲಿ ಸ್ವಲ್ಪ ಸ್ವಲ್ಪವೇ ಉಳಿಸುತ್ತಾ ಬಂದರೆ ಮುಂದೆ ನಮಗೇ ಆಶ್ಚರ್ಯ ಆಗುವಷ್ಟು ನಾವು ಉಳಿಸಬಹುದು. ಹಾಗೂ ಗಳಿಕೆ–ಉಳಿಕೆ–ಬಳಕೆ ಇವುಗಳ ಕಡೆಗೆ ಗಮನಕೊಟ್ಟು



ದುಂದುವೆಚ್ಚಗಳಿಗೆ ಕಡಿವಾಣ ಹಾಕಿ ಉತ್ತಮ ಜೀವನವನ್ನು ನಡೆಸುವಲ್ಲಿ ಪ್ರಯತ್ನಶೀಲರಾಗಬೇಕು ಎಂದು ಹೇಳಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಬಿಪಿನ್ ಚಂದ್ರರವರು ಟ್ರಸ್ಟ್‌ನ ವತಿಯಿಂದ ಹಮ್ಮಿಕೊಂಡು ಬರುತ್ತಿರುವ ವಿವಿಧ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಹಾಗೂ ಪ್ರಸ್ತುತ ನಡೆಯುತ್ತಿರುವ ಆರ್ಥಿಕ ಸಾಕ್ಷರತೆ ಕಾರ್ಯಕ್ರಮದ ಸಂಪೂರ್ಣ ಸದುಪಯೋಗವನ್ನು ಪಡೆದುಕೊಂಡು ವಿಷಯಗಳನ್ನು

ಮನದಟ್ಟು ಮಾಡಿಕೊಂಡು ದಿನನಿತ್ಯದ ಜೀವನದಲ್ಲಿ ಅವುಗಳನ್ನು ಅನುಷ್ಠಾನಕ್ಕೆ ತಂದು ಕಾರ್ಯ ಕ್ರಮದ ಅರ್ಥಪೂರ್ಣತೆಗೆ ಭವಿಷ್ಯದಲ್ಲಿ ಸಾಕ್ಷಿಯಾಗಿ ನಿಲ್ಲುವಂತಾಗಬೇಕು. ಅಂತೆಯೇ ಮುಂದಿನ ದಿನಗಳಲ್ಲಿ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳುವ ಕಾರ್ಯಚಟುವಟಿಕೆಗಳಿಗೆ ತಮ್ಮ ನಿರಂತರ ಸಹಕಾರ ನಮ್ಮೊಂದಿಗಿರಲಿ ಎಂದು ಹೇಳಿ ಕಾರ್ಯಕ್ರಮಕ್ಕೆ ಶುಭಹಾರೈಸಿದರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ವಿರಾಜಪೇಟೆಯ ಶಾಖಾ ವ್ಯವಸ್ಥಾಪಕರಾದ ಶ್ರೀ ರಾಜೇಶ್ ಬಿ.ಎಸ್. ಸಹಕಾರಿಯಲ್ಲಿರುವ ಎಲ್ಲಾ ಆರ್ಥಿಕ ಸೇವಾ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಹಾಗೂ ಕೇಂದ್ರ ಸರಕಾರದ ವಿವಿಧ ಆರ್ಥಿಕ ಯೋಜನೆಗಳ ಕುರಿತು ಮಾಹಿತಿ ನೀಡಿದರು ಮತ್ತು ಅವುಗಳ ಸಂಪೂರ್ಣ ಸದುಪಯೋಗ ಪಡೆದುಕೊಳ್ಳುವಂತೆ ಹೇಳಿದರು. ಹಾಗೂ ದಿನನಿತ್ಯದ ಜೀವನದಲ್ಲಿ ಆರ್ಥಿಕ ಶಿಸ್ತನ್ನು ಹೊಂದಿ ಯಶಸ್ವೀ ಜೀವನವನ್ನು ನಡೆಸುವಂತಾಗಬೇಕೆಂದು ಹೇಳಿದರು. ನಂತರ ಸಭಿಕರ ಪ್ರಶ್ನೆಗಳಿಗೆ ಉತ್ತರಿಸಿದರು. ಮುಖ್ಯ ಅಥಿತಿಗಳಾಗಿದ್ದ ಶ್ರೀ ವಿನಾಯಕ ಭಜನಾ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ವೀಣಾ ಜಗತ್ತಿನಲ್ಲಿ ಶಾಂತಿ ಸೌಹಾರ್ದತೆ ನೆಲೆಸುವಲ್ಲಿ ನಾವೂ ಶ್ರಮಿಸಬೇಕು, ಸತ್ಯಧರ್ಮದಲ್ಲಿ ನಡೆಯುವುದರೊಂದಿಗೆ ಆದರ್ಶ ಜೀವನವನ್ನು ನಡೆಸಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪುದುಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ರಕ್ಷಿತ್ ಬಿ ವಿ ತಮ್ಮ ಅಧ್ಯಕ್ಷೀಯ ಭಾಷಣ ಮಾಡುತ್ತಾ ಇಂದಿನ ಈ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನೆರವೇರಿದೆ. ಮುಂದಿನ ದಿನಗಳಲ್ಲೂ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವಂತಾಗಲಿ, ಅದಕ್ಕೆ ನಮ್ಮ ಸಂಪೂರ್ಣ ಸಹಕಾರವಿದೆ ಎಂದು ಹೇಳಿದರು. ಶ್ರೀಮತಿ ಜ್ಯೋತಿ ಶ್ರೀಕಾಂತ್ ಪ್ರಾರ್ಥಿಸಿದರು, ಶ್ರೀಮತಿ ಮಲ್ಲಿಕ ಸ್ವಾಗತಿಸಿ, ಶ್ರೀಮತಿ ಸಂಗೀತ ವಂದಿಸಿದರು. ಶ್ರೀಮತಿ ಸುಮನ ಕಾರ್ಯಕ್ರಮ ನಿರೂಪಿಸಿದರು.

## ಎಸ್.ಎಸ್.ಎಲ್.ಸಿ. ಮಕ್ಕಳಿಗೆ ಪರೀಕ್ಷಾ ಸಿದ್ಧತಾ ಕಾರ್ಯಾಗಾರ

**ಶಿವಮೊಗ್ಗ :** ದಿನಾಂಕ : 12.02.2019ರ ಮಂಗಳವಾರ ಶ್ರೀ ಶೃಂಗೇರಿ ಶಂಕರಮಠ ಸಿದ್ದಾಪುರ, ಇಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಿದ್ದಾಪುರ, ಪ್ರಾಥಮಿಕ ಶಾಲಾ ಶಿಕ್ಷಕರ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ, ಸಿದ್ದಾಪುರ ಶಾಖೆ. ಶ್ರೀ ರಮಾನಂದ ಶಿಕ್ಷಣ ಸಂಸ್ಥೆ(ರಿ.), ವಿದ್ಯಾಗಿರಿ, ಕತ್ರಗಾಲ ಸಿದ್ದಾಪುರ. ಶ್ರೀ ವಿವೇಕಾನಂದ ವಿದ್ಯಾವರ್ಧಕ ಸಂಘ (ರಿ.), ಪುತ್ತೂರ. ಶ್ರೀ ಶೃಂಗೇರಿ ಶಂಕರಮಠ, ಸಿದ್ದಾಪುರ ಇವರ ಆಶ್ರಯದಲ್ಲಿ ಸಿದ್ದಾಪುರ ತಾಲ್ಲೂಕಿನ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಒಂದು ದಿನದ ಪರೀಕ್ಷಾ ಪೂರ್ವಸಿದ್ಧತಾ ಕಾರ್ಯಾಗಾರ ಏರ್ಪಡಿಸಲಾಗಿತ್ತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶ್ರೀ ಸಿ.ಎಸ್. ನಾಯ್ಕ (ಡಿ.ಡಿ.ಪಿ.ಐ) ಉಪನಿರ್ದೇಶಕರು ಶಿರಸಿ, ಇವರು ಮಕ್ಕಳಿಗೆ, ಕಾರ್ಯಕ್ರಮದ ಸದುಪಯೋಗಪಡಿಸಿಕೊಂಡು ತಾಲ್ಲೂಕಿನ ಎಸ್.ಎಸ್.ಎಲ್.ಸಿ. ಫಲಿತಾಂಶ ಉತ್ತಮ ಪಡಿಸುವಂತೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ವಿ.ಆರ್.ನಾಯ್ಕ ಇವರು ಉಪಸ್ಥಿತರಿದ್ದರು.





ಗದಗ : ಪಂಚಕ್ಷರಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳವಣಿಕಿ ಇದರ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಂಗಪ್ಪಯ್ಯ ದೇಶಪಾಂಡೆರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.



ಗುರುಮಲ್ಲೇಶ್ವರ ವಿವಿದೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ಹಾಗೂ ಜೆ.ಎಸ್.ಎಸ್. ಆಸ್ಪತ್ರೆ, ಮೈಸೂರು ಇವರ ಸಹಭಾಗಿತ್ವದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ – ನಂಜನಗೂಡು.



## ವೀರ ಮರಣ ಹೊಂದಿದ ಸೈನಿಕರಿಗೆ ನುಡಿನಮನ

**ರಾಯಚೂರು :** ಮಾನವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ ನಿ ಇದರ ಮುಖ್ಯ ಕಛೇರಿಯಲ್ಲಿ ಬ್ಯಾಂಕಿನ ಎಲ್ಲಾ ಸಿಬ್ಬಂದಿ ವರ್ಗದವರು ಸೇರಿ, ಜಮ್ಮು ಕಾಶ್ಮೀರದ ಪುಲ್ವಾಮ ಬಳಿ ಉಗ್ರರ ಆತ್ಮಹುತಿ ದಾಳಿಯಲ್ಲಿ ವೀರ ಮರಣ ಹೊಂದಿದ ಸೈನಿಕರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಮೇಣದ ಬತ್ತಿ ಬೆಳಗಿಸುವ ಮುಖಾಂತರ ದೇವರಲ್ಲಿ ಪ್ರಾರ್ಥನೆ ಮಾಡಿ ಮೌನಾಚರಣೆಯನ್ನು ಮಾಡಲಾಯಿತು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ



ಶ್ರೀ ಮಾರುತಿರಾವ್ ಬಿ. ಕಲಾಲ
ಅಧ್ಯಕ್ಷರು



ಶ್ರೀ ಬಸವರಾಜ ಎಸ್. ಅಕ್ಕಿವಳ್ಳಿ
ಉಪಾಧ್ಯಕ್ಷರು

ಸಹಕಾರಿಯ ನಿರ್ದೇಶಕರುಗಳಾಗಿ ಶ್ರೀ ಪರಶುರಾಮ ವಾಯ್ ಗುಡಗುಡಿ, ಶ್ರೀ ವಿನೋದ ವಾಯ್ ಅಚಲಕರ್, ಶ್ರೀ ಪರಶುರಾಮ ಹೆಚ್ ಶಿಂಧೆ, ಶ್ರೀ ದೇವೇಂದ್ರಪ್ಪ ಎಮ್. ಮೂಡ್ಲಿಯವರ, ಶ್ರೀ ಶಿವಯೋಗಪ್ಪ ಜಿ. ಬೆಲ್ಲದ, ಶ್ರೀ ಚಂದ್ರಕಾಂತ ಹೆಚ್. ರಾಯ್ಕರ, ಶ್ರೀ ನಾರಾಯಣ ಡಿ. ಅಥಣಿ, ಶ್ರೀ ತೀರ್ಥರಾಜ ಶಿವನಂಜಿಗೌಡ, ಶ್ರೀ ದಿನೇಶ ಆರ್. ಕಲಾಲ, ಶ್ರೀಮತಿ ಇಂದುಮತಿ ಜೋಶಿ, ಶ್ರೀಮತಿ ರೇಣುಕಾ ಟಿ. ಬಂಕಾಪರ, ಶ್ರೀಮತಿ ಅನ್ನಪೂರ್ಣ ಎಸ್ ದ್ಯಾವಣ್ಣನವರ, ಆಯ್ಕೆಯಾಗಿರುತ್ತಾರೆ.

### ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.,ಕೊಪ್ಪ



ಶ್ರೀ ಎಸ್.ಎನ್. ವಿಶ್ವನಾಥ್
ಅಧ್ಯಕ್ಷರು



ಶ್ರೀ ಎ.ಎಸ್. ವೆಂಕಟರಮಣ
ಉಪಾಧ್ಯಕ್ಷರು

### ಸದಲಗಾ ಅರ್ಬನ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಳಗಾವಿ.



ಶ್ರೀ ಪ್ರಕಾಶ ಜಿನಗೌಡಾ ಪಾಟೀಲ
ಅಧ್ಯಕ್ಷರು



ಶ್ರೀ ಉದಯಕುಮಾರ ಬಾಬಾಸಾಬ ಪಾಟೀಲ
ಉಪಾಧ್ಯಕ್ಷರು

### ಶ್ರೀ ಮಾತಾ ವಿವಿದೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ಪಾವಗಡ



ಶ್ರೀ ಕೆ.ಎಸ್ ರಾಮಮೂರ್ತಿ ಬಿನ್ ಕಾಂತಯ್ಯ ಶೆಟ್ಟಿ, ಅಧ್ಯಕ್ಷರು



ಶ್ರೀ ಪಿ. ಅಜಿತ್ ರಾಜಯ್ಯ ಬಿನ್ ಅನಂತರಾಜಯ್ಯ, ಉಪಾಧ್ಯಕ್ಷರು

### ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ನಿ., ವಿಜಯಪುರ



ಶ್ರೀ ವಾಸುದೇವ ಸುಬ್ಬಯ್ಯ ಹೆಬಸೂರ
ಅಧ್ಯಕ್ಷರು



ಶ್ರೀ ವಜ್ರಕುಮಾರಜೀವರಾಜ ಪ್ರಥಮಶೆಟ್ಟಿ ಉಪಾಧ್ಯಕ್ಷರು

### ಆದರ್ಶ ಸೌಹಾರ್ದ ಪತ್ತಿನ ಸಹಕಾರಿ ನಿ., ಚಿತ್ರದುರ್ಗ



ಶ್ರೀ ಡಿ.ಆರ್ ತಿಪ್ಪೇಸ್ವಾಮಿ
ಅಧ್ಯಕ್ಷರು



ಶ್ರೀ ಚಂದ್ರಶೇಖರ
ಉಪಾಧ್ಯಕ್ಷರು

### ಶ್ರೀ ಶಿವಾಜಿ ಸೌಹಾರ್ದ ಸಹಕಾರಿ ನಿ., ತುಮಕೂರು.



ಶ್ರೀ ಟಿ.ಎಲ್ ಸುರೇಶ್ ರಾವ್
ಅಧ್ಯಕ್ಷರು



ಶ್ರೀ ಟಿ. ಆರ್ ಮದನ್ ಮೋಹನ್‌ರಾವ್
ಉಪಾಧ್ಯಕ್ಷರು

## ಪರಿವರ್ತನ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ನಿ., ಮೈಸೂರು



ಶ್ರೀಮತಿ ಲಲಿತ ಕೆ.ಎಸ್.
ಅಧ್ಯಕ್ಷರು



ಶ್ರೀಮತಿ ಲಕ್ಷ್ಮೀ
ಉಪಾಧ್ಯಕ್ಷರು

## ಶ್ರೀ ಸುಪಾರ್ಶ್ವನಾಥ ಜೈನ್ ಮೈನಾರಿಟಿ ಸೌಹಾರ್ದ ಸಹಕಾರಿ ನಿ., ದಾವಣಗೆರೆ



ಶ್ರೀ ಮಹಾವೀರ್ ಎಸ್.ಜಿ.
ಅಧ್ಯಕ್ಷರು



ಶ್ರೀ ಪ್ರಕಾಶ್ ಎ.
ಉಪಾಧ್ಯಕ್ಷರು

## ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಕೊಪ್ಪ



ಶ್ರೀ ವೈ.ಎಸ್. ಸುಬ್ರಹ್ಮಣ್ಯ
ಅಧ್ಯಕ್ಷರು



ಶ್ರೀ ಎಲ್.ಡಿ. ನವೀನ್
ಉಪಾಧ್ಯಕ್ಷರು

ಸಹಕಾರಿಯ ನಿರ್ದೇಶಕರುಗಳಾಗಿ ಶ್ರೀ ಜಿ.ಎಸ್.ಮಹಾಬಲ, ಶ್ರೀ ಹೆಚ್. ಕೆ. ಭಾಸ್ಕರ ರಾವ್, ಶ್ರೀ ಹೆಚ್.ಎ. ಕೃಷ್ಣಮೂರ್ತಿ, ಶ್ರೀ ಜಿ.ಎಸ್.ನಟರಾಜ್, ಶ್ರೀ ಕೆ.ಪಿ.ಕೃಷ್ಣಾನಂದ, ಶ್ರೀ ಅಣ್ಣಪ್ಪ, ಶ್ರೀ ರಾಮಣ್ಣ ಭಂಡಾರಿ, ಶ್ರೀ ವೈ.ಎಸ್, ಕೃಷ್ಣಮೂರ್ತಿ, ಶ್ರೀ ಬಿ.ಪಿ.ಸದಾನಂದ, ಶ್ರೀ ಕೆ.ಎಸ್. ಸುಬ್ರಹ್ಮಣ್ಯ, ಶ್ರೀ ಎಸ್. ಉಪೇಂದ್ರ ರಾವ್, ಶ್ರೀಮತಿ ಗೀತಾಸುದರ್ಶನ್ ಮತ್ತು ಶ್ರೀಮತಿ ಗಾಯತ್ರಿ ಶ್ರೀಗಣೇಶ ಆಯ್ಕೆಯಾಗಿರುತ್ತಾರೆ.

## ಜ್ಯೋತಿಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ



ಶ್ರೀ ನಾರಾಯಣ್ಣಪ್ಪ ಎಂ. ಪತ್ತಾರ್
ಅಧ್ಯಕ್ಷರು



ಶ್ರೀ ಸೈಯದ್ ಮಹಮೂದ
ಉಪಾಧ್ಯಕ್ಷರು

## ಹರಪನಹಳ್ಳಿ ತಾಲ್ಲೂಕು ಸೌಹಾರ್ದ ಸಹಕಾರಿ ನಿ, ಹರಪನಹಳ್ಳಿ



ಶ್ರೀ ಅಂಬ್ಲಿ ಮಂಜುನಾಥ
**ಅಧ್ಯಕ್ಷರು**

ಹರಪನಹಳ್ಳಿ ತಾಲ್ಲೂಕು ಸೌಹಾರ್ದ ಸಹಕಾರಿ ನಿ, ಕೊಟ್ಟೂರು ರಸ್ತೆ, ಹರಪನಹಳ್ಳಿ. ಇದರ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಮುಂದಿನ 5 ವರ್ಷಗಳಿಗೆ ದಿನಾಂಕ : 27.02.2019ರಂದು ನಡೆದ ಸಭೆಯಲ್ಲಿ ಶ್ರೀ ಅಂಬ್ಲಿ ಮಂಜುನಾಥ ರವರನ್ನು ಅವಿರೋಧವಾಗಿ ಪುನರ್ ಆಯ್ಕೆಯಾಗಿರುತ್ತಾರೆ, ಹಾಗೂ ನಿರ್ದೇಶಕರುಗಳಾಗಿ ಶ್ರೀ ಎಂ. ಗುರುನಾಥ, ಶ್ರೀ ಟಿ. ಗೌತಮ್, ಶ್ರೀ ಡಿ.ಕಾಂತಿಲಾಲ್, ಶ್ರೀ ಟಿ.ಸುಮೇರಿಮಲ್, ಶ್ರೀ ಹೆಚ್.ಇ. ದೇವದಾಸ್, ಶ್ರೀ ಎ.ಮಂಜುನಾಥ, ಶ್ರೀ ಸೋಮನಾಥ ಪಾಟೇಲ್, ಶ್ರೀಮತಿ ಪುಷ್ಪವತಿ ಇವರುಗಳು ಅವಿರೋಧವಾಗಿ ಆಯ್ಕೆಗೊಂಡಿರುತ್ತಾರೆ. ಚುನಾವಣಾಧಿಕಾರಿಯಾಗಿ ಶ್ರೀ ಎಲ್. ತಿಪ್ಪೇಸ್ವಾಮಿ, ಸಹಕಾರಿ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ, ಇವರು ನೆರವೇರಿಸಿರುತ್ತಾರೆ.

## ವಜ್ರಗಿರಿ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಮೈಸೂರು



ಶ್ರೀ ಎ.ಎಮ್ ಗೌಡರ
**ಅಧ್ಯಕ್ಷರು**



ಶ್ರೀ ಎ.ಕೆ. ಕಿರೇಸೂರ
**ಉಪಾಧ್ಯಕ್ಷರು**

**ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ವಿಶೇಷ ಲೇಖನಗಳು**

## ಮಹಿಳಾ ಲೆಫ್ಟಿನೆಂಟ್ ಕಮಾಂಡರ್‌ಗಳ ಸಾಧನೆ, 40 ಸಾವಿರ ಕಿ.ಮೀ. ಪ್ರಯಾಣ, 254 ದಿನ ನೀರಿನಲ್ಲಿ ತೇಲಿದರು

# ಸಮುದ್ರ ಸುತ್ತಿ ಬಂದ 'ತಾರಿಣಿ'ಯರು

**ಬೆಂಗಳೂರು :** ಬೆಚ್ಚಿ ಬೀಳಿಸುವ ಸಮುದ್ರ ಅಲೆಗಳ ಆರ್ಭಟ. ಅಷ್ಟದಿಕ್ಕುಗಳಲ್ಲೂ ನೀರು, ಚಿತ್ರ–ವಿಚಿತ್ರ ಜಲಚರಗಳ ದರ್ಶನ. ಮೈ ಹೆಪ್ಪುಗಟ್ಟಿಸುವ ತಾಪಮಾನ. ದಡವೇ ಕಾಣದ ಮಾರ್ಗದಲ್ಲಿ 254 ದಿನಗಳ ಸುದೀರ್ಘ ಸಮುದ್ರಯಾನ. ವಾಪಸ್‌ಭೂಮಿ ನೋಡುತ್ತೇವೆಯೇ ಎಂಬ ಅನುಮಾನ...

ಭಾರತದ ನೌಕಾದಳದ 'ತಾರಿಣಿ' ಹಡಗಿನಲ್ಲಿ ಸಮುದ್ರಯಾನ ಮಾಡಿ ಬಂದಿರುವ ಮಹಿಳಾ ಲೆಫ್ಟಿನೆಂಟ್ ಕಮಾಂಡರ್‌ಗಳಾದ ಉತ್ತರಾ ಖಂಡದ ವರ್ತಿಕಾ ಜೋಷಿ, ಹಿಮಾಚಲ ಪ್ರದೇಶದ ಪ್ರತಿಭಾ ಜಮ್ವಾಲ್, ಹೈದರಾಬಾದ್‌ನ ಐಶ್ವರ್ಯ ಬಡ್ಡಪತಿ, ವಿಶಾಖಪಟ್ಟಣದ ಪಿ. ಸ್ವಾತಿ, ಮಣಿಪುರದ ಎಸ್.ವಿಜಯಾ ದೇವಿ ಹಾಗೂ ಡೆಹ್ರಾಡೂನ್‌ನ ಪಾಯಲ್ ಗುಪ್ತಾ ಅವರ ಪ್ರಯಾಣದ ಅನುಭವವಿದು.

ದೇಶದ ಇತಿಹಾಸದಲ್ಲೇ ಮಹಿಳಾ ಲೆಫ್ಟಿನೆಂಟ್ ಕಮಾಂಡರ್‌ಗಳು, ಮೊದಲ ಬಾರಿಗೆ ಸ್ವತಂತ್ರವಾಗಿ ಹಡಗಿನಲ್ಲಿ ಸಮುದ್ರ ಸುತ್ತಿ ಬಂದಿದ್ದಾರೆ. ಏಷ್ಯಾದಲ್ಲೇ ಮೊದಲ ಪ್ರಯತ್ನ ಇದಾಗಿದ್ದು, ಆರೂ ಮಂದಿ ಮಹಿಳೆಯರು ಇದೀಗ ಜಗತ್ತಿನ ಗಮನ ಸೆಳೆಯುತ್ತಿದ್ದಾರೆ.

ಇತ್ತೀಚೆಗೆ ಬೆಂಗಳೂರಿನ ನಡೆದ ಸಂವಾದದಲ್ಲಿ ಪಾಲ್ಗೊಂಡಿದ್ದ ಲೆಫ್ಟಿನೆಂಟ್ ಕಮಾಂಡರ್‌ಗಳು ಸಮುದ್ರಯಾನದ ಅನುಭವ ಹಂಚಿಕೊಂಡರು. 'ನಾವು ಬದುಕಿ ಬಂದಿದ್ದೇ ಪವಾಡ. ಅದಕ್ಕಾಗಿ ಆ ದೇವರಿಗೆ ನಮಸ್ಕರಿಸುತ್ತೇನೆ' ಎನ್ನುತ್ತಲೇ ಮಾತು ಆರಂಭಿಸಿದ ತಂಡದ ನಾಯಕಿ ವರ್ತಿಕಾ ಜೋಷಿ, 'ಸಾವಿನ ಜೊತೆಗಿನ ಹೋರಾಟ ನಮ್ಮದಾಗಿತ್ತು. ಒಂದೊಂದು ನಿಮಿಷಕ್ಕೂ ಒಂದೊಂದು ಸವಾಲು. ಪ್ರಯಾಣ ಮುಗಿಸಿ ವಾಪಸ್‌ಭೂಮಿ ಮೇಲೆ ಕಾಲಿಟ್ಟಾಗ ಮರುಜನ್ಮ ಬಂದಂತಾಯಿತು' ಎಂದು ಹೇಳಿದರು.

'ಆರು ಮಂದಿಯೂ ಬೇರೆ ಬೇರೆ ರಾಜ್ಯಗಳಿಂದ ಬಂದವರು.







ನೌಕಾದಳದಲ್ಲೇ ಕುಟುಂಬದ ಸದಸ್ಯರಂತಾದೆವು. ನೌಕಾದಳಕ್ಕೆ ಮಹಿಳೆಯರು ಹೆಚ್ಚು ಸೇರುವುದಿಲ್ಲವೆಂಬ ಮಾತಿದೆ. ಅದು ಈಗ ಸುಳ್ಳಾಗಿದೆ. 'ತಾರಿಣಿ' ಯಾತ್ರೆ ಮಾಡುವ ಮೂಲಕ, ಮಹಿಳೆಯರಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲವೆಂಬುದನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದೇವೆ' ಎಂದು ಹೆಮ್ಮೆಯಿಂದ ತಿಳಿಸಿದರು.

'ಹವಾಮಾನ ನಾವು ಅಂದುಕೊಂಡಂತೆ ಇರಲಿಲ್ಲ. ಸಾಕಷ್ಟು ತೊಂದರೆ ಉಂಟಾಯಿತು. ಕೆಲ ಆಪ್‌ಬಳಸಿಕೊಂಡು ಹವಾಮಾನದ ಬಗ್ಗೆ ತಿಳಿದುಕೊಳ್ಳುತ್ತಿದ್ದೆವು. ನಮ್ಮ ಹಡಗಿನ ಜಾಗ ಚಿಕ್ಕದು. ಆರು ಮಂದಿ ಎರಡು ಸರದಿಯಲ್ಲಿ ಹಡಗು ನಿರ್ವಹಣೆ ಮಾಡುತ್ತಿದ್ದೆವು. ಅವಘಡಗಳು ಸಂಭವಿಸುವ ಮುನ್ಸೂಚನೆ ಸಿಕ್ಕಾಗ ಒಟ್ಟಿಗೆ ಕೆಲಸ ಮಾಡಿದೆವು' ಎಂದು ಅನುಭವ ಹಂಚಿಕೊಂಡರು.

'ಹಡಗಿನಲ್ಲಿ 600 ಲೀಟರ್ ಕುಡಿಯುವ ನೀರು ಶೇಖರಿಸಲು ಮಾತ್ರ ಜಾಗವಿತ್ತು. ದಿನಸಿ ಹಾಗೂ ಇತರೆ ವಸ್ತುಗಳ ಸಂಗ್ರಹವೂ ಅಷ್ಟಕಷ್ಟೆ. ಹಸಿವು, ದಣಿವು, ಆಯಾಸ... ಎಲ್ಲವನ್ನೂ ಸಹಿಸಿಕೊಂಡು ಸಮುದ್ರಯಾನ ಪೂರ್ಣಗೊಳಿಸಿದೆವು ಎಂಬ ಹೆಮ್ಮೆ ನಮಗಿದೆ' ಎಂದು ವರ್ತಿಕಾ ವಿವರಿಸಿದರು.

'ಲಿಂಗ ತಾರತಮ್ಯ ಸಾಧನೆಗೆ ಅಡ್ಡಿಯಾಗುವುದಿಲ್ಲ. ನಮಗೆ ಸಮುದ್ರಯಾನದ ಗುರಿ ನಿಚ್ಚಳವಾಗಿತ್ತು. ನೌಕಾದಳಕ್ಕೆ ಸೇರಿದ ಮೇಲೆ ಗಂಡು–ಹೆಣ್ಣು ಎಂಬ ತಾರತಮ್ಯ ಇಲ್ಲ. ಎಲ್ಲರೂ ಎಲ್ಲ ಕೆಲಸ ಮಾಡಬೇಕು. ಇಂದು ನೌಕಾದಳದಲ್ಲೂ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿರುವುದು ಖುಷಿ ಸಂಗತಿ' ಎಂದು ಅವರು ಖುಷಿಪಟ್ಟರು.

**3 ವರ್ಷಗಳ ಕಠಿಣ ತರಬೇತಿ :** ತಂಡದ ಮತ್ತೊಬ್ಬ ಲೆಫ್ಟಿನೆಂಟ್ ಕಮಾಂಡರ್ ಪಿ.ಸ್ವಾತಿ, 'ನ್ಯಾಷನಲ್ ಜಿಯಾಗ್ರಫಿ ವಾಹಿನಿಯವರು ನೌಕಾದಳದ ಮುಖ್ಯಸ್ಥರನ್ನು ಭೇಟಿಯಾಗಿ 'ತಾರಿಣಿ' ಪ್ರಯಾಣದ ಬಗ್ಗೆ ಪ್ರಸ್ತಾಪಿಸಿದ್ದರು. ಅದಕ್ಕೆ ಒಪ್ಪಿದ್ದ




ಮುಖ್ಯಸ್ಥರು, ನಮ್ಮನ್ನು ಆಯ್ಕೆ ಮಾಡಿ 3 ವರ್ಷಗಳ ಸುದೀರ್ಘ ತರಬೇತಿ ನೀಡಿ ಪ್ರಯಾಣಕ್ಕೆ ಸಿದ್ಧಗೊಳಿಸಿದ್ದರು' ಎಂದು ಹೇಳಿದರು.

'ಕ್ಯಾಪ್ಟನ್ ದಿಲೀಪ್ ದೋಂಡೆ ಅವರು 2014ರಿಂದ 2017ರವರೆಗೆ ನಮಗೆ ತರಬೇತಿ ನೀಡಿದ್ದರು. ಬದುಕಿ ಬರುವುದು ಖಚಿತವಿಲ್ಲವೆಂದು ಹೇಳಿದ್ದರು. ನಾವೆಲ್ಲರೂ ಮಾನಸಿಕವಾಗಿ ಸಿದ್ಧರಾಗಿ ಪ್ರಯಾಣಕ್ಕೆ ಅಣಿಯಾಗಿದ್ದೆವು' ಎಂದು ಅವರು ಸ್ಮರಿಸಿದರು.

**ಗೋವಾದಿಂದ ಹೊರಟಿದ್ದ ಹಡಗು :** ಇನ್ನೊಬ್ಬ ಸದಸ್ಯೆ ಐಶ್ವರ್ಯ ಬಡ್ಡಪತಿ, 'ನಾವಿಕ ಸಾಗರ ಪರಿಕ್ರಮ' ಹೆಸರಿನಲ್ಲಿ ಈ ಸಮುದ್ರಯಾನದ ರೂಪುರೇಷೆ ಸಿದ್ಧಪಡಿಸಲಾಯಿತು. 2017ರ ಸೆ. 10ರಂದು ಗೋವಾದಿಂದ ಶುರುವಾದ ನಮ್ಮ ಪ್ರಯಾಣ 2018ರ ಮೇ 21ರಂದು ಮುಕ್ತಾಯವಾಯಿತು. ನಮ್ಮ ಯಾನದಲ್ಲಿ ನಾಲ್ಕು ಖಂಡಗಳು, ಮೂರು ಸಮುದ್ರಗಳ ಮೂಲಕ 21,600 ನಾಟಿಕಲ್ ಮೈಲ್‌ಗಳನ್ನು (40,003 ಕಿ.ಮೀ) ಪೂರೈಸಿದ್ದೇವೆ' ಎಂದು ತಿಳಿಸಿದರು.

'ಸಮುದ್ರಯಾನದ ಚಿತ್ರೀಕರಣವನ್ನು ನಾವೇ ಮಾಡಿದ್ದೇವೆ. ಕೆಲ ಸಂದರ್ಭದಲ್ಲಿ ವಾಹಿನಿಯವರು ಹೆಲಿಕಾಪ್ಟರ್‌ಗಳಲ್ಲಿ ಬಂದು ಶೂಟಿಂಗ್ ಮಾಡಿಕೊಂಡು ಹೋದರು. ಸಾಕ್ಷ್ಯಚಿತ್ರ ಅತ್ಯದ್ಭುತವಾಗಿ ಮೂಡಿಬಂದಿದೆ. ಅಂತರರಾಷ್ಟ್ರೀಯ ಮಹಿಳಾ ದಿನದಂದೇ ಅದು ಪ್ರದರ್ಶನಗೊಳ್ಳಲಿದೆ' ಎಂದು ಹೇಳಿದರು.

**ನೌಕಾದಳ ಸೇರಲು ಏನು ಮಾಡಬೇಕು? :** 'ನನಗೂ ನಿಮ್ಮಂತೆ ನೌಕಾದಳಕ್ಕೆ ಸೇರುವ ಆಸೆ ಇದೆ. ಹೇಗೆ ಸೇರುವುದು' ಎಂಬ ವಿದ್ಯಾರ್ಥಿನಿಯೊಬ್ಬರ ಪ್ರಶ್ನೆಗೆ ಉತ್ತರಿಸಿದ ಎಸ್.ವಿಜಯಾ ದೇವಿ, 'ನೌಕಾದಳದಲ್ಲಿ ಲಾಜಿಸ್ಟಿಕ್, ಶಿಕ್ಷಣ ಹಾಗೂ ತಾಂತ್ರಿಕ ಎಂಬ ಮೂರು ವಿಭಾಗಗಳಿವೆ. ಎಂಜಿನಿಯರಿಂಗ್, ಭಾಷಾ ವಿಷಯಗಳಲ್ಲಿ ಪದವಿ ಹಾಗೂ ತತ್ಸಮಾನ ವಿದ್ಯಾರ್ಹತೆಯುಳ್ಳವರು ನೌಕಾದಳ ಸೇರಬಹುದು' ಎಂದರು.

'ನೌಕಾದಳದ ಜಾಲತಾಣದಲ್ಲಿ ಹುದ್ದೆಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ನಿಮ್ಮ ವಿದ್ಯಾರ್ಹತೆಗೆ ತಕ್ಕಂತೆ ಹುದ್ದೆಗಳನ್ನು ಆಯ್ಕೆ ಮಾಡಿಕೊಂಡು ಅರ್ಜಿ ಸಲ್ಲಿಸಬಹುದು' ಎಂದರು. ಇಂದಿನ ಮಹಿಳೆಯರು, ಯಾವುದೇ ಕೆಲಸವಿರಲಿ ಹಾಗೂ ಸ್ಥಳವಿರಲಿ ಧೈರ್ಯದಿಂದ ಮುನ್ನುಗ್ಗಬೇಕು. ಯಶಸ್ಸು ತಾನಾಗಿಯೇ ಬರುತ್ತದೆ' ಎಂದು ಹೇಳಿದರು.

**'ತಾರಿಣಿ' ಸಾಕ್ಷ್ಯಚಿತ್ರ ಪ್ರಸಾರ :** ಈ ಪ್ರಯಾಣದ ಕ್ಷಣಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿದು 'ತಾರಿಣಿ' ಸಾಕ್ಷ್ಯಚಿತ್ರ ಸಿದ್ಧಪಡಿಸಲಾಗಿದೆ. ನ್ಯಾಷನಲ್ ಜಿಯಾಗ್ರಫಿಯಲ್ಲಿ ಮಾರ್ಚ್ 8 ರಂದು ರಾತ್ರಿ 9 ಗಂಟೆ ಪ್ರಸಾರವಾಗಲಿದೆ.



## ಅಮೃತ ಮಹೋತ್ಸವ

### ಶ್ರೀ ರಾವಸಾಹೇಬ ಅಣ್ಣಾಸಾಹೇಬ ಪಾಟೀಲ (ದಾದಾ)

ಶ್ರೀ ರಾವಸಾಹೇಬ ಅಣ್ಣಾಸಾಹೇಬ ಪಾಟೀಲ, ಸಹಕಾರ ರತ್ನ ಪುರಸ್ಕೃತರು, ಹಿರಿಯ ಸಹಕಾರಿಗಳು, ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೋರಗಾಂವ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರು ಇವರಿಗೆ 75ರ ಸಂಭ್ರಮ. ಇವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಶುಭಾಶಯಗಳನ್ನು ಕೋರಿದೆ.

ಶ್ರೀಯುತರಿಗೆ ದಕ್ಷಿಣಾ ಭಾರತ ಜೈನ ಸಭೆಯ ವತಿಯಿಂದ ಅಭಿನಂದನಾ ಕಾರ್ಯಕ್ರಮವು ದಿನಾಂಕ : 01.03.2019ರಂದು ಶ್ರೀ ಸಿದ್ಧೇಶ್ವರ ಮಂದಿರ ಮೈದಾನ, ಜಯಸಿಂಗಪೂರ ಕೋಲ್ಹಾಪೂರನಲ್ಲಿ ನಡೆಯಿತು. ಶ್ರೀಯುತರ ಅಪರ ಅಭಿಮಾನಿ ಬಳಗವು ಹಾಗೂ ಅನೇಕ ಗಣ್ಯರು, ಸಂಸದರು, ಶಾಸಕರು, ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ನಿರ್ದೇಶಕರಾದ ಗುರುನಾಥ ಜಾಂತಿಕರ, ಶ್ರೀ ವಿಶ್ವನಾಥ ಹಿರೇಮಠ, ಶ್ರೀ ಎಂ.ಬಿ. ಕಲಾಲ, ಶ್ರೀ ಸಂಜೀವ ಮಹಾಜನ, ಶ್ರೀ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಮುಂತಾದವರು ಭಾಗವಹಿಸಿ ಶುಭ ಕೋರಿದರು.



ಇದೇ ಸಂದರ್ಭದಲ್ಲಿ ಶ್ರೀಯುತ ರಾವಸಾಹೇಬ ಅಣ್ಣಾಸಾಹೇಬ ಪಾಟೀಲರವರಿಗೆ ದಕ್ಷಿಣಾ ಭಾರತದ ಜೈನ ಸಮಾಜದ ವತಿಯಿಂದ "ಸಮಾಜ ರತ್ನ" ಹಾಗೂ "ಶ್ರಾವಕ ರತ್ನ" ಬಿರುದು ನೀಡಿ ಸನ್ಮಾನಿಸಲಾಯಿತು.

# "ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ" ನಡೆದು ಬಂದದಾರಿ

ಪ್ರತಿ ವರ್ಷ ಮಾರ್ಚ್ 8ರಂದು ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಪ್ರಪಂಚದ ಹಲವು ದೇಶಗಳು ಆಚರಿಸುತ್ತವೆ. ಮತದಾನದ ಹಕ್ಕಿಗಾಗಿ ಮಹಿಳೆಯರು ನಡೆಸಿದ ಹೋರಾಟದ ಫಲವಾಗಿ 1902ರ ನಂತರ ಒಂದೊಂದೇ ದೇಶಗಳು ಮಹಿಳೆಯರಿಗೆ ಚುನಾಯಿಸುವ ಹಕ್ಕನ್ನು ನೀಡಿದವು. ಇಂಗ್ಲೆಂಡ್‌ನಲ್ಲಿ ನಡೆದ ಕೈಗಾರಿಕಾಕ್ರಾಂತಿಯ ನಂತರ ಕಡಿಮೆ ಕೂಲಿಗೆ ಸಿಗುವ ದೊಡ್ಡ ಸಂಖ್ಯೆಯ ಮಹಿಳಾ ಶ್ರಮವನ್ನು ಕೈಗಾರಿಕೆಗಳಿಗೆ ತೊಡಗಿಸಲಾಯಿತು. ಬಿಡಿ ಬಿಡಿಯಾಗಿದ್ದ ಮಹಿಳೆಯರು ಬಟ್ಟೆಗಿರಣಿಯಲ್ಲಿ, ಸಿಗರೇಟ್ ಸುತ್ತುವ ಕಾರ್ಖಾನೆಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ದುಡಿಮೆಯಲ್ಲಿ ತೊಡಗಿದರು.




ಮಾರ್ಚ್ 8 ಮಹಿಳಾ ಹೋರಾಟದ ಇತಿಹಾಸದಲ್ಲಿ ಒಂದು ಅವಿಸ್ಮರಣೀಯ ದಿನ. ದುಡಿತದ ಅವಧಿಯನ್ನು 10 ಗಂಟೆಗೆ ಸೀಮಿತಗೊಳಿಸಬೇಕು, ದುಡಿಮೆಗೆ ಪೂರಕವಾದ ವಾತಾವರಣ ಕಲ್ಪಿಸಬೇಕು, ಮತದಾನದ ಹಕ್ಕು ನೀಡಬೇಕು ಹೀಗೆ ಹಲವಾರು ಆರ್ಥಿಕ ಮತ್ತು ರಾಜಕೀಯ ಬೇಡಿಕೆಗಳನ್ನಿಟ್ಟುಕೊಂಡು ಮಾಲೀಕ ವರ್ಗದ ಅಮಾನವೀಯ ಶೋಷಣೆ ವಿರುದ್ಧ ಮಹಿಳೆಯರು ಬೀದಿಗಿಳಿದು ಹೋರಾಟ ಮಾಡಿದರು. ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಮಹಿಳೆಯರು ಅಮೇರಿಕಾದ ನ್ಯೂಯಾರ್ಕ್ ನಗರದ ರಟ್ಗೇರ್ ಚೌಕದಲ್ಲಿ ಮೆರವಣಿಗೆ ನಡೆಸಿ, ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಂಡರು. ಕಮ್ಯುನಿಸ್ಟ್ ನಾಯಕಿ ಕ್ಲಾರಾಜೆಟ್ಕಿನ್ ಈ ಹೋರಾಟದ ನೇತೃತ್ವ ವಹಿಸಿದ್ದರು.


ಕ್ಲಾರಾಜೆಟ್ಕಿನ್

1910ರಲ್ಲಿ ಕೋಪನ್ ಹೇಗನ್‌ನಲ್ಲಿ ನಡೆದ ಸೋಷಿಯಲಿಸ್ಟ್ ಮಹಿಳೆಯರ ಸಮಾವೇಶದಲ್ಲಿ 17 ದೇಶದ ಸುಮಾರು 100 ಮಹಿಳೆಯರು ಸೇರಿದ್ದರು. ಆ ಸಮಾವೇಶದಲ್ಲಿ ಕ್ಲಾರಾಜೆಟ್ಕಿನ್‌ರವರ ಪ್ರಸ್ತಾಪದಂತೆ ಮಾರ್ಚ್ 8ನ್ನು 'ದುಡಿಯುವ ಮಹಿಳೆಯರ ದಿನಾಚರಣೆ'ಯಾಗಿ ಆಚರಿಸುವ ತೀರ್ಮಾನ ಕೈಗೊಳ್ಳಲಾಯಿತು.

ಆ ನಂತರ ವಿಶ್ವಸಂಸ್ಥೆಯು 1975ರಲ್ಲಿ ಅಂತರ ರಾಷ್ಟ್ರೀಯ ದುಡಿವ ಮಹಿಳೆಯರ ದಿನಾಚರಣೆಯಿಂದ ದುಡಿವ ಪದವನ್ನು ತೆಗೆದು ಹಾಕಿ "ಅಂತರರಾಷ್ಟ್ರೀಯ ಮಹಿಳಾ ದಿನ"ವೆಂದು ಘೋಷಿಸಿತು. ಪ್ರತಿ ವರ್ಷವೂ ಒಂದೊಂದು ಧ್ಯೇಯ ವಾಕ್ಯದೊಂದಿಗೆ ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸುತ್ತಾ ಬರಲಾಗುತ್ತಿದೆ. ಹಿಂದಿನ ವರ್ಷದ ಅಂದರೆ 2018ರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಧ್ಯೇಯ ವಾಕ್ಯವು "ಗ್ರಾಮೀಣ ಮತ್ತು ನಗರ ಪ್ರದೇಶದ ಕಾರ್ಯಕರ್ತರುಗಳು ಮಹಿಳೆಯರ ಜೀವನವನ್ನು ಪರಿವರ್ತಿಸುವ ಸಮಯ ಇದಾಗಿದೆ" (Time is Now: Rural and urban activists transforming women's lives).

ಪ್ರಸ್ತುತ 2019ನೇ ಸಾಲಿನ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯಧ್ಯೇಯ ವಾಕ್ಯವು "ಸಮಾನವಾಗಿ ಯೋಚಿಸಿ, ಕೌಶಲ್ಯತೆಯನ್ನು ನಿರ್ಮಿಸಿ, ಬದಲಾವಣೆಗಾಗಿ ಆವಿಷ್ಕರಿಸಿ" (Think Equal, Build Smart, Innovate for Change). ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗಾಗಿ ಲಿಂಗ ಸಮಾನತೆಯನ್ನು ಸಾಧಿಸಲು ಹೃದಯಪೂರ್ವಕ ಪ್ರಯತ್ನಗಳನ್ನು ಮಹಿಳೆಯರು ಮತ್ತು ಹೆಣ್ಣುಮಕ್ಕಳಿಂದ ಆವಿಷ್ಕರಿಸುವಂತೆ ಮಾಡುವುದಾಗಿದೆ.




ಪ್ರಪಂಚದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ಸಾಮಾಜಿಕ ಆವಿಷ್ಕಾರಗಳ ಅವಶ್ಯಕತೆ ಇದ್ದು, ಈ ಕಾರ್ಯವು ಮಹಿಳೆಯರು ಮತ್ತು ಪುರುಷರು ಇಬ್ಬರಿಂದಲೂ ಆಗಬೇಕು ಮತ್ತು ಯಾರೊಬ್ಬರನ್ನು ಹಿಂದೆ ಬಿಡುವಂತಿಲ್ಲ. ನಗರ ಯೋಜನೆಗಳಿಂದ ಮಹಿಳೆಯರು ಮತ್ತು ಹೆಣ್ಣು ಮಕ್ಕಳನ್ನು ತರಗತಿ ಕೊಠಡಿಗಳಿಗೆ ತೆಗೆದುಕೊಳ್ಳುವುದರ ಮೂಲಕ ಇ–ಕಲಿಕೆ ವೇದಿಕೆಯಿಂದ ಸಮುದಾಯದ ಸುರಕ್ಷತೆಗೆ ಕೇಂದ್ರೀಕರಿಸುವುದು, ಕೈಗೆಟುಕುವ ಮತ್ತು ಗುಣಾತ್ಮಕ ಶಿಶುಪಾಲನಾ ಕೇಂದ್ರಗಳು ಮತ್ತು ಮಹಿಳೆಯರಿಂದ ತಂತ್ರಜ್ಞಾನ, ಆವಿಷ್ಕಾರದ ಮೂಲಕ ಲಿಂಗ ಸಮಾನತೆಯನ್ನು 2030ರ ಗಡಿಯೊಳಗೆ ಸಾಧಿಸಲು ಸ್ಪರ್ಧೆಯನ್ನು ತೆಗೆದುಕೊಳ್ಳಬಹುದು.

# ಮಹಿಳಾ ಸಬಲೀಕರಣ ಏಕೆ? ಹೇಗೆ?

ಪಾಲರಾಜ್ ಎ.

**ಪೀಠಿಕೆ : ಭಾರತೀಯ ಮಹಿಳೆ ತನ್ನ ಬಾಲ್ಯದಲ್ಲಿನ ಮತ್ತು ಮದುವೆಗೆ ಮುಂಚೆ ಇದ್ದ ಆಸೆ, ಕನಸು, ಗುರಿಎಲ್ಲವನ್ನು ಮರೆತು ಜೀವನ ಮಾಡಬೇಕು ಎಂಬ ಮನಸ್ಥಿತಿ ಹೊಂದಿರುವ ಸಮಾಜದಲ್ಲಿ 14 ರಾಷ್ಟ್ರಪತಿಗಳಲ್ಲಿ ಒಬ್ಬ ಮಹಿಳಾ ರಾಷ್ಟ್ರಪತಿ, 15 ಪ್ರಧಾನ ಮಂತ್ರಿಗಳಲ್ಲಿ ಒಬ್ಬರೆ ಮಹಿಳಾ ಪ್ರಧಾನ ಮಂತ್ರಿ, ನಮ್ಮ ದೇಶದಲ್ಲಿ ಯಾಕೆ ಹೀಗೆ? ದೇಶದಲ್ಲಿ ಅರ್ಹರಾದ ಮತ್ತು ಬುದ್ದಿವಂತರಾದ ಮಹಿಳೆಯರು ಯಾರು ಇಲ್ಲವೇ ಅಥವಾ ಅವರ ಕನಸುಗಳನ್ನು ಯಾರಾದರೂ ಕಟ್ಟಿಹಾಕಿದ್ದಾರಾ? ಇಲ್ಲವೇ ಇಲ್ಲ ಮಹಿಳೆಯರ ಕನಸುಗಳನ್ನು ಯಾರು ಕಟ್ಟಿ ಹಾಕಲು ಅಸಾಧ್ಯ, ನೇರ ಹೃದಯ ಮತ್ತು ದೃಢವಾದ ನೋಟ ಹಾಗೂ ಉತ್ತಮ ಆದರ್ಶಗಳಿದ್ದಲ್ಲಿ ಪ್ರಪಂಚದಲ್ಲಿ ಯಾರಿಗೂ ಹೆದರುವ ಅವ್ಯಶಕತೆ ಇಲ್ಲ. ಬುದ್ದಿವಂತಿಕೆ ಸ್ವಾಮ್ಯವನ್ನು ಹೊಂದಿರುವ ಮಹಿಳೆ ಯಾರಿಗೂ ತಲೆತಗ್ಗಿಸುವ ಸಂದರ್ಭವೇ ಇಲ್ಲ.**

ನಮ್ಮ ದೇಶದಲ್ಲಿ ಹಲವು ರಾಜ್ಯಗಳ ಮುಖ್ಯಮಂತ್ರಿ ಮಹಿಳೆ. ಸಮಾಜದ ಅಭಿವೃದ್ಧಿಗೆ ಹೋರಾಡುವ ಹಲವಾರು ಹೊರಾಟಗಾರರು ಮಹಿಳೆ, ಇತ್ತೀಚೆಗೆ ಯುದ್ಧ ವಿಮಾನದ ಚಾಲಕರು 3 ಜನ ಮಹಿಳೆಯರೆ, ತಾಂತ್ರಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರು ಶೇ50% ರಷ್ಟು ಮಹಿಳೆಯರೇ ಇವರಾರು ತನ್ನ ಕನಸುಗಳನ್ನು ಕಟ್ಟಿ ಹಾಕಲಿಲ್ಲವೆ, ಕಣ್ಣೀರಿನಲ್ಲಿ ಮುಳುಗಿ ಹೋಗಿಲ್ಲವೇ. ಹೆಣ್ಣು ಒಂದು ಹೆಜ್ಜೆ ಮುಂದೆ ಇಟ್ಟಿದ್ದಾಳೇ ಎಂದು ಗೊತ್ತಾದರೆ ಸಮಾಜವೇ ಒಂದು ಸಾವಿರ ಹೆಜ್ಜೆ ಹಿಂದಿಡಬೇಕೆಂದು ಯೋಚಿಸುವ ಕಾಲಗಟ್ಟ ಇದು.

ಸಮಾಜವು ಮಹಿಳೆಗೆ ಏನನ್ನು ನೀಡಲಿಲ್ಲ, ಎಲ್ಲದರಲ್ಲೂ ಸಮಾನ ಅವಕಾಶ, ಸಮಾನ ಕೆಲಸ, ಸಮಾನ ವೇತನ, ಎಲ್ಲಾ ಕ್ಷೇತ್ರದಲ್ಲಿ ಅವಕಾಶ ನೀಡಲಾಗಿದೆ. ಆಗಾದರೆ ಇನ್ನೂ ಸಹ ಮಹಿಳಾ ಸಬಲೀಕರಣ ಕೂಗು ಸಮಾಜದಲ್ಲಿ ಕೇಳಿಸುತ್ತಿದೆ. ಮಹಿಳೆ ಎಲ್ಲಿ ಸಬಲೀಕರಣ ಹೊಂದಿಲ್ಲ ಇದಕ್ಕೆ ಏನು ಕಾರಣ. ಒಂದು ಗ್ರಾಮದ ಒಂದು ವ್ಯಾಪಾರಸ್ಥ ಹೆಣ್ಣು ನಗರದಲ್ಲಿ ವ್ಯಾಪಾರ ಮುಗಿಸಿ ಕಟ್ಟಕಡೆಯ ಬಸ್ಸಿನಲ್ಲಿ ರಾತ್ರಿ 10 ಗಂಟೆಗೆ ಬಂದರೆ ಅವಳಿಗೆ ಚಿಂತೆಯಾರಾದಾರು ಮನೆಯಲ್ಲಿ ಅಡಿಗೆ ಮಾಡಿಡುತ್ತಾರೆಯೇ, ಯಾಕೆ ಇಷ್ಟು ತಡವಾಗಿ ಬಂದೆ ಎಂದು ಗಂಡ ಬಯ್ಯುತ್ತಾನೆಯೇ ಎಂಬ ಭಯ, ಮಕ್ಕಳು ಊಟ ಮಾಡಿ ನಿದ್ದೆ ಮಾಡಿದ್ದಾರೆಯೆ, ನನ್ನ ಹಿಂದೆಯಾರಾದರು ಹಿಂಬಾಲಿಸುತ್ತಿದ್ದಾರೆಯೆ ಎಂಬ ಭಯ ಅದರೆ ಅದೆ ಒಂದು ಗಂಡಾಗಿದ್ದರೆ ಇದಾವ್ಯ ಚಿಂತೆ ಇರುವುದಿಲ್ಲ ನನಗೆ ನಿದ್ದೆಗೆಡುತಲ್ಲ ಅಷ್ಟರಲ್ಲೆ ಮುಗಿಯುತ್ತದೆ. ಒಬ್ಬ ಹೆಣ್ಣು ದೂರದ ಊರಿಗೆ ರಾತ್ರಿ ಪ್ರಯಾಣ ಮಾಡಬೇಕಾದರೆ ಮಧ್ಯಾಹ್ನದಿಂದಲೇ ನೀರು ಕುಡಿಯುವುದಿಲ್ಲ ಯಾಕೆಂದರೆ ನಡುರಾತ್ರಿಯಲ್ಲಿ ಮಹಿಳೆಯರಿಗೆ ಸುರಕ್ಷಿತವಾದ ಶೌಚಾಲಯದ ಸೌಲಭ್ಯ ಸಿಗುವುದಿಲ್ಲ, ದಿನವು ರುಚಿಯಾಗಿ ಸುಚಿಯಾಗಿ ಅಡಿಗೆ ಮಾಡುವುದು ಮಹಿಳೆಯೆ, ಗಂಡನ ಕಾಲರಿನ ಕರೆಯನ್ನು ತಿಕ್ಕುವವಳು ಮಹಿಳೆಯೆ, ಮಕ್ಕಳಿಗೆ ಹಾಲು ನೀಡಿ ಓದಿಸುವವಲು ಮಹಿಳೆಯೆ, ಇದೇನಾ ಮಹಿಳಾ ಸಬಲೀಕರಣ ಹೆಣ್ಣು ಮತ್ತುಗಂಡು ಸರಿ ಸಮಾನವಾಗಿ ನಿಂತು ಮಹಿಳೆಗೆ ಎಲ್ಲದರಲ್ಲೂ ಸಾಂತ್ವನವಾಗಿ, ಕನಸಿಗೆ ಆದರವಾಗಿ/ ಆಸರೆಯಾಗಿ ಆಸೆ ಗುರಿಯನ್ನು ಈಡೆರಿಸಲು ಬೆನ್ನೇಲುಬಾಗಿ ಪುರುಷರೂ ನಿಲ್ಲುತ್ತಾರೂ ಅಂದು ಮಹಿಳೆ ಸಬಲೀಕರಣ ಹೊಂದುತ್ತಾಳೆ.

### ಮಹಿಳಾ ಸಭಲಿಕರಣ ಹೇಗೆ?

ಕೇಂದ್ರ ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ಇವರು ಹೇಳಿರುವಂತೆ ಮಹಿಳಾ ಸಬಲೀಕರಣ ಎಂದರೆ **"ಹಳೆಯ ಸಾಂಪ್ರದಾಯಿಕ ಚಾಕಟ್ಟು ಮೀರಿ ಹೊಸ ಅತ್ಯುತ್ತಮ ಅವಕಾಶಕ್ಕೆ ತೆರದು ಕೊಳ್ಳುವುದಕ್ಕೆ ಅವರನ್ನು ಸಜ್ಜಾಗಿಸುವುದು ಎಂದು"**. ಮಹಿಳೆಯರನ್ನು ವಿವಿಧ ಆಯಾಮಗಳಲ್ಲಿ ಶಿಕ್ಷಣ, ಸರ್ಕಾರ ನೀತಿ, ಯೋಜನೆಗಳು, ಕುಟುಂಬ ಮತ್ತು ಸಮಾಜದ ಪಾತ್ರ ಮಹಿಳಾ ಸಬಲೀಕರಣಕ್ಕೆ ಪ್ರಮುಖವಾದ ಆಯಾಮಗಳಾಗಿದೆ. ಮಹಿಳಾ ಸಬಲೀಕರಣದ ವಿವಿಧ ಆಯಾಮಗಳನ್ನು ಈ ಕೆಳಗಿನಂತೆ ಅವಲೋಕಿಸೂಣ.

### 1. ಮಹಿಳೆಯರ ಸಬಲೀಕರಣಕ್ಕೆ ಶಿಕ್ಷಣವೇ ಮೂಲ

ಪುರುಷ ಪ್ರಧಾನ ಸಮಜದಲ್ಲಿ ಹೆಣ್ಣಿಗೆ ಹೆಚ್ಚಿನ ಶಿಕ್ಷಣ ನೀಡುವುದಿಲ್ಲ ಏಕೆಂದರೆ ಇನ್ನೊಂದು ಮನೆಗೆ ಸಂಸಾರ ನಡೆಸಲು ಹೊಗುವವಳು ಎಂದು. ಅದರೆ ಪ್ರಸ್ತುತ ಶಿಕ್ಷಣವು ಮಹಿಳೆಯ ಸ್ವಾತಂತ್ರ್ಯ ಮತ್ತು ಅಭಿವೃದ್ಧಿಯ ಒಂದು ಪ್ರಮುಖ ಮೂಲವಾಗಿದೆ. ಶಿಕ್ಷಣವು ಮಹಿಳೆಯರ ಜೀವನದಲ್ಲಿ ಸಬಲತೆ ಮೂಡಿಸಲು ಶಕ್ತವಾಗಿದೆ. ಮಹಿಳೆಗೆ ಶಿಕ್ಷಣ ಎಂದರೆ ಶೈಕ್ಷಣಿಕ, ಆರೋಗ್ಯ, ಉದ್ಯೋಗ, ಸಾಮಾಜಿಕ, ಆಡಳಿತಾತ್ಮಕ, ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆ ಮುಂತಾದ ವಿಷಯಗಳ ಶಿಕ್ಷಣವು ಮಹಿಳೆಯರ ಸಬಲೀಕರಣಕ್ಕೆ ನೆರವಾಗುತ್ತದೆ. ಇವುಗಳಲ್ಲಿ ಶಿಕ್ಷಣವು ಅತ್ಯಂತ ಪರಿಣಾಮಕಾರಿ ಸಾಧನವಾಗಿದ್ದು ಮಹಿಳೆಯರ ಸಮಗ್ರ ಜೀವನ ವಿಧಾನದಲ್ಲಿ ಹಲವು ಬಗೆಗಳಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಬಲತೆ ಮೂಡಿಸುವ ಶಕ್ತಿ ಹೊಂದಿದೆ. ಮಹಿಳೆಯರಿಗೆ ಈ ಕೆಳಕಂಡ ಅಂಶಗಳನ್ನು ಶಿಕ್ಷಣದ ಮುಖಾಂತ ನೀಡುವದರೊಂದಿಗೆ ಮಹಿಳಾ ಸಬಲೀಕರಣಕ್ಕೆ ಶಿಕ್ಷಣ ಒಂದು ಮೂಲವಾಗಿದೆಎಂಬುದನ್ನು ಪರಿಗಣಿಸಬಹುದಾಗಿದೆ.

- ಅಪ್ರಾಪ್ತ ಬಾಲಕೀಯರಲ್ಲಿ ಸಂತಾನೋತ್ಪತ್ತಿ ಆರೋಗ್ಯದ ಬಗ್ಗೆ, ವಿವಾಹದ ವಯಸ್ಸು, ಮಕ್ಕಳ ಸಂಖ್ಯೆ, ಸುರಕ್ಷಿತ ತಾಯ್ತನದ ಬಗ್ಗೆ ತಿಳಿವಳಿಕೆಯನ್ನು ಮೂಡಿಸುವು.
- ಹದಿಹರೆಯದ ಬಾಲಕಿಯರಲ್ಲಿ ಲಿಂಗ ಅಸಮಾನತೆ ತಪ್ಪಿಸಿ ಸ್ವಸ್ಥವಾದ ಲಿಂಗತ್ವ ಪಾತ್ರಗಳನ್ನು ಶಿಕ್ಷಣದ ಮೂಲಕ ಬೆಳೆಸುವ ಪ್ರಯತ್ನ ಹಾಗೂ ಜವಾಬ್ದಾರಿಯುತ ಪಾಲಕತ್ವಕ್ಕೆ ತರಬೇತಿಗೊಳಿಸುವ ಮೂಲಕ.
- ಮಹಿಳೆಯರಿಗೆ ಸಮಾಜೀಕರಣ, ಸಮಾಜಿಕ ಚಾಲನೆ ಹಾಗೂ ಮಹಿಳೆಯರ ಸ್ಥಾನಮಾನಗಳನ್ನು ಹೆಚ್ಚಿಸುವ ಮೂಲಕ ಸಬಲತೆಗೆ ಅಗತ್ಯ ಮಾಹಿತಿ ಜ್ಞಾನ ಒದಗಿಸುವುದು.
- ಮಹಿಳೆಯರಲ್ಲಿ ವ್ಯಕ್ತಿತ್ವ ವಿಕಾಸದೊಂದಿಗೆ ಹಾಗೂ ನಾಯಕತ್ವ ಗುಣಗಳನ್ನು, ಸ್ವತಂತ್ರಚಿಂತನೆ, ಅಭಿವ್ಯಕ್ತಿ, ಆತ್ಮವಿಶ್ವಾಸ, ಆತ್ಮಗೌರವಗಳನ್ನು ಬೆಳೆಸಿ ಜೀವನ ಗುಣಮಟ್ಟದ ಉನ್ನತಿಗೊಳಿಸುವುದು.

- ಮಹಿಳೆಯರಲ್ಲಿ ವೃತ್ತಿಕೌಶಲ್ಯ ಹಾಗೂ ಸಂಘಟನಾತ್ಮಕ ಸಾಮರ್ಥ್ಯಗಳನ್ನು ಬೆಳೆಸುವ ಮೂಲಕ. ಮಹಿಳೆಯರಲ್ಲಿ ತಮ್ಮ ಹಕ್ಕುಗಳು, ಅವಕಾಶಗಳು ಹಾಗೂ ಸಾಮಾಜಿಕ ನ್ಯಾಯದಬಗ್ಗೆ ಜಾಗೃತಿ ಮೂಡಿಸುವುದು.
- ಮಹಿಳೆಯರಿಗೆ ಕಾನೂನಿನ ಅವಕಾಶಗಳ ಬಗ್ಗೆ ತಿಳುವಳಿಕೆಹಾಗೂ ಜಾಗೃತಿ ಮೂಡಿಸುವ ಮೂಲಕ.

### 2. ಮಹಿಳಾ ಸಬಲೀಕಣದ ಕನಸಿನಲ್ಲಿ ಸರ್ಕಾರ

ಸರ್ಕಾರವು ಮಹಿಳೆಯ ಸಬಲೀಕರಣಕ್ಕೆ ಸರ್ಕಾರದ ಪಾತ್ರವು ಸಹ ಪ್ರಮುಖವಾಗಿದೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಹಲವಾರು ಸಾಮಾಜಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ಸಮಾಜದ ಕಟ್ಟಕಡೆಯ ವರ್ಗದ ಮಹಿಳೆಯರನ್ನು ಶೋಷಣೆಯಿಂದ ರಕ್ಷಿಸಲು ಕಾರ್ಯ ಪ್ರವೃತ್ತವಾಗಿದೆ. ಸರ್ಕಾರವು ಮಹಿಳೆಯರಿಗೆ ಶಿಕ್ಷಣ ಹಾಗೂ ಅರಿವು ಮೂಡಿಸಿ ಉದ್ಯೋಗ ಆಧಾರಿತ ವೃತ್ತಿತರಬೇತಿ ನೀಡಿ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಸಹಕಾರಿಯಾಗಿರುವ ಸಬಲೀಕರಣ ಕಾರ್ಯಕ್ರಮಗಳನ್ನು ಜಾರಿಗೆತಂದು ಅನುಷ್ಠಾನ ಗೊಳಿಸಲಾಗುತ್ತದೆ ಹಾಗೂ ಇಲಾಖೆಯು 0–6ವರ್ಷ ವಯೋಮಾನದ ಮಕ್ಕಳ ಆರೋಗ್ಯ ಹಾಗೂ ಪೌಷ್ಟಿಕತೆ ಮಟ್ಟವನ್ನು ಉತ್ತಮ ಪಡಿಸಿ ಆದರದೈಹಿಕ, ಸಾಮಾಜಿಕ ಹಾಗೂ ಮಾನಸಿಕ ಬೆಳವಣಿಗೆಗೆ ಬುನಾದಿ ಹಾಕುವ ದೃಷ್ಟಿಯಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರವು ಮಹಿಳೆಯ ಸಬಲತೆಗಾಗಿ ಅನುಷ್ಠಾನ ಗೊಳಿಸುತ್ತಿರುವ ವಿವಿಧ ಯೋಜನೆಗಳು ಈ ಕೆಳಕಂಡಂತಿದೆ.

- 0–6 ವರ್ಷದೊಳಗಿನ ಮಕ್ಕಳ ಪೌಷ್ಟಿಕತೆ ಮಟ್ಟವನ್ನು ಹಾಗೂ ಆರೋಗ್ಯ ಸ್ಥಿತಿಯನ್ನು ಸುಧಾರಿಸುವುದಕ್ಕಾಗಿ – **ಸಮಗ್ರ ಶಿಶು ಅಭಿವೃದ್ಧಿ ಯೋಜನೆ**
- 11 ರಿಂದ 18 ವರ್ಷದ ವಯಸ್ಸಿನ ಬಾಲಕಿಯರಿಗೆ ದಿನವೊಂದಕ್ಕೆರೂ: 5–00 ಗಳ ವೆಚ್ಚದಲ್ಲಿ ಪೂರಕ ಪೌಷ್ಟಿಕ ಆಹಾರ ನೀಡಲಾಗುವ – **ಕಿಶೋರಿ ಶಕ್ತಿ ಯೋಜನೆ.**
- ವ್ಯವಸಾಯ ಹಾಗೂ ಇನ್ನಿತರ ವೃತ್ತಿ ನಿರತ ಮಹಿಳೆಯರ 0–3 ವರ್ಷದ ಮಕ್ಕಳಿಗೆ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಆಶ್ರಯ ನೀಡಲು ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲು – **ಶಿಶುಪಾಲನಾ ಕೇಂದ್ರಗಳ ಯೋಜನೆ.**
- ಹೆಣ್ಣು ಮಗುವಿನ ಸ್ಥಾನಮಾನವನ್ನು ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಉತ್ತಮಗೊಳಿಸಲು ಮತ್ತು ಬಾಲ್ಯವಿವಾಹ ತಡೆಗಟ್ಟುವ ಉದ್ದೇಶಕ್ಕಾಗಿ – **ಭಾಗ್ಯಲಕ್ಷ್ಮಿ ಯೋಜನೆ.**
- ಹೆಚ್ಚು ಉಳಿತಾಯ ಮಾಡಿದ ಸ್ವ–ಸಹಾಯ ಗುಂಪುಗಳಿಗೆ ಹಾಗೂ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿರುವ ಗುಂಪುಗಳಿಗೆ ಪ್ರೋತ್ಸಾಹ ಧನ ನೀಡಲು – **ಸ್ತ್ರೀಶಕ್ತಿ ಯೋಜನೆ.**
- ದೌರ್ಜನ್ಯ ಹಾಗೂ ಅತ್ಯಾಚಾರಕ್ಕೊಳಪಟ್ಟ ಮಹಿಳೆಯರಿಗೆ ಆರ್ಥಿಕ ಸಹಾಯ, ಕಾನೂನು ಸಹಾಯ ನೀಡಲು, ಆಶ್ರಯ ಒದಗಿಸುವುದು ಹಾಗೂ ಸ್ವ–ಉದ್ಯೋಗ ಮಾಡಲು ಅನುಕೂಲವಾಗುವಂತೆ ತರಬೇತಿ ನೀಡಿ ಸ್ವಾವಲಂಬಿಗಳಾಗಿ ಬದುಕುವಂತೆ ಮಾಡಲು–**ಸಾಂತ್ವನ ಯೋಜನೆ.**
- ಶೋಷಣೆಗೊಳಪಟ್ಟ ಮಹಿಳೆಯರು, ವೈವಾಹಿಕ ಜೀನದಲ್ಲಿ ತೊಂದರೆಗೊಳಪಟ್ಟವರು ಹಾಗೂ ರಕ್ಷಣೆಯ ಅಗತ್ಯವಿರುವ ಮಹಿಳೆಯರು ಮತ್ತು ಹೆಣ್ಣುಮಕ್ಕಳಿಗೆ ಸಂಸ್ಥೆಯ ಮೂಲಕ ಪಾಲನೆ, ರಕ್ಷಣೆ, ಮಾರ್ಗದರ್ಶನ ತರಬೇತಿ ನೀಡಲು–**ಸ್ವಾಧಾರ ಯೋಜನೆ.**
- ಬಾಲನ್ಯಾಯ (ಮಕ್ಕಳ ರಕ್ಷಣೆ, ಪಾಲನೆ, ಪೋಷಣೆ) ಕಾಯ್ದೆ 2000 ತಿದ್ದುಪಡಿ 2006 ಅನ್ವಯ ರಕ್ಷಣೆ ಮತ್ತು ಪೋಷಣೆ ಅಗತ್ಯವಿರುವ ಮಕ್ಕಳಿಗೆ ಉಚಿತ ಊಟ, ವಸತಿ, ಶಿಕ್ಷಣ ಒದಗಿಸಲು ಬಾಲಕರಿಗೆ ಹಾಗೂ ಬಾಲಕಿಯರಿಗೆ ಪ್ರತ್ಯೇಕ ಬಾಲಮಂದಿರಗಳು.
- ಮಹಿಳೆಯರ ಅಲ್ಪಾವಧಿ ವಸತಿಗಾಗಿ ಇದ್ದು, ವಿಧವೆಯರು, ನಿರ್ಗತಿಕರು, ಪರಿತ್ಯಕ್ತ ಮಹಿಳೆಯರು, ಸ್ವಯಂ ಪ್ರೇರಿತರಾಗಿ ಬಂದಲ್ಲಿ ಅವರಿಗೆ ತಾತ್ಕಾಲಿಕ ಆಶ್ರಯವನ್ನು ನೀಡಲು ಸ್ವೀಕಾರ ಕೇಂದ್ರಗಳು
- ಸ್ವೀಕಾರ ಕೇಂದ್ರದಲ್ಲಿ ದಾಖಲಾದ ಹೆಣ್ಣು ಮಕ್ಕಳು ನಿರ್ಗತಿಕರು / ಅನಾಥರು ಅಥವಾ ತಮ್ಮ ಕುಟುಂಬಗಳಿಗೆ ವಾಪಾಸ್ಸು ಹೋಗಲು ನಿರಾಕರಿಸಿದವರಿಗೆ ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ನೀಡಲಾಗುವ – **ರಾಜ್ಯ ಮಹಿಳಾ ನಿಲಯ.**
- ಕಾನೂನು ಪದವಿ ಪಡೆದಿರುವ ಮಹಿಳೆಯರಿಗೆ ಕಾನೂನು ಆಡಳಿತದಲ್ಲಿ ತರಬೇತಿ ಪಡೆಯಲು ಆರ್ಥಿಕ ಸಹಾಯ ನೀಡುವುದು – **ಮಹಿಳಾ ಕಾನೂನು ಪದವೀದರರಿಗೆ ಸಹಾಯಧನ**
- **ಮಕ್ಕಳ ಸಹಾಯವಾಣಿ** : ತೊಂದರೆಯಲ್ಲಿರುವ ಮತ್ತು ಪಾಲನೆ, ರಕ್ಷಣೆ ಅವಶ್ಯಕವಿರುವ ಮಕ್ಕಳಿಗಾಗಿ 1098 ಉಚಿತ ದೂರವಾಣಿ ಕರೆಮಾಡಿ ನೆರವು ನೀಡುವ ಯೋಜನೆ ಈ ಯೋಜನೆಯನ್ನು ಸ್ವಯಂಸೇವಾ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ.
- **ಕೌಟುಂಬಿಕ ದೌರ್ಜನ್ಯ ದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ** : ಒಂದೇ ಕುಟುಂಬದಲ್ಲಿ ವಾಸಿಸುವ ಮಹಿಳೆಗೆ ಇತರೆ ಸದಸ್ಯರಿಂದ ದೈಹಿಕ, ಮಾನಸಿಕ / ಭಾವನಾತ್ಮಕ ಆರ್ಥಿಕ ಮತ್ತು ಲೈಂಗಿಕ ಹಿಂಸೆ ಉಂಟಾದಲ್ಲಿ ಈ ಕಾಯ್ದೆಯಡಿ ದೂರು ದಾಖಲಿಸಬಹುದು.
- **ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ** : ಮಹಿಳೆಯರ ಸಬಲೀಕರಣ ಹಾಗೂ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಸರ್ಕಾರದಿಂದ ಅನುಷ್ಠಾನಗೊಳಿಸುವ ಎಲ್ಲಾ ಇಲಾಖೆಗಳ ಎಲ್ಲಾ ಯೋಜನೆ/ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಿಡುವ ಕಾರ್ಯಕ್ರಮ
- **ಸ್ತ್ರೀಶಕ್ತಿ ಪುರಸ್ಕಾರ** : ಮಹಿಳಾ ಅಭಿವೃದ್ಧಿ ಕ್ಷೇತ್ರದಲ್ಲಿ ತೊಡಗಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ, ಮಹಿಳಾ ಅಭಿವೃದ್ಧಿ ನಿಗಮಗಳಿಗೆ ರಾಜ್ಯ ಮಹಿಳಾ ಆಯೋಗಗಳಿಗೆ ಡಾ॥ ದುರ್ಗಾಬಾಯಿದೇಶ್ ಮುಖ್, ದೇವಿ ಅಹಲ್ಯಾಬಾಯಿ ಹೋಲ್ಕರ್ ಕನ್ನಗಿ, ಮಾತಾ ಜೀಜಾ ಬಾಯಿ, ರಾಣಿ ಗೈಡ್ ನಾಲೋಜೀಲಾಂಗ್ ಮತ್ತು ರಾಣಿ ಲಕ್ಷ್ಮಿ ಬಾಯಿ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡಲಾಗುವುದು.
- **ಮಕ್ಕಳ ಹಕ್ಕುಗಳ ಆಯೋಗ** : ಮಕ್ಕಳು ಜೀವಿಸುವ ರಕ್ಷಣೆ ಹೊಂದುವ, ವಿಕಾಸ ಹೊಂದುವ ಮತ್ತು ಭಾಗವಹಿಸುವ ಹಕ್ಕುಗಳಿಂದ ವಂಚಿತರಾಗದಂತೆ ಕ್ರಮವಹಿಸಲು ರಾಜ್ಯ ಮಕ್ಕಳ ಹಕ್ಕುಗಳ ಆಯೋಗ ಇರುತ್ತದೆ.
- **ರಾಜ್ಯ ಮಹಿಳಾ ಆಯೋಗ** : ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ, ಅತ್ಯಾಚಾರ, ಶೋಷಣೆ, ದಬ್ಬಾಳಿಕೆಗಳನ್ನು ತಡೆಗಟ್ಟಲು ಹಾಗೂ ರಕ್ಷಣೆ

ನೀಡಲು ರಾಜ್ಯ ಮಹಿಳಾ ಆಯೋಗ ಇರುತ್ತದೆ.

**3. ಮಹಿಳೆಯನ್ನು ಸಬಲೆಯನ್ನಾಗಿಸುವಲ್ಲಿ ಸಮಾಜದ ಕೊಡುಗೆ.**

ಸಬಲೀಕರಣ ಎನ್ನುವುದು ಸ್ತ್ರೀ-ಪುರುಷ ರಿಬ್ಬರಿಗೂ ಸಮಾಜದಲ್ಲಿ ಬದುಕಲು ಬೇಕಾದ ಶಕ್ತಿ.ಒಬ್ಬ ಮಹಿಳೆಯು ಶಕ್ತಿವಂತಳಾಗಿ, ಸ್ವತಂತ್ರವಾಗಿ ತನ್ನ ಇಚ್ಛೆಯಂತೆ ಸ್ವಾಲಂಬಿಯಾಗಿ ಬಾಳುವ ಸ್ಥಿತಿಯನ್ನು ಸಬಲತೆ ಎನ್ನಬಹುದು, ತನ್ನ ಜೀವನದಬಗ್ಗೆ ನಿರ್ಣಯ ಹಾಗೂ ತೀರ್ಮಾನಗಳನ್ನು ಕೈಗೊಳ್ಳುವ ಸ್ವಾತಂತ್ರ್ಯ ಹೊಂದುವುದು, ಅಧಿಕಾರ ಹಾಗೂ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಅವಕಾಶಗಳನ್ನು ಹೂಂದುವುದು. ಯಾವುದೇ ರೀತಿಯ ಅಸಮಾನತೆ, ಶೋಷಣೆಗಳಿಗೆ ಒಳಗಾಗದೆ ಶಿಕ್ಷಣ, ಉದ್ಯೋಗ, ವಿವಾಹ, ಜೀವನ, ಸಂತಾನೋತ್ಪತ್ತಿ ಆರೋಗ್ಯ ಮತ್ತು ಹಕ್ಕುಗಳನ್ನು ಹೊಂದುವುದು. ಸಾಮಾಜಿಕ ಚಾಲನೆ, ರಾಜಕೀಯ ಮತ್ತು ಆಡಳಿತದಲ್ಲಿ ಪಾಲ್ಗೊಳ್ಳುವಿಕೆ ಇಂತಹ ಅಂಶಗಳ ಬಗ್ಗೆ ಸ್ವತಂತ್ರ್ಯ ಹೊಂದಿದ್ದ ಸ್ವಾಭಿಮಾನಿಯಾಗಿ ಅತ್ಮ ವಿಸ್ವಾಸದಿಂದ ಬಾಳುವಶಕ್ತಿಯನ್ನು ಮಹಿಳೆಗೆ ಸಮಾಜವೆ ನೀಡಬೇಕಾಗಿದೆ. ಹೀಗೆ ಸಮಾಜವು ಮಹಿಳೆಯನ್ನು ಸ್ವಾಲಂಬಿಯಾಗಿ ವಿಕಾಸವಾಗಲು ಈ ಕೆಳಗಿನ ಅಂಶಗಳು ಸಹಕಾರಿಯಾಗಿರುತದತೆ.

- ಹೆಣ್ಣು ಮತ್ತು ಗಂಡು ಸಮಾನತೆ ಸಹಬಾಳ್ವೆ ನಡೆಸಲು ಉತ್ತಮ ಸಂಬಂಧವನ್ನು ಹೊಂದುವುದು
- ವಿಚಾರ ವಿನಿಮಯ ಹಾಗೂ ಹೆಣ್ಣಿನ ಘನತೆಯನ್ನು ಎತ್ತಿ ಹಿಡಿಯುವುದು ಸಮಾಜದಲ್ಲಿ ಹೆಣ್ಣು ಮಕ್ಕಳ ಬಗ್ಗೆ ಆಚರಣೆಯಲ್ಲಿರುವ ಕೀಳರಿಮೆಯನ್ನು ಅಳಿಸಿಹಾಕಿ ಹೆಣ್ಣು ಮಕ್ಕಳು ಹುಟ್ಟಿ ಬೆಳೆಯುವ ವಿವಿಧ ಹಂತಗಳಲ್ಲಿ ಮಾನವೀಯ ವಾತಾವರಣವನ್ನು ಸೃಷಿಸುವುದು.
- ಮಹಿಳೆಯರು ಪುರುಷರಿಗಿಂತ ಎಲ್ಲ ಕ್ಷೇತ್ರಗಳಲ್ಲು, ಕೀಳು, ಅಶಕ್ತರು ಎಂಬ ರೂಡಿಗತ ತಪ್ಪು ಕಲ್ಪನೆಗಳನ್ನು ಪೂರ್ಣ ಅಳಿಸಿ ಹಾಕಿ ಲಿಂಗ ಸಮಾನತೆಯ ಮನೋಭಾವ ಬೆಳೆಸುವುದು. ಮಹಿಳೆಯರಲ್ಲಿ ಇರುವ ಅಪೂರ್ವ ಶಕ್ತಿ ಸಾಮರ್ಥ್ಯ, ಸೃಜನಶೀಲ ಯೋಚನೆಗಳನ್ನು ಅಭಿವೃದ್ಧಿಗೊಳಿಸುವ ಮತ್ತು ಅವು ಇಡೀ ಸಮಾಜಕ್ಕೆ ಬಳಕೆಯಾಗುವಂತೆ ವ್ಯವಸ್ಥೆಗೊಳಿಸುವುದು.
- ಸ್ತ್ರೀ ಪುರುಷರನ್ನು ಜವಾಬ್ದಾರಿಯುತ ಪಾಲಕರನ್ನಾಗಿ ತರಬೇತಿಗೊಳಿಸಲು ಮತ್ತು ಮಹಿಳೆಯರ ಕಾರ್ಯಕ್ಷೇತ್ರ ಹಾಗು ಒಟ್ಟು ಜೀವನ ಕ್ರಮದಲ್ಲಿ ಪುರುಷರ ಸಹಭಾಗಿತ್ವವನ್ನು ಬೆಳೆಸಲು ಸಮಾಜವು ಸಹಕಾರಿಯಾಗುವುದು.
- ಮಹಿಳೆಯಲ್ಲಿ ಅಭಿವೃದ್ಧಿಯ ಕೌಶಲ್ಯಗಳು ಮತ್ತು ಜೀವನದ ಗುಣಮಟ್ಟವನ್ನು ಉತ್ತಮಗೊಳಿಸಲು. ಕೌಟುಂಬಿಕ ಆರೋಗ್ಯ, ಮಿತ ಪರಿವಾರ ಮತ್ತು ಜೀವನದ ಗುಣಮಟ್ಟವನ್ನು ಉತ್ತಮಗೊಳಿಸಲು. ಮಹಿಳೆಯ ಶಿಕ್ಷಣ ಮತ್ತು ಉದ್ಯೋಗ ಸೌಲಭ್ಯಗಳನ್ನು ಉನ್ನತ್ತಿಗೊಳಿಸಿ ಅವರನ್ನು ಆತ್ಮವಿಸ್ವಾಸದೊಂದಿಗೆ ಸ್ವಾವಲಂಬಿಗಳನ್ನಾಗಿ ರೂಪಿಸಲು ಸಮಾಜವು ಸಹಕರಿಯಾಗುವುದು.

**4. ಮಹಿಳಾ ಸಬಲೀಕರಣದಲ್ಲಿ ಕುಟುಂಬದ ಪಾತ್ರ**

ಅನಕ್ಷರಸ್ಥ / ಕಡಿಮೆ ಶಿಕ್ಷಣ ಪಡೆದ ಮಹಿಳೆಯರಿರುವ ಕುಟುಂಬದ ನಿರ್ವಹಣೆಯ ಪ್ರಮುಖ ತೀರ್ಮಾನವನ್ನು ಪುರುಷರೇ ತೆಗೆದುಕೊಳ್ಳುತ್ತಾರೆ. ಮಹಿಳೆಯರು ಪುರುಷರು ಹೇಳಿದ ಹಾಗೆ ಕೇಳುವುದು ನಮ್ಮ ಧರ್ಮ ಎಂದು ಭಾವಿಸುತ್ತಾರೆ ಆದ್ದರಿಂದ ಕೆಲವು ವಿಶೇಷ ಸಂದರ್ಭದಲ್ಲಿ ಪುರುಷರಿಲ್ಲದಿರುವಾಗ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗದೆ ಕುಟುಂಬ ನಿರ್ವಹಣೆ ಕಷ್ಟವಾಗುತ್ತದೆ. ಯಾವುದೇ ಒಂದು ಕುಟುಂಬ ಉತ್ತಮವಾಗಿ ಉನ್ನತ ಸ್ಥಾನಕ್ಕೆ ಹೋಗ ಬೇಕಾದರೆ ವಿದ್ಯಾವಂತ ಮಹಿಳೆಯಿಂದ ಮಾತ್ರ ಅದೇ ರೀತಿ ಮನೆಗೆ ಬಂದ ಸೊಸೆಯನ್ನು ಮಗಳಂತೆ ಕಂಡಾಗ ಸಂಸಾರದಲ್ಲಿ ಸಾಕಷ್ಟು ಕಲಹಗಳು ಕಡಿಮೆಯಾಗಿ ಸಂತಸದಿಂದ ಬದುಕು ನಡೆಸಲು ಸಾಧ್ಯ ಕುಟುಂಬದಲ್ಲಿ ಮಹಿಳೆ ಮಾತೃ, ವಾತ್ಸಲ್ಯ, ಸಹನೆ, ಪ್ರೀತಿ, ತಾಳ್ಮೆ ಆರೈಕೆ ಇತ್ಯಾದಿ ಸಾಮಾನ್ಯ ಗುಣಗಳನ್ನು ಹೊಂದಿರುತ್ತಾಳೆ, ಕುಟುಂಬದ ಹೆಚ್ಚಿನ ಜವಾಬ್ದಾರಿ, ಮಹಿಳೆಯ ಮೇಲೇ ಇರುತ್ತದೆ. ತನ್ನ ಕುಟುಂಬದ ಹೆಣ್ಣು ಮಕ್ಕಳಿಗೆ ವಿವಿಧ ಸಂದರ್ಭದಲ್ಲಿ ತೀರ್ಮಾನ ತಗೆದುಕೊಳ್ಳುವ ಬಗ್ಗೆ, ಇನ್ನೊಂದು ಕುಟುಂಬಕ್ಕೆ ಮದುವೆಯಾಗಿ ಹೊದಲ್ಲಿ ಅಲ್ಲಿನ ಸಂಸ್ಕಾರ ಮತ್ತು ಸಂಪ್ರದಾಯಗಳನ್ನು ತಿಳೀ ಹೇಳುವುದು. ತನ್ನ ಕುಟುಂಬದಲ್ಲಿ ಇರುವ ಹೆಣ್ಣು ಮಕ್ಕಳಿಗೆ ಸಾಮಾಜೀಕರಣದ ಬಗ್ಗೆ, ಮುಂದಿನ ಗುರಿ, ಸಾಧನೆ ಬಗ್ಗೆ ಮಾಹಿತಿಯನ್ನು ನೀಡಿ ಪ್ರೋತ್ಸಾಹಿಸುವುದು. ನಮ್ಮ ದೇಶದ ಆನೇಕ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು ಕೇವಲ ನೀರು ಮತ್ತು ಉರುವಲಿಗಾಗಿ ಮೈಲಿಗಟ್ಟಲೆ ನಡೆದು ಅದನ್ನು ಸಂಪಾದಿಸಬೇಕಾದ ಅನಿವಾರ್ಯತೆ ಇಂದಿಗೂ ಇದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಕುಟುಂಬವು ತನ್ನ ಮಹಿಳೆಯನ್ನು ತನ್ನ ಕುಟುಂಬದ ಒಡತಿಯನ್ನಾಗಿ ಸ್ವೀಕರಸುವುದು, ನಿರ್ಣಯವನ್ನು ತಗೆದುಕೊಳ್ಳಲು ಅವಕಾಶವನ್ನು ನೀಡುವುದು. ಹೀಗೆ ಎಲ್ಲಾ ಸಮಸ್ಯೆಗಳಿಗೆ ಕುಟುಂಬವು ಬೆನ್ನೆಲುಭಾಗಿ ನಿಂತರೆ ಮಹಿಳೆಯ ಸಬಲೀಕರಣ ಸಾಧ್ಯ.

**ಉಪಸಂಹಾರ :** ಒಮ್ಮೆ ಕವಿ ಸುಬ್ರಮಣ್ಯ ಭಾರತಿಯವರು ರೈಲಿನಲ್ಲಿ ಪ್ರಯಾಣ ಮಾಡುತ್ತಿರುವಾಗ ಪಕ್ಕದಲ್ಲಿ ಒಬ್ಬ ಮಹಿಳೆ ತಲೆ ತಗ್ಗಿಸಿಯೆ ಕುಳುತಿರುವದನ್ನು ನೋಡುತ್ತಾರೆ. ತನ್ನ ಗಂಡ ನಿಲ್ದಾಣದಲ್ಲಿ ನೀರು ತರಲು ಹೊದಾಗ ಅ ಮಹಿಳೆ ತಲೆ ಎತ್ತಿ ಪಕ್ಕದಲ್ಲಿದ್ದ ಗಂಡಸನ್ನು ನೀವು ಯಾವ ಊರು, ಎಷ್ಟು ಮಕ್ಕಳು. ಎನು ಕೆಲಸ ಮಾಡುತ್ತೀರ ಎಂದಲ್ಲಾ ನಗು ನಗುತ್ತಾ ವಿಚಾರಿಸುತ್ತಾಳೆ, ಗಂಡ ಬಂದ ತಕ್ಷಣ ಮತ್ತೆ ತಲೆತಗ್ಗಿಸಿ ಸುಮ್ಮನೆ ಕುಳಿತುಕೊಳ್ಳುತ್ತಾಳೆ. ಆಗ ಭಾರತಿಯವರು ಆ ಮಹಿಳೆಗೆ ಕೇಳುತ್ತಾರೆ ಮಾತನಾಡಬೇಕೆಂಬ ಆಸೆ ಇದೆಯಲ್ಲವೆ ನಿನ್ನ ಗಂಡನ ಮುಂದೆಯೆ ಮತನಾಡಬಹುದಿತ್ತಲ್ಲವೆ ಎಂದು ಆಗ ಅ ಮಹಿಳೆ ಉತ್ತರ ನೀಡುತ್ತಾಳೆ **"ಜೀತದಾಳುಗಳು ತನ್ನ ಮುಂದೆ ಮಾತನಾಡುವುದನ್ನು ಯಜಮಾನರು ಎಂದಿಗೂ ಆಸೆಪಡುವುದಿಲ್ಲ"** ಎಂದು. ಹೆಣ್ಣು ಗಂಡು ಯಾವಾಗ ಸರಿಸಮಾನ ಎಂದು ಈ ಸಮಾಜವು ನಡೆಸಿಕೊಳ್ಳುತ್ತದೆಯೊ ಅಂದು ಸಮಾಜದಲ್ಲಿ ಅರಿವು, ಅಭಿವೃದ್ಧಿ ಎಲ್ಲದರಲ್ಲೂ ಸರಿ ಹೊಂದುವುದು, ನೇರ ಹೃದಯ ಮತ್ತು ದೃಡವಾದ ನೊಟ ಮತ್ತು ಉತ್ತಮವಾದ ಆದರ್ಶವನ್ನು ಹೊಂದುವ ಮಹಿಳೆ ಜಗತ್ತಿನಲ್ಲಿ ಯಾರ ಮುಂದೆಯು ತಲೆ ತಗ್ಗಿಸುವುದಿಲ್ಲ, ಯಾರಿಗೂ ಹೆದರುವ ಅವಶ್ಯಕತೆ ಇರುವುದಿಲ್ಲ. ನಾವು ಪೂಜೆ ಮಾಡುವ ಮಹಿಳಾ ದೇವತೆ ಶಿವಶಕ್ತಿಯಲ್ಲಿ ಇರುವ ವೀರ, ಧೈರ್ಯ, ಶೌರ್ಯವನ್ನು ಹೆಣ್ಣು ಸಮಾಜದಲ್ಲಿ ಹೊಂದಿದ್ದಾಳೆ. ಇಂದಿನ ಭಾರತದ ಮಹಿಳೆಯರು ಸಬಲತೆಯ ಕಾಲಘಟ್ಟದಲ್ಲಿ ನಿಂತಿದ್ದಾಳೆ. ಅವರ ಮುಂದೆ ಸಾಧಿಸಲು ಅಪಾರ ಅವಕಾಶಗಳ ಬಾಗಿಲುಗಳ ತೆರೆದಿವೆ. ಭಾರತ ಇವತ್ತು ಎಲ್ಲ ಕ್ಷೇತ್ರದಲ್ಲೂ ಗಮನಾರ್ಹವಾದುದನ್ನು ಸಾಧಿಸುತ್ತಾ ಇದೆ. ಮಹಿಳೆಯರು ಎಲ್ಲ ಕ್ಷೇತ್ರದಲ್ಲೂ ತಮ್ಮನ್ನು ಆತ್ಮವಿಶ್ವಾಸದಿಂದ, ಧೈರ್ಯದಿಂದ ತೊಡಗಿಸಿಕೊಳ್ಳುತ್ತಿದ್ದಾರೆ.ಆದರೆ ಅವಳಿನ್ನೂ ಸಮಾಜದ ಮುಖ್ಯವಾಹಿನಿಗೆ ಬರಲಾಗಿಲ್ಲ ಎನ್ನುವುದು ಅಷ್ಟೇ ಸತ್ಯ.

# ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಮಹಿಳಾ ಸಾಧಕರು

▸▸ ಶ್ರೀಮತಿ ಸವಿತ ಎನ್.ಇ.

**2019 ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಧ್ಯೇಯ ವಾಕ್ಯ :**
**"ಸಮಾನವಾಗಿ ಯೋಚಿಸಿ, ಕೌಶಲ್ಯತೆಯನ್ನು ನಿರ್ಮಿಸಿ, ಬದಲಾವಣೆಗಾಗಿ ಆವಿಷ್ಕರಿಸಿ"**
**Think Equal, Build Smart, Innovate for Change**

ಮಹಿಳೆಯರು ಇಂದು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಅನೇಕ ಸೌಹಾರ್ದ ಸಹಕಾರಿಗಳಲ್ಲಿ ಅಧ್ಯಕ್ಷರಾಗಿ, ನಿರ್ದೇಶಕಿಯರಾಗಿ, ಉತ್ತಮ ಮುಖ್ಯಕಾರ್ಯನಿರ್ವಾಹಕರಾಗಿ, ದಕ್ಷ ಸಿಬ್ಬಂದಿಗಳಾಗಿ, ಕಾರ್ಯನಿರ್ವಹಿಸುತ್ತಿರುವುದು ನಮಗೆಲ್ಲ ಅಭಿಮಾನದ ಸಂಗತಿ. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿಕೆಲವು ಆಯ್ದ ಮಹಿಳೆ ಸಹಕಾರಿಗಳಲ್ಲಿ ಉತ್ತಮ ಸಾಧಕರ ಬಗ್ಗೆ ಪರಿಚಯಿಸಲಾಗಿದೆ.

**ಸ್ವರ್ಗದ ಕಾವ್ಯ ನಕ್ಷತ್ರವಾದರೆ ವಿಶ್ವದ ಕಾವ್ಯ ಮಹಿಳೆಯಾಗಿದ್ದಾಳೆ.** ಸಮಾಜದ ಸ್ವಾಸ್ಥ್ಯಕ್ಕಾಗಿ ವ್ಯವಸ್ಥೆಯಲ್ಲಿ ಬದಲಾಗಿದೆ ಇಂದಿನ ಯುಗದಲ್ಲಿ ಇರುವುದು ಸಬಲ ಮತ್ತು ದುರ್ಬಲ ಅನ್ನೋ ಎರಡೇ ಗುಂಪು. ಇಲ್ಲಿ ದೈಹಿಕ ಬಲಾಢ್ಯತೆಗಿಂತ ಮಾನಸಿಕ ಸದೃಢತೆ, ಆತ್ಮವಿಶ್ವಾಸದ ಬಹಳ ಮುಖ್ಯ. ಮಹಿಳೆ ಮಾನಸಿಕವಾಗಿ ಅದೆಷ್ಟು ಸಶಕ್ತಳೆಂದರೆ ಇದರಿಂದ ಆಕೆ ತನ್ನ ಎಲ್ಲ ಶಕ್ತಿ ಸೇರಿದರೆ ನೂರು ಆನೆ ಬಲಕ್ಕೆ ಸಮ.ಅಲ್ಲದೆ ಧೈರ್ಯದಿಂದ ಎದುರಾಗುವ ಎಡರು ತೊಡರುಗಳ ನಿವಾರಿಕೊಳ್ಳುತ್ತಾ, ತುಳಿಯಲೆತ್ನಿಸಿದಾಗೆಲ್ಲಾ ಪುಟಿ ಪುಟಿದು ಜಿಗಿವಂಥ ಜಾಣ್ಮೆಯನ್ನು ಆಕೆ ರೂಢಿಸಿಕೊಂಡು **ಬೆಳಕು ಮಂದವಾದಷ್ಟೂ ಕತ್ತಲು ಪ್ರಕಾಶಗೊಳ್ಳುವಂತೆ, ಸಹಕಾರ ಕ್ಷೇತ್ರದಲ್ಲಿ ಮಹಿಳೆ ಬೆಳಕಿನಂತೆ ಪ್ರಜ್ವಲಿಸುವ ಪರ್ವವಾಗಿದ್ದಾಳೆ.**

ಇತ್ತೀಚಿನ ವರ್ಷಗಳಲ್ಲಿ ದೇಶದಾದ್ಯಂತ ಸಹಕಾರಿ ಸಂಸ್ಥೆಗಳಲ್ಲಿ ಮಹಿಳೆಯರು ಹೊಸ ಆಯಾಮವಾಗಿ ಹೊರಹೊಮ್ಮಿದ್ದಾಳೆ. ಹೆಚ್ಚು ಹೆಚ್ಚು ಮಹಿಳೆಯರು ಈಗ ಈ ಕ್ಷೇತ್ರಕ್ಕೆ ಪ್ರವೇಶಿಸುತ್ತಿದ್ದಾರೆ. ಭಾರತದಲ್ಲಿ ಸ್ವಾತಂತ್ರ್ಯ ಮುಂಚೆ ಮತ್ತು ನಂತರ ಸುಧಾರಣಾ ಚಳವಳಿಗಳು ಮಹಿಳೆಯರು ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಕೆಲವು ಶಕ್ತಿಯನ್ನು ಪಡೆಯಲು **ಸಹಕಾರಿ ತತ್ವಗಳು** ಸಹಾಯ ಮಾಡಿವೆ. ಸ್ವಾತಂತ್ರ್ಯದ ನಂತರ ಅವರು ಪಂಚಾಯತ್‌ಗಳಲ್ಲಿ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಿಗೆ ಸ್ಥಾನಗಳನ್ನು ಮೀಸಲಾತಿ ಪಡೆಯುವ ಮೂಲಕ **ಅಭೂತಪೂರ್ವವಾಗಿ** ಸಹಕಾರಿ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದ್ದಾರೆ.

ಸಹಕಾರ ಕ್ಷೇತ್ರದಲ್ಲಿ ಇಂದು ಮಹಿಳೆ ಪುರುಷ ವರ್ಗಕ್ಕಿಂತ ಒಂದು ಹೆಜ್ಜೆ ಮುಂದಿದ್ದಾಳೆ. ಆರ್ಥಿಕ ಸಮಾನತೆಯಲ್ಲಿ ಮಹಿಳೆ ಇಂದು ಸಮಾಜದಲ್ಲಿ ಸದೃಢವಾದ ಆರ್ಥಿಕ ತಳಹದಿಯನ್ನು ಹಾಕಿ ಮಹಿಳೆಯು ಎದ್ದು ನಿಲ್ಲಲ್ಲು ಸಾಧ್ಯವಾಗಿದೆ ಎಂದರೆ ಅದು ಈ ಸಹಕಾರ ಸಂಘ ಸಂಸ್ಥೆಗಳಿಂದ ಆಗಿದೆ ಎಂದರೆ ತಪ್ಪೆನಿಲ್ಲ. ಮಹಿಳೆಯು ನಾಲ್ಕು ಗೋಡೆ ಮಧ್ಯೆಯೇ ಜೀವಿಸಬೇಕಾದವಳಲ್ಲ ಆಕೆಗೂ ಸ್ವಾತಂತ್ರ್ಯದ ಹಕ್ಕು, ಸ್ಥಾನಮಾನದ ಅಗತ್ಯತೆ ಎಂದು ನಿರೂಪಿಸಿದ ನಮ್ಮ ಆಧುನಿಕ ಆದರ್ಶ ಮಹಿಳೆಯರಾದ **ಕಿರಣ್‌ಬೇಡಿ, ಸುಧಾಮೂರ್ತಿ,** ಮುಂತಾದ ಮಹಿಳೆಯರನ್ನು ನೋಡಿದಾಗ ಈ ನಾಲ್ಕುಗೋಡೆಯನ್ನು ಯಶಸ್ವಿಯಾಗಿ ದಾಟಿ ಮುಖ್ಯವಾಹಿನಿಗೆ ಬಂದಿದ್ದಾರೆ.

**ಇಳೆಯಿಂದ ಮೊಳಕೆಯೊಗದಂದು ತಮಟೆಗಳಿಲ್ಲ! ಫಲಮಾಗುವಂದು ತುತ್ತೂರಿ ದನಿಯಲ್ಲ!! ಬೆಳಕಿವ ಸೂರ್ಯಚಂದ್ರರದೊಂದು ಸದ್ದಿಲ್ಲ! ಹೊಲಿ ನಿನ್ನ ತುಟಿಗಳನ್ನು – ಮಂಕುತಿಮ್ಮ ॥** ಎಂಬ ಮಕ್ಕು ತಿಮ್ಮನ ಸಾರದಲ್ಲಿ ತಿಳಿಸಿದೆ ಬೆಳಕನ್ನು ನೀಡುವ ಸೂರ್ಯಚಂದ್ರೇ ಸುಮ್ಮನಿರುವಾಗ ನಿನ್ನ ಕಾರ್ಯವ ನೀ ಮಾಡು ನಿನ್ನ ಕೆಲಸವ ನೀ ಮಾಡು ಆಗ ನೀ ಸೇರುವ ಗುರಿ ತಾನಾಗಿಯೇ ಸೇರುವೆ. – ಇದರರ್ಥವಾಗಿ ಇಂದು ಮಹಿಳೆ ತಮ್ಮ ಕೆಲಸ–ಕಾರ್ಯಗಳನ್ನು ಮಾಡುತ್ತಾ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಅಭಿವೃದ್ಧಿಯನ್ನು ಕಾಣುತ್ತಿದ್ದಾರೆ ಅಂದರೆ ಮಹಿಳೆಯರು ತಮ್ಮ ಕಾರ್ಯದಲ್ಲಿ ಪ್ರಗತಿಯನ್ನು ಸಾಧಿಸಿ ಕಾರ್ಯರೂಪದಲ್ಲಿ ಮಾತಾಡಿದ್ದಾರೆ. ಮಹಿಳೆ ಆರ್ಥಿಕ ಅಭಿವೃದ್ಧಿಯನ್ನು ಹೊಂದಿದರೆ ಆ ಮಹಿಳೆ ಏನು ಸಮಾಜಕ್ಕೆ ನೀಡುತ್ತಾಳೆ ಅವಳ ಪಾತ್ರ ಎಂತಹದ್ದು ಎಂಬುದಕ್ಕೆ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸಾಧಿಸಿದ ಕೆಲವು ಉದಾಹರಣೆಗಳನ್ನು ಮತ್ತು ಮಹಿಳೆಯರ ಕಿರು ಪರಿಚಯವನ್ನು ನೀಡುತ್ತಿದ್ದೇನೆ.

## ಶ್ರೀಮತಿ ಮಂಜುಳಾ ಪಾಟೀಲ್



ಶ್ರೀ ಮಂಜುಳ ಪಾಟೀಲ್‌ರವರು ವಿದ್ಯಾರ್ಥಿ ಜೀವನದಿಂದಲೆ ಸಾಮಾಜಿಕ ಅಬಿವೃದ್ಧಿಯ ಕಳಕಳಿಯನ್ನು ಹೊಂದಿದ್ದ ಶ್ರೀಮತಿ ಮಂಜುಳಾ ಪಾಟೀಲರವರು ಹೈಸ್ಕೂಲನಲ್ಲಿ ವಿದ್ಯಾರ್ಥಿನಾಯಕಿಯಾಗಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದವರು. ಮೂಲತಃ ಕೊಪ್ಪಳ ಜಿಲ್ಲೆಯವರು. ಕೃಷಿ ಕುಟುಂಬದಲ್ಲಿ ಜನನ. ತಂದೆ ಕೆ. ಸೂಗಪ್ಪ ಕೃಷಿಯ ಜೊತೆಗೆ ವಕೀಲಿ ವೃತ್ತಿಯವರು. ಎಸ್.ಎಸ್.ಎಲ್.ಸಿವರೆಗೆ ಶಿಕ್ಷಣ.ಶ್ರೀ ಅಮರೇಶಪಾಟೀಲರ ಜೊತೆ ವಿವಾಹದ ನಂತರ ಸಿಂಧನೂರಿನಲ್ಲಿ ವಾಸ. ಸಮಾಜದ ಅನಿಷ್ಟ ಪದ್ಧತಿಗಳ ನಿರ್ಮೂಲನೆಗೆ ಹೋರಾಟಕ್ಕಾಗಿ ಸಿಂಧನೂರಿನ ಅಕ್ಕನ ಬಳಗದ ಸಕ್ರೀಯ ಕಾರ್ಯಕರ್ತೆಯಾಗಿ ಗುರುತಿಸಿಕೊಂಡು ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡವರು. ಇವರು ಸಾಹಿತ್ಯದಲ್ಲಿ ಆಸಕ್ತಿಯಿರುವವರು ಸಿಂಧನೂರಿನ ಸಾಹಿತ್ಯ ಪರಿಷತ್ತಿನ ಸಕ್ರೀಯ ಕಾರ್ಯಕರ್ತೆಯಾಗಿ ಕಾರ್ಯ ನಿರ್ವಹಿಸಿದ್ದಾರೆ. 'ಸಹಚರ' ಎಂಬ ಎನ್.ಜಿ.ಓ. ಸಂಸ್ಥೆಯ ಮುಖ್ಯ ಧರ್ಮದರ್ಶಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಸಿಂಧನೂರಿನಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಲು ಹೋರಾಟ ಮಾಡಿದ್ದಾರೆ. ಸಮಾಜದ ಅಭಿವೃದ್ಧಿಗೆ ಶಿಕ್ಷಣವೆ ಮೂಲ ಎಂಬ ತತ್ವದ ಆಧಾರದ ಮೇಲೆ ಶಿಕ್ಷಣ ಕ್ಷೇತ್ರದಲ್ಲೂ ಕಾರ್ಯನಿರ್ವಹಿಸುವ ಆಸಕ್ತಿಯಿಂದ ಅಂಬಾದೇವಿ ವಿದ್ಯಾವರ್ಧಕ ಸಂಘದ ಸಕ್ರೀಯ ಕಾರ್ಯಕರ್ತೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಹಕಾರ ಕ್ಷೇತ್ರದ ಮೂಲಕ ಜನ ಸಾಮಾನ್ಯರಿಗೆ ಹೆಚ್ಚಿನ ಸೇವೆ ಮಾಡಲು ಸಾಧ್ಯ ಎಂದು ತಿಳಿದು ಸಹಕಾರಿ ಕ್ಷೇತ್ರಕ್ಕೆ ಪ್ರವೇಶ. ಜನತಾ ಬಝಾರ ಸಿಂಧನೂರು ಇದರ ಅಧ್ಯಕ್ಷರಾಗಿ 8 ವರ್ಷಗಳ ಕಾಲ ಸೇವೆ ಸಲ್ಲಿಸಿ ಸಂಸ್ಥೆಯನ್ನು ಲಾಭದಾಯಕವಾಗಿ ಮುನ್ನಡೆಸಿದ್ದಾರೆ. ಜನತಾ ಸೌಹಾರ್ದ ಸಹಕಾರಿಯ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸುತ್ತಿರುವ ಇವರು ಪ್ರಸ್ತುತ ಕಿರಣ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿರುವ ಇವರು ಸಂಯುಕ್ತ ಸಹಕಾರಿಯ ನಿರ್ದೇಶಕಿಯಾಗಿ ರಾಯಚೂರು ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದರು. ಸಹಕಾರ ಭಾರತಿ–ಕರ್ನಾಟಕದ ರಾಜ್ಯ ಕಾರ್ಯಕಾರಿಣಿಯಲ್ಲಿ ಸಕ್ರೀಯವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಪ್ರವೇಶವಿರದಿದ್ದರೆ ಜನಸಾಮಾನ್ಯರಿಗೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಅವಕಾಶಗಳಿವೆ. ಸಹಕಾರಿ ಕ್ಷೇತ್ರದಲ್ಲಿ ಮಹಿಳೆಯರಿಗೆ ಹಾಗೂ ಯುವಕರಿಗೆ ಹೆಚ್ಚಿನ ಅವಕಾಶಗಳು ದೊರಕುವಂತಾಗಬೇಕು ಎಂದು ಅಭಿಪ್ರಾಯವುಳ್ಳವರಾಗಿದ್ದಾರೆ. ಶ್ರೀಮತಿ ಮಂಜುಳಾ ಪಾಟೀಲವರು ಶಿಕ್ಷಣ ಹಾಗೂ ಅಧ್ಯಯನದಲ್ಲಿ ಹೆಚ್ಚಿನ ಆಸಕ್ತಿ ಹೊಂದಿರುವುದು ಮತ್ತು ಇವರು ಸಿಂಧನೂರು ನಗರ ಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವುದು ವಿಶೇಷ. ಕೌಟುಂಬಿಕ ಹಾಗೂ ಸಾಮಾಜಿಕ ಜವಬ್ದಾರಿಯನ್ನು ನಿರ್ವಹಿಸುತ್ತ ತಮ್ಮ ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದು ವಿಶೇಷ.

## ಶ್ರೀಮತಿ ಹೆಚ್.ಸಿ. ನಾಗರತ್ನ



ಶ್ರೀಮತಿ ಹೆಚ್.ಸಿ.ನಾಗರತ್ನ ಮೂಲತಃ ಮಂಡ್ಯ ಜಿಲ್ಲೆಯ ಹಲ್ಲೆಗೆರೆ. ತಂದೆ ಶ್ರೀ ಚಲುವಪ್ಪ .ಕೃಷಿ ಕುಟುಂಬ. ಸಮಾಜದ ಸೇವೆಗೆ ಪ್ರಥಮ ಆದ್ಯತೆ ನೀಡುವ ಇವರು ಪ್ರಸಕ್ತ 90,000 ಮಕ್ಕಳಿಗೆ ಬಿಸಿಯೂಟ ಒದಗಿಸುವ "ಅದಮ್ಯ ಚೇತನ" ವೆಂಬ ಸಂಸ್ಥೆಯ ಕ್ರಿಯಾಶೀಲ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ."ತಾಯಿಮನೆ" ಎಂಬ ಟ್ರಸ್ಟಿನಲ್ಲಿರುವ 35 ಅನಾಥ ಮಕ್ಕಳ ಊಟ ವಸತಿ ಶಿಕ್ಷಣ ಮತ್ತು ಸರ್ವಾಂಗೀಣ ಪ್ರಗತಿಯ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಆಟಪಾಟ ಎಂಬ ಯೋಜನೆಯಡಿಯಲ್ಲಿ ಸರಕಾರಿ ಶಾಲೆಯ ಮಕ್ಕಳಿಗೆ ಕನ್ನಡ ಪಾಠ ಹೇಳಿಕೊಡುವ ಹವ್ಯಾಸಿ ಶಿಕ್ಷಕಿಯಾಗಿದ್ದಾರೆ. ಸಾಮಾಜಿಕ ಕಳಕಳಿಯನ್ನು ಹಾಗೂ ಸಹಕಾರಿ ಮನೋಭಾವವನ್ನು ರಕ್ತಗತವಾಗಿ ರೂಢಿಸಿಕೊಂಡವರು. ಸಮಾಜದ ಅನಿಷ್ಟಗಳನ್ನು ದೂರವಿರಿಸಲು, ಸಮಾಜದ ಎಲ್ಲ ವರ್ಗದ ಜನರ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸುವ ಹೋರಾಟದ ಸ್ವಭಾವದವರು. ಸಹಕಾರಿ ಕ್ಷೇತ್ರದಲ್ಲಿ ಬೆಂಗಳೂರಿನ ಗ್ರೇನ್ ಮರ್ಚೆಂಟ್ಸ್ ಸಹಕಾರ ಬ್ಯಾಂಕಿನ ಸದಸ್ಯತ್ವ ಹೊಂದಿರುವ ಇವರು ಸಹಕಾರ ಕ್ಷೇತ್ರದಿಂದ ಸಾಮಾನ್ಯ ಜನರಿಗೆ ಸಾಕಷ್ಟು ಸೇವೆ ಮಾಡಬಹುದಾಗಿದೆ. ಇದರಲ್ಲಿ ಅನೇಕ ಅಧ್ಯಯನ ಯೋಗ್ಯ ವಿಷಯಗಳಿವೆ. ಬೃಹದಾಕಾರವಾಗಿ ಬೆಳೆದಿರುವ ಸಾಮಾನ್ಯ ಜನರಿಗೆ ಸಹಕಾರಿ ಕ್ಷೇತ್ರದ ಸಾಧನೆಗಳ ಅರಿವಿಲ್ಲ. ಸಹಕಾರಿ ಕ್ಷೇತ್ರದ ಬಗ್ಗೆ ಸಮಾಜದಲ್ಲಿ ಸಕಾರಾತ್ಮಕ ಮನೋಭಾವ ರೂಢಿಸುವ ಅಗತ್ಯತೆ ಇದೆ. ಸಹಕಾರಿ ಕ್ಷೇತ್ರದ ಅಪಾರ ಚಟುವಟಿಕೆಗಳ ಮಾಹಿತಿ ಒದಗಿಸುವ ಕೆಲಸ ನಡೆಯಬೇಕಿದೆ. ಮಹಿಳೆಯರು ಹಾಗೂ ಯುವಕರಲ್ಲಿ ಈ ಬಗ್ಗೆ ಪ್ರಜ್ಞೆ ಮೂಡಿಸಿ ಸಹಕಾರದ ಬಗ್ಗೆ ಒಲವು ಮೂಡಿಸಿ ಅವರು ಈ ಕ್ಷೇತ್ರದ ಪ್ರಯೋಜನ ಪಡೆಯುವಂತಾಗಬೇಕಿದೆ ಎಂದು ಅಭಿಪ್ರಾಯಪಡುತ್ತಾರೆ.



## ಶ್ರೀಮತಿ ಸರಸ್ವತಿ ಎನ್.ರವಿ.

ಬಾಲ್ಯದ ಸಾಲು ಸಾಲು ಸವಾಲುಗಳನ್ನು ಎದುರಿಸುತ್ತಾ ಸಂಕಲ್ಪ ಶಕ್ತಿಯಿಂದಲೇ ಸಾಧಕಿಯಾಗಿ ಗುರುತಿಸಿಕೊಂಡವರೇ ಶ್ರೀಮತಿ ಸರಸ್ವತಿ ಎನ್.ರವಿ. ಎಮ್‌ಬಿಎ ಪದವೀಧರರಾದ ಇವರು ರಾಜ್ಯದ ಪ್ರತಿಷ್ಠಿತ ಸ್ವಯಂ ಸೇವಾ ಸಂಸ್ಥೆಗಳಲ್ಲೊಂದಾದ ಸ್ಕೋಡವೇಸ್ (ರಿ) ಖಜಾಂಚಿಗಳಾಗಿ, ಮುಖ್ಯ ಹಣಕಾಸು ಅಧಿಕಾರಿಯಾಗಿ, ಶಾಲ್ಮಲಾ ಅಗ್ರೋ ಫೇರ್ ಎಂಡ್ ಇಲೈಟ್ ಸರ್ವೀಸಸ್ ಪ್ರೈ ಲಿಮಿಟೆಡ್ ಕಂಪನಿಯ ನಿರ್ದೇಶಕರಾಗಿ, ಸ್ಕೊಡವೆಸ್ ಮಹಿಳಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಏಕೈಕ ಮಹಿಳಾ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಸರಸ್ವತಿಯವರು ಸದಾ ಕ್ರಿಯಾಶೀಲ ಚಟುವಟಿಕೆ ಹಾಗೂ ಜವಾಬ್ದಾರಿ ನಿರ್ವಹಣೆಯಿಂದಲೇ ಸಮಾಜದಲ್ಲಿ ಗುರುತಿಸಿಕೊಂಡವರು. ಸಮಯಪ್ರಜ್ಞೆ, ದೂರದೃಷ್ಟಿ, ಮುಂದಾಲೋಚನೆ, ಸ್ಥಾನಬದ್ಧತೆಯೊಂದಿಗೆ ಕೃತೃತ್ವ ಶಕ್ತಿಯನ್ನು ರೂಢಿಸಿಕೊಂಡು ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿರುವ ಶ್ರೀಮತಿ ಸರಸ್ವತಿ ಅವರು ಸಹಕಾರಿ ಕ್ಷೇತ್ರದಲ್ಲೂ ಗಣನೀಯ ಸಾಧನೆ ಮಾಡಿದ್ದಾರೆ.

ಸರಸ್ವತಿಯವರು ತನ್ನನ್ನು ತೊಡಗಿಸಿಕೊಂಡ ಕಾರ್ಯವ್ಯಾಪ್ತಿ ಬಹಳ ಹಿರಿದು – ಸಹಕಾರಿ ಕ್ಷೇತ್ರ, ಮಹಿಳಾ ಸಶಕ್ತೀಕರಣ, ಮಕ್ಕಳ ಹಕ್ಕುಗಳ ರಕ್ಷಣೆ, ಯುವ ಸಬಲೀಕರಣ, ಕೃಷಿ ಮತ್ತು ಜೀವನಾಧಾರಿತ ಕಾರ್ಯಕ್ರಮಗಳು, ಕೌಶಲ್ಯಾಭಿವೃದ್ಧಿ, ಪುನರ್ವಸತಿ ಮತ್ತು ಪುನರುಜ್ಜೀವನ ವ್ಯವಸ್ಥಾಪನೆ, ಸಂಚಾರಿ ಆಸ್ಪತ್ರೆಗಳು, ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆಯಲ್ಲಿ ಗ್ರಾಮ ಅರಣ್ಯ ಸಮಿತಿಗಳ ನಿರ್ಮಾಣ ಮತ್ತು ನಿರ್ವಹಣಾ ತರಬೇತಿಗಳು ಇತ್ಯಾದಿಗಳ ಮೂಲಕ 18 ಜಿಲ್ಲೆಗಳಲ್ಲಿ ಸುಮಾರು 13 ಲಕ್ಷಕ್ಕೂ ಹೆಚ್ಚು ಬಡಜನರು ಇವರ ಸಂಸ್ಥೆಗಳ ಮೂಲಕ ಪ್ರಯೋಜನ ಪಡೆದಿದ್ದಾರೆ. ಶ್ರಮಿಕ, ಬಡ ಕೂಲಿಕಾರ್ಮಿಕ, ರೈತ ಮಹಿಳೆಯರ ಆರ್ಥಿಕ ಸ್ವಾವಲಂಬನೆಗಾಗಿ ಸೌಹಾರ್ದ ಸಹಕಾರಿ ಸಂಸ್ಥೆಯನ್ನು ಕಟ್ಟಿ ಸುಮಾರು 4250 ಮಹಿಳೆಯರನ್ನು ಸಹಕಾರಿ ಕ್ಷೇತ್ರಕ್ಕೆ ಪರಿಚಯಿಸಿದ ಹೆಗ್ಗಳಿಕೆ ಇವರದ್ದಾಗಿದೆ.ಮಹಿಳಾ ಸಬಲೀಕರಣದ ಉದ್ದೇಶದಿಂದ ಬಡ ಕುಟುಂಬಗಳಿಗೆ ಸೇರಿದ ಮಹಿಳೆಯರನ್ನು ಒಟ್ಟು ಸೇರಿಸಿ ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿಯಮಿತವನ್ನು ಸ್ಥಾಪಿಸಿ ಅಧ್ಯಕ್ಷರೂ ಆಗಿ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ.

ಸಾಮಾಜಿಕ ಕಳಕಳಿಯೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ಸ್ಕೊಡವೆಸ್ ಸ್ವಯಂ ಸೇವಾ ಸಂಸ್ಥೆಯ ಮುಖ್ಯ ಹಣಕಾಸು ಅಧಿಕಾರಿಯಾಗಿ 18 ಜಿಲ್ಲೆಗಳ

ವ್ಯಾಪ್ತಿಯಲ್ಲಿನ ಎಲ್ಲಾ ಯೋಜನೆಗಳ ಆರ್ಥಿಕ ನಿಯಂತ್ರಣ ಹಾಗೂ ಸುಮಾರು 260 ಕ್ಕೂ ಹೆಚ್ಚು ಸಿಬ್ಬಂದಿಗಳ ನಿರ್ವಹಣೆಯ ಜವಾಬ್ದಾರಿಯನ್ನು ಅತ್ಯಂತ ಯಶಸ್ವಿ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದಾರೆ. ಸಾವಯವ ಕೃಷಿ, ಜಲಾನಯನ, ಗ್ರಾಮೀಣ ಆರೋಗ್ಯ, ಶಿಕ್ಷಣ, ಸ್ವಯಂ ಉದ್ಯೋಗ, ಕೌಶಲ್ಯಾಭಿವೃದ್ಧಿ, ಮಹಿಳಾ ಸಬಲೀಕರಣ ಸೇರಿದಂತೆ ಹತ್ತು ಹಲವು ಯೋಜನೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಇವರು ಸಮಯ ಮತ್ತು ವೆಚ್ಚ (Time & Cost) ಸಂಯೋಜನಾ ತಜ್ಞರಾಗಿರುವುದರಿಂದ ಸ್ಕೊಡವೆಸ್ ಸಂಸ್ಥೆ ಪಾರದರ್ಶಕ ಹಾಗೂ ಗುಣಮಟ್ಟದ ಸೇವೆಯೊಂದಿಗೆ ಗುರುತಿಸಿಕೊಳ್ಳುವಲ್ಲಿ ಸಾಧ್ಯವಾಗಿದೆ.

ಇವರು ನಿರ್ದೇಶಕರಾಗಿರುವ ಸೇಫ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಇಂದು ಸೇಫ್ ಡಿಜಿಟಲ್, ಸೇಫ್ ಗಾರ್ಮೆಂಟ್ಸ್, ಸೇಫ್ ಫಾರ್ಮಾ, ಸೇಫ್ ಟೂರ್ಸ್ ಎಂಡ್ ಹಾಲಿಡೇಸ್ ಹೀಗೆ ಹಲವಾರು ವಿಭಾಗಗಳಲ್ಲಿ ತನ್ನ ಕಾರ್ಯವನ್ನು ನಿರ್ವಹಿಸುತ್ತಿದ್ದು ಇವುಗಳು ರೂಪುಗೊಳ್ಳುವಲ್ಲಿ ಶ್ರೀಮತಿ ಸರಸ್ವತಿ ರವಿ ಅವರೇ ಕಾರಣರೆಂದು ಅಲ್ಲಿನ ಉದ್ಯೋಗಿಗಳು ಮುಕ್ತಕಂಠದಿಂದ ಹೇಳುತ್ತಾರೆ.

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ತಮ್ಮ ಸವಾಲುಗಳ ಬಾಲ್ಯವನ್ನು ಹಾಗೂ ಪದವಿವರೆಗಿನ ವಿದ್ಯಾಭ್ಯಾಸವನ್ನು ಪೂರೈಸಿದ ಇವರು ಮುಂದೆ ಎಂಬಿಎ ಓದಬೇಕೆಂಬ ಅದಮ್ಯ ಆಸೆಯಿದ್ದರೂ ಆರ್ಥಿಕವಾಗಿ ಸಮಸ್ಯೆಯಲ್ಲಿದ್ದ, ತಮ್ಮಂದಿರನ್ನೂ ಓದಿಸಬೇಕಾದ ಜವಾಬ್ದಾರಿ ಹೊಂದಿದ್ದ ತಂದೆಯವರಿಗೆ ಮತ್ತೆ ಆರ್ಥಿಕ ಹೊರೆಯಾಗಬಾರದೆಂದು ಪದವಿಯವರೆಗೆ ಓದಿ ವಿದ್ಯಾಭ್ಯಾಸ ಮೊಟಕುಗೊಳಿಸಿದ್ದರು. ವಿವಾಹ ನಂತರ ಶಿರಸಿಯನ್ನು ಕಾರ್ಯ ಕ್ಷೇತ್ರವನ್ನಾಗಿರಿಸಿಕೊಂಡು ನಂತರ ಮತ್ತೆ ಛಲಬಿಡದೆ ಓದಿ ಎಂಬಿಎ ಪದವಿಯನ್ನು ಪಡೆದರು.ತಂದೆ ಎನ್ ರವಿ ತಾಯಿ ನೀಲಾರವರ ಹಿರಿಯ ಪುತ್ರಿಯಾಗಿರುವ ಇವರಿಗೆ ಇಬ್ಬರು ಸಹೋದರರು. ಹಿರಿಯ ತಮ್ಮ ನಾಗರಾಜ.ಎನ್.ರವಿ ಅವರು ಸಾಫ್ಟ್‌ವೇರ್ ಇಂಜನೀಯರ್ ಆಗಿ ಎಲ್&ಟಿ ಇನ್‌ಫೊಟೆಕ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಕಿರಿಯ ತಮ್ಮ ಮುರಳಿ.ಎನ್.ರವಿ ಖಂಕ ಕನಸಲ್ಟಂಟ್ ಆಗಿ ಸಾಫ್ಟವೇರ್ ಕಂಪನಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.ಇವರ ಪತಿ ಪ್ರಕಾಶ ಭಟ್‌ರವರು ಕೃಷಿ, ತೋಟಗಾರಿಕೆಯಲ್ಲಿ ತೊಡಗಿಕೊಂಡಿದ್ದು ಖ್ಯಾತ ಛಾಯಾಚಿತ್ರಗ್ರಾಹಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.ಮಗ ರೋಹನ್ 4ನೇ ವರ್ಗದಲ್ಲಿ ಓದುತ್ತಿದ್ದಾನೆ. ಇದು ಸರಸ್ವತಿ ಅವರ ಕೌಟುಂಬಿಕ ಮಾಹಿತಿಯಾಗಿದ್ದು ಅಪಾರ ಸಂಖ್ಯೆಯ ಸ್ನೇಹಿತರು ಹಾಗೂ ಆತ್ಮೀಯ ವರ್ಗವನ್ನು ಸೃಷ್ಟಿಸಿಕೊಂಡ ಆದರ್ಶ ಮಹಿಳೆಯಾಗಿದ್ದಾರೆ.

ಸಹಕಾರಿ ಕ್ಷೇತ್ರದಲ್ಲಿ ಭರವಸೆಯ ಮಹಿಳೆಯಾಗಿ ಗುರುತಿಸಿಕೊಂಡ ಸರಸ್ವತಿಯವರು ನಮ್ಮ ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿಯ ಏಕೈಕ ಮಹಿಳಾ ನಿರ್ದೇಶಕಿಯಾಗಿ ಚುನಾವಣೆಯಲ್ಲಿ ಬಹುಮತದಿಂದ ಆಯ್ಕೆಯಾದವರು.ಸಂಯುಕ್ತ ಸಹಕಾರಿಯ ಎಲ್ಲ ನಿರ್ದೇಶಕರೊಂದಿಗೆ ಸೌಹಾರ್ದಯುತವಾಗಿ ಬದ್ಧತೆಯಿಂದ ಜವಾಬ್ದಾರಿಯನ್ನು ನಿರ್ವಹಿಸುವ ಶ್ರೀಮತಿ ಸರಸ್ವತಿರವರು ಎಲ್ಲರಿಗೂ ಪ್ರೀತಿ ಪಾತ್ರರಾಗಿದ್ದಾರೆ.ಸೌಹಾರ್ದ ಸಂಯುಕ್ತ ಸಹಕಾರಿಯ ಕಾರ್ಯ ನಿರ್ವಹಣೆಯಲ್ಲಿ ಅತ್ಯಂತ ಜವಾಬ್ದಾರಿಯುತವಾಗಿ ಪಾಲ್ಗೊಳ್ಳುವ ಇವರು ಮಹಿಳಾ ಸಹಕಾರಿ ಕ್ಷೇತ್ರದಲ್ಲಿ ಸಾಧಕಿಯಾಗಿ ಭರವಸೆ ಮೂಡಿಸಿದ್ದಾರೆ.

ತನ್ನ ವ್ಯಾಪ್ತಿಯ ಕಾರ್ಯ ಕ್ಷೇತ್ರದಲ್ಲಿ ಸರಸ್ವತಿಯವರ ಬಗ್ಗೆ ಜನರಾಡುವುದು ಹೀಗೆ "ಓರ್ವ ಬಡ ಕುಟುಂಬದಲ್ಲಿ ಜನಿಸಿದ ಮಹಿಳೆ ಇಚ್ಛಾ ಶಕ್ತಿಯಿದ್ದರೆ ಎಷ್ಟೆಲ್ಲಾ ಸಾಧಿಸಬಹುದು..! ಕಠಿಣ ಪರಿಶ್ರಮ, ಉನ್ನತ ಧ್ಯೇಯ, ನಂಬಿದ ಮೌಲ್ಯಗಳ ಮೂಲಕ ಸಾಧಿಸಿದ ಗುರಿ ಅಚ್ಚರಿ ಮೂಡಿಸುತ್ತದೆ. ಸಾಂಪ್ರದಾಯಿಕ ಬದುಕನ್ನು ಬಾಳುವ ಜನರ ಮಧ್ಯ ಅವರು ಎಲ್ಲ ಅಡೆತಡೆಗಳನ್ನು ಮೆಟ್ಟಿ ನಿಂತು ಬೆಳೆದ ಪರಿ, ಇತರರನ್ನೂ ಬೆಳೆಸಿದ ರೀತಿ, ಲಕ್ಷಾಂತರ ಜನರ ಜೀವನಕ್ಕೆ ಸಹಕರಿಸಿದ ಸಾಧನೆ ಅದ್ಭುತ ಮತ್ತು ನಮ್ಮಂತಹವರಿಗೆ ಒಂದು ಜೀವನಪಾಠ"

ಇಂತಹ ಬಹುಮುಖ ವ್ಯಕ್ತಿತ್ವದ ಸಾಧಕಿಯಾದ ಶ್ರೀಮತಿ ಸರಸ್ವತಿ ಎನ್.ರವಿ ಅವರು ಇನ್ನೂ ಹೆಚ್ಚಿನ ಸಾಧನೆಯೊಂದಿಗೆ ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ಗುರುತಿಸಿಕೊಂಡು ನೊಂದವರ ಧ್ವನಿಯಾಗಿ ಬೆಳೆಯಲೆಂದು ಆಶಿಸುತ್ತೇವೆ.



## ಕಲಬುರಗಿ ಮಹಿಳಾ ಸೌಹಾರ್ದ ಸಹಕಾರಿ ನಿಯಮಿತ

ಶ್ರೀಮತಿ ಶೈಲಜಾ ತಪಲಿಯವರು ಕಲಬುರಗಿ ಮಹಿಳಾ ಸೌಹಾರ್ದ ಸಹಕಾರಿಯ ಸಂಸ್ಥಾಪನಾ ಅಧ್ಯಕ್ಷರಾಗಿದ್ದು, ಸಹಕಾರಿಯನ್ನು ಕಲಬುರಗಿ ನಗರದಲ್ಲಿ 01.01.2009 ರ ಸೌಹಾರ್ದ ಸಹಕಾರಿ ದಿನದಂದು ಅಧಿಕೃತವಾಗಿ ಕಾರ್ಯ ಪ್ರಾರಂಭಿಸಿ, ಪ್ರಸ್ತುತ 10 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ. ಸಹಕಾರಿಯು ಪ್ರಾರಂಭದಲ್ಲಿ 400 ಜನ ಮಹಿಳಾ ಸದಸ್ಯೆಯರು ಹಾಗು 4 ಲಕ್ಷ ಶೇರು ಮೊತ್ತವನ್ನು ಸಂಗ್ರಹಿಸಿ ಕಾರ್ಯಾರಂಭ ಮಾಡಿದ ನಮ್ಮ ಮಹಿಳಾ ಸಹಕಾರಿಯು 10 ವರ್ಷಗಳಲ್ಲಿ 3000 ಜನ ಮಹಿಳಾ ಸದಸ್ಯೆಯರನ್ನು ಹೊಂದಿ ಸುಮಾರು 22 ಕೋಟಿ ವ್ಯವಹಾರವನ್ನು ನಡೆಸುತ್ತಿದೆ.ನಮ್ಮ ಸಹಕಾರಿಗಾಗಿ ನಿವೇಶನವನ್ನು ಕಲಬುರಗಿ ನಗರ ಪ್ರಾಧಿಕಾರದ ಕೋಟನೂರ "ಡಿ" ಧರಿಯಾಪುರ–ಕೋಟನೂರನಲ್ಲಿರುವ ಪ್ಲಾಟ್‌ನ್ನು ಖರೀದಿಸಲಾಗಿದೆ.

ಹತ್ತು ವರ್ಷಗಳನ್ನು ಪೂರೈಸಿದ ಹಿನ್ನಲೆಯಲ್ಲಿ ಸಮಾಜ ಸೇವೆಯ ದೃಷ್ಟಿಯಿಂದ ಈ ಮಹಿಳಾ ಸಹಕಾರಿಯಿಂದ ಕೊಡುಗೆಯಾಗಿ ಕಲಬುರಗಿ ಜಿಲ್ಲೆಯ ಬಡ ಹಾಗು ಮಧ್ಯಮ ವರ್ಗದ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಹೊಂದುವುದಕ್ಕೆ ಅವಕಾಶ ಕಲ್ಪಿಸುವದಕ್ಕಾಗಿ ಕೆಮಾಸ್– ಕಲಬುರಗಿ ಮಹಿಳಾ ಸ್ವ ಉದ್ಯೋಗಿಗಳ ಸೇವಾ ಕೇಂದ್ರವನ್ನು (KMASS – Kalaburagi MAhila Self – employment Services) ಸಧ್ಯದಲ್ಲಿಯೇ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಈ ಯೋಜನೆಯ ಮೂಲಕ ಮಹಿಳೆಯರು ತಮ್ಮ ಬಿಡುವಿನ ವೇಳೆಯಲ್ಲಿ ತಮ್ಮ ತಮ್ಮ ಮನೆಯಲ್ಲಿಯೇ ಮಾಡಬಹುದಾದ ವಿವಿಧ ಗೃಹ – ಗುಡಿ ಕೈಗಾರಿಕೆಗಳ ಬಗ್ಗೆ ಮಾಹಿತಿ, ತರಬೇತಿ, ಯಂತ್ರಗಳ ವ್ಯವಸ್ಥೆ, ಕಚ್ಚಾ ವಸ್ತುಗಳ ಪೂರೈಕೆ, ತಯಾರಿಕೆ ಮತ್ತು ಮಾರಾಟದ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ ಸ್ವ ಉದ್ಯೋಗಕ್ಕೆ ದಾರಿ ಮಾಡಿಕೊಡುವದರೊಂದಿಗೆ ಆರ್ಥಿಕ ಸ್ವಾವಲಂಬನೆಯೊಂದಿಗೆ ಕುಟುಂಬ–ಸಮಾಜ–ದೇಶದ ಸರ್ವತೋಮುಖ ಬೆಳವಣಿಗೆಯಲ್ಲಿ

ಮಹಿಳೆಯರನ್ನು ಸಮಭಾಗಿಗಳ್ನಾಗಿಸುವ ಉನ್ನತ ಉದ್ದೇಶವನ್ನು ಸಹಕಾರಿಯು ಹೊಂದಿದೆ. HOME-MADE AND HAND-MADE PRODUCTS – ಮನೆಯಲ್ಲಿ ತಯಾರಾದ ಮತ್ತು ಕೈಯಲ್ಲಿ ತಯಾರಿಸಿದ ವಿವಿಧ ರೀತಿಯ ಅಡುಗೆಗಳ ಮಾರಾಟದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಉತ್ತಮ ಗುಣಮಟ್ಟ, ಸ್ವಚ್ಚತೆ, ಮನೆ ಅಡುಗೆಯ ರುಚಿ ಹೊಂದಿರುವ ಹಾಗು ಯಾವುದೇ ರೀತಿಯ ರಾಸಾಯನಿಕ ವಸ್ತುಗಳನ್ನು ಬಳಸದೆ ತಯಾರಿಸಿದ ಶಾವಿಗೆ, ಹಪ್ಪಳ–ಸಂಡಿಗೆ, ಜೋಳ – ಸಜ್ಜೆ ರೊಟ್ಟಿ, ದಪಾಟಿ, ಎಲ್ಲಾ ರೀತಿಯ ಒಣ ಚಟ್ನಿಗಳು, ಹಸಿ ಚಟ್ನಿಗಳು, ಮಸಾಲ ಪುಡಿಗಳು, ಉಪ್ಪಿನಕಾಯಿಗಳು, ಕುರಕಲು ತಿಂಡಿಗಳು, ಸಿಹಿ ತಿಂಡಿಗಳು ಹಾಗು ಬುತ್ತಿ ಊಟದ ವ್ಯವಸ್ಥೆಯನ್ನು ಸಹ ಮಾಡಲಾಗುತ್ತಿದೆ. ಮದುವೆಯ ಸುರಗಿ ಸಾಮಾನುಗಳು, ಕುಸರಿ ಕೆಲಸ, ಬ್ಲೌಸ್ ಮತ್ತು ಸೀರೆಗಳ ಮೇಲೆ ಡಿಸೈನ್, ಗೊಂಡೆ ಕಟ್ಟುವುದು, ಪೇಟಿಂಗ್, ರಂಗೋಲಿ, ಮೆಹಂದಿ ಇನ್ನಿತರ ಎಲ್ಲಾ ಕೆಲಸಗಳ ತರಬೇತಿ, ಅಗತ್ಯ ಉಪಕರಣಗಳ ಹಾಗು ಕಚ್ಚಾ ವಸ್ತುಗಳ ಪೂರೈಕೆ, ಮಾರಾಟದ ವ್ಯವಸ್ಥೆಯನ್ನು ಮಾಡಿಕೊಡಲಾಗುವುದು. ಸಾಹಿತ್ಯ, ಸಂಗೀತ, ನಾಟಕ, ನಾಟ್ಯ ಕಲೆಗಳ ಅಭಿರುಚಿ ಹೊಂದಿರುವ ಮಹಿಳೆಯರಿಗೆ ಉತ್ತೇಜನ ನೀಡುವ ಮೂಲಕ ಅವಕಾಶ ಕಲ್ಪಿಸುವುದರೊಂದಿಗೆ ಅವರವರ ಕಲೆಗಳನ್ನು ಪೋಷಿಸಿ ಬೆಳೆಸಲಾಗುತ್ತಿದೆ ಎಂದು ತಿಳಿಸಿದರು.



## ಶ್ರೀಮತಿ ಬಿ ಎನ್ ನಾಗಮಣಿ

"ಉತ್ತಮ ಸಹಕಾರಿ" ಎಂದು 2016–17ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಿಂದ ಪ್ರಶಸ್ತಿ ಪಡೆದ ಅಪರೂಪದ ಮಹಿಳೆ ಶ್ರೀಮತಿ ಬಿ.ಎನ್. ನಾಗಮಣಿ. ಇವರು 1996 ರಲ್ಲಿ ಸ್ಥಾಪಿಸಿದ ಸಂಸ್ಥೆ, 2017–18 ರಲ್ಲಿ ಕರ್ನಾಟಕದ ಅತ್ಯುತ್ತಮ ಮಹಿಳಾ ಸಹಕಾರ ಸಂಘ ಎಂದು ನ್ಯಾಷನಲ್ ಕೋ–ಆಪರೇಟಿವ್ ಡೆವಲಪ್ಮೆಂಟ್ ಕಾರ್ಪೊರೇಷನ್, ನ್ಯೂ ಡೆಲ್ಲಿ ಇವರಿಂದ ಪ್ರಶಸ್ತಿಗಳಿಸಿದ ಯಶಸ್ವಿನಿ ಮಹಿಳಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿಯಮಿತಕ್ಕೆ ಲಭಿಸಿದೆ. ಬಿ.ಕಾಂ ಪದವೀಧರರಾದ ಇವರು ಇದಕ್ಕೂ ಮೊದಲು ಭಾರತ ಸರ್ಕಾರದ ಅಧೀನ ಸಂಸ್ಥೆ ನ್ಯಾಷನಲ್ ಟೆಕ್ಸ್ಟೈಲ್ಸ್ ಕಾರ್ಪೊರೇಷನ್ ಸಂಸ್ಥೆಯಲ್ಲಿ ಜನರಲ್ ಮ್ಯಾನೇಜರ್ ಅವರಿಗೆ ಆಪ್ತ ಕಾರ್ಯದರ್ಶಿಯಾಗಿ 15 ವರ್ಷಗಳ ಕಾಲ ಕಾರ್ಯನಿರ್ವಹಿಸಿ 1995ರಲ್ಲಿ ಸ್ವಯಂ ನಿವೃತ್ತಿ ಪಡೆದರು.

1996ರ ಒಂದು ಸಂಜೆ ತಮ್ಮ ಆಪ್ತ ಬಳಗದ ಹೆಣ್ಣುಮಕ್ಕಳನ್ನೆಲ್ಲಾ ಒಂದುಗೂಡಿಸಿದ ಇವರು ಬಹಳ ದಿನಗಳಿಂದ ತಮ್ಮ ಮನಸ್ಸಿನಲ್ಲಿದ್ದ ಆಸೆಯನ್ನು ಅವರೊಂದಿಗೆ ಹಂಚಿಕೊಂಡರು. ತಿಂಗಳಿಗೊಮ್ಮೆಯಾದರೂ ತಾವೆಲ್ಲಾ ಒಂದೆಡೆ ಸೇರಿ ವಿಚಾರ ವಿನಿಮಯ ಮಾಡಿಕೊಳ್ಳಬಹುದು, ಸಣ್ಣದೊಂದು ಉಳಿತಾಯ ಯೋಜನೆ ಪ್ರಾರಂಭಿಸಿ ಕಷ್ಟಕಾಲದಲ್ಲಿ ಅದನ್ನು ಸದಸ್ಯರು ಪಡೆಯುವಂತಾಗಬಹುದು ಎಂದು ತಿಳಿಸಿ ಪ್ರಾರಂಭವಾದ ಸಹಕಾರ ಸಂಘ ಈ ಯಶಸ್ವಿನಿ ಮಹಿಳಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್. ಆದರೆ ಒಂದು ಸೊಸೈಟಿಯನ್ನು ಸ್ಥಾಪಿಸಬೇಕಾದರೆ ಯಾವ ನಿಯಮ, ಕಾಯ್ದೆಗಳನ್ನು ಅನುಸರಿಸಬೇಕು ಎಂಬ ಕಲ್ಪನೆ ಇವರಲ್ಲಿ ಯಾರಿಗೂ ಇರಲಿಲ್ಲ. ಅದಕ್ಕಾಗಿ ನಾಗಮಣಿಯವರು ಸ್ವತಃ ಸಹಕಾರಿ ಕಾಯ್ದೆಯನ್ನು ಪರಾಮರ್ಷಿಸಿ ಸಂಬಂಧಪಟ್ಟ ಸಹಕಾರಿ ಇಲಾಖೆಯೊಂದಿಗೆ ನಿರಂತರ ಸಂಪರ್ಕವಿಟ್ಟುಕೊಂಡು ಡಿಸೆಂಬರ್ 1996ರಲ್ಲಿ ಯಶಸ್ವಿನಿ ಸಹಕಾರಿಯನ್ನು ಪ್ರಾರಂಭಿಸಿದರು. ರೂ. 2,80,000/– ದಿಂದ ಪ್ರಾರಂಭವಾದ ಸಂಸ್ಥೆ ಈಗ 47 ಕೋಟಿಗೂ ಹೆಚ್ಚು ವ್ಯವಹಾರ ನಡೆಸುತ್ತಿದೆ. 2500 ಕ್ಕೂ ಹೆಚ್ಚು ಮಂದಿ ಸದಸ್ಯರಿದ್ದಾರೆ.ಪ್ರಾರಂಭದ ವರ್ಷದಿಂದ ಲಾಭ ಗಳಿಸುತ್ತಾ ಬಂದ ಸಂಸ್ಥೆ ಪ್ರತಿ ವರ್ಷವೂ ಸದಸ್ಯರಿಗೆ ತಪ್ಪದೆ ಡಿವಿಡೆಂಡ್ ನೀಡುತ್ತಾ ಬಂದಿದೆ. ಸದಸ್ಯರಿಗೆ ಕೇವಲ ಹಣಕಾಸಿನ ಸೌಕರ್ಯ ಒದಗಿಸುವುದಷ್ಟೇ ಅಲ್ಲದೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ, ಶಾಲೆಗಳಿಗೆ ನೋಟ್ ಬುಕ್ ಮತ್ತಿತರ ಬರವಣಿಗೆಯ ಉಪಕರಣಗಳನ್ನು ಒದಗಿಸುವುದು, ಮಹಿಳೆಯರಿಗೆ ಸಾಂಸ್ಕೃತಿಕ ಕಾರ್ಯಕ್ರಮ, ವಿವಿಧ ಸ್ಪರ್ಧೆಗಳನ್ನು ನಡೆಸುವುದು, ಸಾಹಿತ್ಯ–ಸಂಗೀತ ಇನ್ನಿತರ ಲಲಿತ ಕಲೆಗಳಲ್ಲಿ ಅರ್ಹರನ್ನು ಆಯ್ಕೆ ಮಾಡಿ ವರ್ಷಕ್ಕೊಮ್ಮೆ ಇಬ್ಬರಿಗೆ ತಲಾ ರೂ. 5,000/– ಮೊಬಲಗು ಮತ್ತು ಯಶಸ್ವಿನಿ ಸಾಹಿತ್ಯ ಕಲಾ ಪ್ರಶಸ್ತಿ ನೀಡುವುದನ್ನು ಸಂಸ್ಥೆ ಮಾಡಿಕೊಂಡು ಬಂದಿದೆ.

ಶ್ರೀಮತಿ ನಾಗಮಣಿಯವರು ಲಯನ್ಸ್ ಕ್ಲಬ್ ಇಂಟರ್ನ್ಯಾಷನಲ್ ಸಂಸ್ಥೆಯಲ್ಲಿ ತಮ್ಮ ಅಪೂರ್ವ ಕಾರ್ಯಕ್ಷಮತೆಗಾಗಿ ಎರಡು ಬಾರಿ "ಅತ್ಯುತ್ತಮ ಕಾರ್ಯದರ್ಶಿ" ಪ್ರಶಸ್ತಿ ಗಳಿಸಿದ್ದಾರೆ. ಬೆಂಗಳೂರಿನ ಪ್ರತಿಷ್ಠಿತ ಸಂಸ್ಥೆಗಳಾದ ಒಡಗನಾಡು ಸಂಘ, ಮಲೆನಾಡು ಹೆಬ್ಬಾರ್ ಮಹಾಸಭಾ ಮುಂತಾದವುಗಳು ಇವರನ್ನು ಪ್ರಶಸ್ತಿ ನೀಡಿ ಗೌರವಿಸಿದೆ. ಸಹಕಾರ ಭಾರತಿ ಕರ್ನಾಟಕ ಮಹಿಳಾ ವಿಭಾಗದ ಅಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಿದ್ದು ಪ್ರಸ್ತುತ ಸಹಕಾರ ಭಾರತಿ ರಾಷ್ಟ್ರ ಕಾರ್ಯಕಾರಿಣಿಯ ಸದಸ್ಯೆಯಾಗಿ ಹಾಗು ರಾಜ್ಯ ಕಾರ್ಯಕಾರಿಣಿಯಲ್ಲಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕೊನೆಯದಾಗಿ ಸೇವೆಯೆಂಬ ಯಜ್ಞದಲ್ಲಿ ಸಮಿದೆಯಂತೆ ಉರಿಯುವ ಧ್ಯೇಯ ಮಹಾ ಜಲಧಿಯೆಡೆಗೆ ಸಲಿಲವಾಗಿ ಹರಿಯುವ ತನ್ನ ಜೀವನವನ್ನೇ ಯಜ್ಞದಲ್ಲಿ ಹಾಕಿ ಸಮಿದೆಯಂತೆ ಉರಿಯುವ ಜೀವೆಂದರೆ ಮಹಿಳೆ.ಭಾರತೀಯ ಸಹಕಾರ ಕ್ಷೇತ್ರದಲ್ಲಿ ಬದುಕಿನ ಎಲ್ಲಾ ಆಯಾಮಗಳಲ್ಲಿ ಹಾಸುಹೊಕ್ಕಾಗಿದೆ."ಆಡು ಮುಟ್ಟದ ಸೊಪ್ಪಿಲ್ಲ" ಎನ್ನುವಂತೆ ಮಾನವನ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಸಹಕಾರ ಕ್ಷೇತ್ರ ತನ್ನ ಛಾಪನ್ನು ಮೂಡಿಸಿರುತ್ತದೆ.ಎಲ್ಲಾ ರಂಗಗಳಲ್ಲೂ ಸಹಕಾರ ಕ್ಷೇತ್ರ ತನ್ನ ಛಾಪನ್ನು ಮೂಡಿಸಿದ್ದರೂ ಸಹ ಕೆಲವೊಂದು ಕ್ಷೇತ್ರಗಳಲ್ಲಿ ಸಹಕಾರ ಕ್ಷೇತ್ರದ ಕೊಡುಗೆ ಅಪಾರವಾದದ್ದು, ಏಕೆಂದರೆ ಮಹಿಳೆ ಇಂದು ಆರ್ಥಿಕವಾಗಿ ಅಭಿವೃದ್ಧಿಯನ್ನು ಕಂಡು ಸಮಾಜದ ಹಾಗೂ ದೇಶದ ದಿಕ್ಕನ್ನೆ ಬದಲಿಸಿದ್ದಾರೆ.ಭೂಮಿ ಹೇಗೆ ನೇಗಿಲೆಗೆ, ಹಾಗೇ ಮಹಿಳೆಗೆ ಕೋಟಿ ಕನಸುಗಳ ಮಹಿಳೆಯ ಅರಮನೆಗೆ ಧೈರ್ಯನೀಡುವ ಕಾವಲು, ಇನ್ನೂ ಹೆಚ್ಚು ಹೆಚ್ಚು ಮಹಿಳೆಗೆ ನಮ್ಮ ಸಹಕಾರ ಕ್ಷೇತ್ರದಲ್ಲಿ ಸಿಗುವಂತಾಗಲಿ.ಮಹಿಳೆ ಎಂದರೆ ಸಹಕಾರ ಕ್ಷೇತ್ರದಲ್ಲಿ ಬಾಗಿದ ತನು, ಮುಗಿಲೆತ್ತರದ ಮನ, ಭುವಿಯ ಬೆಡಗಿಗೆ ಕಳಸ, ಸಮಾಜಕ್ಕೆ ತೋರಿದ ಜ್ಯೋತಿಯಾಗಿ, ಕೋಹಿನೂರು ವಜ್ರದ ಕಾಂತಿಯನ್ನು ಮೀರಿಸಿತ್ತು ಮಹಿಳೆ ಸಾಧನೆ. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಷಯಗಳು.

# "ಮಹಿಳಾ ಸಮಾನತೆಯಿಂದಲೇ ಎಲ್ಲರ ಪ್ರಗತಿ"

▸▸ ಶಂಕರ ಎಸ್.

ನಮ್ಮ ಜಗತ್ತಿನಲ್ಲಿ ಮಹಿಳೆಯರ ಪಾತ್ರ ಅತ್ಯಂತ ದೊಡ್ಡದು. ಒಂದೆಡೆ ಇಡೀ ಸಂಸಾರವನ್ನು ಸಂಭಾಳಿಸಿಕೊಂಡು ಇನ್ನೊಂದೆಡೆ ಉದ್ಯೋಗ ಸ್ಥಳದಲ್ಲಿಯೂ ದಕ್ಷವಾಗಿ ಕಾರ್ಯನಿರ್ವಹಿಸುವ ಆಕೆ ಗಟ್ಟಿಗಿತ್ತಿ ಎಂಬುದರಲ್ಲಿ ಎರಡುಮಾತಿಲ್ಲ. ಆಕೆಗಿರುವ ಧೈರ್ಯಕ್ಕೆ ಸರಿಸಾಟಿಯಿಲ್ಲ. ಮಹಿಳೆಯರು ನಿರ್ವಹಿಸುವ ಪಾತ್ರಗಳನ್ನು ಪುರುಷರಿಗೆ ನಿರ್ವಹಿಸಲು ಸಾಧ್ಯವೇ ಇಲ್ಲ. ಎಲ್ಲಾ ವಿಷಯದಲ್ಲೂ ಮಹಿಳೆಯರು ಪುರುಷರಿಗಿಂತ ಸಾಕಷ್ಟು ಹೆಜ್ಜೆ ಮುಂದೆಯೇ ಇದ್ದಾರೆ. ಪುರುಷರು ಮಾಡುವ ಎಲ್ಲಾ ಕೆಲಸಗಳನ್ನು ಮಹಿಳೆಯರು ಮಾಡುತ್ತಾರೆ.

ಆದರೆ ಮಹಿಳೆಯ ಪಾತ್ರವನ್ನು ಯಾವುದೇ ಪುರುಷರಿಗೆ ಮಾಡಲು ಬರುವುದಿಲ್ಲ. ಇದೇ ಮಹಿಳೆಯ ಹೆಗ್ಗಳಿಕೆ. ಆದರೂ ಅನಾದಿ ಕಾಲದಿಂದಲೂ ಈ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಎರಡನೇ ದರ್ಜೆಯ ಪ್ರಜೆಯಾಗಿಯೇ ಗುರುತಿಸಲ್ಪಟ್ಟಿದ್ದಾಳೆ. ಈಗಲೂ ಆಕೆಗೆ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯೆಂಬ ಕಾರಣಕ್ಕೆ ಅವಕಾಶಗಳನ್ನು ನಿರಾಕರಿಸಲಾಗುತ್ತಿದೆ. ಕೆಲವು ಕ್ಷೇತ್ರಗಳಲ್ಲಿ ಮಹಿಳೆಯರು ಉನ್ನತ ಸಾಧನೆ ಮಾಡಿ ಪ್ರಸಿದ್ಧಿಯಾಗಿದ್ದರೂ ಅವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಉಳಿದಂತೆ ಮಹಿಳೆಯರ ಸ್ಥಿತಿಯಲ್ಲಿ ಗಮನಾರ್ಹವಾದ ಬದಲಾವಣೆಯೇನೂ ಆಗಿಲ್ಲ.

ಮಹಿಳೆಯರನ್ನು ಎಲ್ಲಾ ಕ್ಷೇತ್ರಗಳಲ್ಲಿ ಮೇಲಕ್ಕೆತ್ತಬೇಕು, ಆಕೆಗೆ ಸಮಾನ ಅವಕಾಶಗಳನ್ನು ನೀಡಬೇಕು, ಆಕೆಯ ಸಾಧನೆಗಳನ್ನು ಗುರುತಿಸಬೇಕು ಎಂಬ ಉದ್ದೇಶದಿಂದ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಒಂದು ಭಾಗವೇ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ. ಪ್ರತಿವರ್ಷ ಮಾರ್ಚ್ 8ರಂದು ವಿಶ್ವದಾದ್ಯಂತ ಅನೇಕ ದೇಶಗಳಲ್ಲಿ "ಅಂತರಾಷ್ಟ್ರೀಯ ಮಹಿಳೆಯರ ದಿನ" ವನ್ನು ಆಚರಿಸುತ್ತಾರೆ. ಮಹಿಳೆಯರು ಒಂದೇ ಕ್ಷೇತ್ರಕ್ಕೆ ಮೀಸಲಿರದೆ, ಅದು ರಾಷ್ಟ್ರೀಯ, ಜನಾಂಗೀಯ, ಭಾಷಾವಾರು, ಸಾಂಸ್ಕೃತಿಕ, ಆರ್ಥಿಕ ಅಥವಾ ರಾಜಕೀಯ ಕ್ಷೇತ್ರವಾಗಲಿ, ಎಲ್ಲಾದರಲ್ಲೂ ತಮ್ಮದೇ ಆದ ಛಾಪನ್ನ ಮೂಡಿಸಿದ್ದಾರೆ.

ಈ ಮೂಲಕ ಮಹಿಳೆಯರಿಗೆ ಗೌರವ ಸಲ್ಲಿಸಲಾಗುತ್ತದೆ. ಇಂಥದ್ದೊಂದು ದಿನ ಮೊದಲ ಬಾರಿಗೆ ಪ್ರಚಲಿತಕ್ಕೆ ಬಂದಿದ್ದು ನ್ಯೂಯಾರ್ಕ್‌ನಲ್ಲಿ. 1909 ಫೆಬ್ರವರಿ 28 ರಂದು ಅಲ್ಲಿ ಮೊದಲ ಬಾರಿಗೆ ಮಹಿಳಾ ದಿನವನ್ನು ಆಚರಿಸಲಾಯಿತು. ಎರಡು ವರ್ಷದ ಬಳಿಕ ಜರ್ಮನ್‌ನ ಸಾಮಾಜಿಕ ಕಾರ್ಯಕರ್ತೆಯೊಬ್ಬರು ತಮ್ಮ ದೇಶದಲ್ಲೂ ಈ ದಿನವನ್ನು ಆಚರಿಸಲು ಶುರು ಮಾಡಿದರು. ಹೀಗೆ ಕೆಲವೇ ಕೆಲವು ರಾಷ್ಟ್ರಗಳಿಗೆ ಸೀಮಿತವಾಗಿದ್ದ ಈ ದಿನಕ್ಕೆ 1977 ರಲ್ಲಿ ವಿಶ್ವಸಂಸ್ಥೆ ಅಧಿಕೃತ ಅನುಮೋದನೆ ನೀಡಿ ಮಾರ್ಚ್ 8 ಅನ್ನು ಅಂತಾರಾಷ್ಟ್ರೀಯ ದಿನವನ್ನಾಗಿ ಆಚರಿಸುವಂತೆ ಘೋಷಿಸಿತು.

ಭಾರತದಲ್ಲಿ ಹೆಣ್ಣಿಗೆ ಸಮಸ್ಯೆಗಳೇನೆ ಇದ್ದರೂ, ಅವುಗಳನ್ನೆಲ್ಲ ಬಗಲಿಗಿಟ್ಟು ಮಹಿಳೆ ಎಲ್ಲ ರಂಗಗಳಲ್ಲೂ ಪುರುಷನಿಗೆ ಸಮಾನವಾಗಿ ಸಾಧನೆಗೈಯುತ್ತಿದ್ದಾಳೆ.



ಭಾರತ ಹೆಣ್ಣು ಪ್ರಧಾನಿಯಾಗಿದ್ದನ್ನು, ರಾಷ್ಟ್ರಪತಿಯಾಗಿದ್ದನ್ನು ಕಂಡಿದೆ. ಅದರಿಂದ ದೇಶಕ್ಕಾಗಿ ಒಳಿತು ಕೆಡುಕುಗಳು ಚರ್ಚಾಸ್ಪದವಾಗಿದ್ದರೂ ಕೂಡ, ಭಾರತ ಅವರಿಗೆ ಒಂದು ವೇದಿಕೆ ಒದಗಿಸಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಪ್ರಖ್ಯಾತ ಬಹುರಾಷ್ಟ್ರೀಯ ಕಂಪೆನಿಗಳ ಹಿಂದೆ ಗಂಡಿಗೆ ಸಮಾನಶಕ್ತಿಯಾಗಿ ದುಡಿದ ಮಹಿಳೆಯರಿದ್ದಾರೆ. ರಾಜಕೀಯದಲ್ಲಿ ದೊಡ್ಡ ಹೆಸರು ಮಾಡಿದ್ದಾಳೆ ಹೆಣ್ಣು. ಸಾಂಸ್ಕೃತಿಕ ಕ್ಷೇತ್ರದಲ್ಲೂ ಹಿಂದುಳುದಿಲ್ಲ. ರಂಗಭೂಮಿ, ಸಂಗೀತ, ಕಲೆ, ಚಲನಚಿತ್ರ – ಎಲ್ಲ ಕ್ಷೇತ್ರಗಳಲ್ಲೂ ಹೆಣ್ಣಿನ ಸಾಧನೆ ಮುಂದುವರೆದಿದೆ. ಮೊದಲೆಲ್ಲ ಚಲನಚಿತ್ರಗಳಲ್ಲಿ ನಟನೆಯಲ್ಲಿ ಹೆಸರು ಮಾಡುತ್ತಿದ್ದರೆ, ಈಗ ತಾಂತ್ರಿಕ ಕೆಲಸಗಳಿಗೂ ಹೆಣ್ಣು ಕೈ ಹಾಕಿ ಯಶಸ್ವಿಯಾಗಿದ್ದಾಳೆ.

ಸಾಧನೆಯ ಹಾದಿಯಲ್ಲಿ ಕೆಲವು ಮಹಿಳೆಯರು ಮುಂದುವರೆದಿದ್ದರೆ, ಸಮಾನತೆ ಎಂಬ ಪದವನ್ನು ತಪ್ಪಾಗಿ ಅರ್ಥ ಮಾಡಿಕೊಂಡವರೂ ನಮ್ಮಲ್ಲಿ ಸಿಗುತ್ತಾರೆ. ಹೆಚ್ಚಿದ ವಿವಾಹ ವಿಚ್ಛೇದನಗಳು, ಮುರಿದು ಬಿದ್ದ ಸಂಸಾರಗಳು ಇದಕ್ಕೆ ಉದಾಹರಣೆವೆಂದರೆ ವರದಕ್ಷಿಣೆಯ ವಿಚಾರದಲ್ಲಿ ಹೆಣ್ಣಿಗೆ ಕೊಟ್ಟ ಹಕ್ಕನ್ನು ತಪ್ಪಾಗಿ ಬಳಸಿಕೊಂಡು ಸಂಸಾರಗಳನ್ನು ಬೀದಿಗೆ ತಂದವರೂ ಇದ್ದಾರೆ. ಸಮಾನತೆ ಎಂದರೆ "ಯಾರು ಮೇಲು, ಒಂದು ಕೈ ನೋಡಿಯೇ ಬಿಡೋಣ" ಎಂಬ ಪೈಪೋಟಿಯಲ್ಲ. ಇಬ್ಬರು ಪರಸ್ಪರ ಅರಿತುಕೊಂಡು, ಒಬ್ಬರನ್ನೊಬ್ಬರು ತಿದ್ದಿಕೊಂಡು, ಒಬ್ಬರ ಕೊರತೆಯನ್ನು ಇನ್ನೊಬ್ಬರು ನೀಗಿಸುವುದು ಸಮಾನತೆ. ಒಬ್ಬರಿಗೊಬ್ಬರು ಪೂರಕವಾಗಿರಬೇಕು, ಒಬ್ಬರನ್ನು ಇನ್ನೊಬ್ಬರು ಸಂಪೂರ್ಣಗೊಳಿಸಬೇಕು ಎಂದು ಅರ್ಥ.

ತಾಯಿಯಾಗಿ, ಸೋದರಿಯಾಗಿ, ಪತ್ನಿಯಾಗಿ, ಮಗಳಾಗಿ ಹೆಣ್ಣು ನಿರ್ವಹಿಸುವ ಪಾತ್ರಗಳು ಹಲವು. ಗಂಡು ಅವಳಿಗೆ ಸಮಾನನಲ್ಲ, ಹೆಣ್ಣೇ ಗಂಡಿಗಿಂತ ಬಲಶಾಲಿ ಎಂಬ ಮಾತು ಸುಳ್ಳಲ್ಲ. ಇದು ಸೃಷ್ಟಿ ಹೆಣ್ಣಿಗೆ ಕೊಟ್ಟ ಶಕ್ತಿ. ಹಾಗೆಯೇ ಗಂಡು ಈ ಶಕ್ತಿಯನ್ನು ಅರಿತು, ಅದರ ಸದ್ಬಳಕೆಯಾಗುವಂತೆ ನೋಡಿಕೊಳ್ಳಬೇಕು. ಈ ಮಹಿಳಾ ದಿನವು ನಮ್ಮಲ್ಲಿ ಹೆಣ್ಣಿನ ಕುರಿತ ಗೌರವಭಾವವನ್ನು ಹೆಚ್ಚಿಸಲಿ.

# ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಅಧ್ಯಾದೇಶ, 2019ರ ಮುಖ್ಯಾಂಶಗಳು

# Key Points of Banning of Unregulated Deposits Schemes Ordinance, 2019



ಬಿ.ವಿ. ರವೀಂದ್ರನಾಥ್, ಸನ್ನದು ಲೆಕ್ಕಪರಿಶೋಧಕರು, ಸಾಗರ

ದಿನಾಂಕ : 21–02–2019ರಂದು ಮಾನ್ಯ ರಾಷ್ಟ್ರಪತಿಯವರು ಕೇಂದ್ರ ಸರ್ಕಾರದ ಶಿಫಾರಸ್ಸಿನ ಮೇರೆಗೆ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಅಧ್ಯಾದೇಶ, 2019ಕ್ಕೆ ತಮ್ಮ ಅಂಕಿತವನ್ನು ಹಾಕುವುದರೊಂದಿಗೆ ಈ ಅಧ್ಯಾದೇಶವು ಸದರಿ ದಿನಾಂಕದಿಂದ ದೇಶದಲ್ಲಿ ಜಾರಿಗೆ ಬಂದಿರುತ್ತದೆ.ಕೇಂದ್ರ ಸರ್ಕಾರ ಮತ್ತು ಆಡಳಿತ ಪಕ್ಷಗಳು ಇದನ್ನು ಜನಸಾಮಾನ್ಯರ ಹಣದ ಸುರಕ್ಷತೆಯ ದೃಷ್ಟಿಯಿಂದ ಅತ್ಯಂತ ಮಹತ್ವದ ನಿರ್ಧಾರ ಎಂದು ಹೇಳಿಕೊಂಡಿವೆಯಾದರೂ ವಿವಿಧ ವರ್ಗಗಳಿಂದ ಮಿಶ್ರ ಪ್ರತಿಕ್ರಿಯೆ ಬಂದಿರುವುದನ್ನು ನಾವು ಗಮನಿಸಬಹುದು.ಈ ಹಿನ್ನೆಲೆಯಲ್ಲಿ ಈ ಅಧ್ಯಾದೇಶದ ಪ್ರಮುಖ ಅಂಶಗಳನ್ನು ನಮ್ಮ ಓದುಗರ ಮುಂದೆ ತೆರೆದಿಡಲು ಪ್ರಯತ್ನಿಸುತ್ತಿದ್ದೇನೆ.

**ಹಿನ್ನೆಲೆ :** ಇತ್ತೀಚಿನ ವರ್ಷಗಳಲ್ಲಿ ನಮ್ಮ ದೇಶದಲ್ಲೂ ಹಣಕಾಸು ಕ್ಷೇತ್ರದಲ್ಲಿನ ವಂಚನೆ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿದೆ. ಈ ವಂಚನೆ ಪ್ರಕರಣಗಳಲ್ಲಿ ಹಾಲಿ ಇರುವ ಕನೂನುಗಳ ಲೋಪ ದೋಷಗಳನ್ನು ಬಳಸಿ ಗ್ರಾಹಕರಿಗೆ ಮೋಸ ಮಾಡುವ ವ್ಯಕ್ತಿಗಳನ್ನು ಶಿಕ್ಷಿಸಲು ಸರಕಾರ ಮತ್ತು ನಿಯಂತ್ರಣಾಧಿಕಾರಿಗಳು ಅಸಹಾಯಕರಾಗಿರುವುದರಿಂದ ಮಧ್ಯಮ ಮತ್ತು ಕೆಳವರ್ಗದ ಜನತೆಗೆ ಅತಿ ಹೆಚ್ಚಿನ ಮೋಸವಾಗುತ್ತಿರುವುದನ್ನು ಸರಕಾರ ಗಮನಿಸಿದೆ.

ಕಳೆದ ಒಂದು ದಶಕದ ಅವಧಿಯಲ್ಲಿ ಭಾರತದಲ್ಲಿ ಪ್ರಲೋಭನೆಯ ಮೂಲಕ ಸಾರ್ವಜನಿಕರನ್ನು ಬೃಹತ್ ಪ್ರಮಾಣದಲ್ಲಿ ಮೋಸಗೊಳಿಸಿರುವಂತಹ ಇಂತಹ ಹಲವಾರು ಹಗರಣಗಳು ನಡೆದಿರುತ್ತದೆ. ಇತ್ತೀಚಿನ ದಿನಗಳಲ್ಲಿ ಶಾರದಾ ಚಿಟ್ ಫಂಡ್ ಹಗರಣ, ಸಹಾರಾ ಗ್ರೂಪ್ ವಂಚನೆ, ಪಿಎಸಿಎಲ್ ಯೋಜನೆ, ಅನುಭವ್ ಪ್ಲಾಂಟೇಷನ್ಸ್, ಇನ್ನಿತರೆ ಅನೇಕ ಚೈನ್ ಮಾರ್ಕೆಟಿಂಗ್ಸ್ ಮತ್ತು ಮನಿ ಸರ್ಕ್ಯುಲೇಟಿಂಗ್ ಯೋಜನೆಗಳು ಸಾಮಾನ್ಯ ಜನರನ್ನು ವಂಚಿಸಿದ್ದಲ್ಲದೆ ಇತರೆ ಆರ್ಥಿಕ ಸಂಸ್ಥೆಗಳ ಮೇಲೆ ಕೂಡ ದುಷ್ಪರಿಣಾಮ ಬೀರುತ್ತಿವೆ. ಇದರಿಂದಾಗಿ ಪರೋಕ್ಷವಾಗಿ ದೇಶದ ಆರ್ಥಿಕ ಹಿತಕ್ಕೂ ಧಕ್ಕೆಯಾಗುತ್ತದೆ

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ನಕಲಿ ಮತ್ತು ಅನಧಿಕೃತ ಠೇವಣಿ ಯೋಜನೆಗಳನ್ನು ನಿಷೇಧಿಸುವ ಹಾಗೂ ಠೇವಣಿದಾರರ ಹಿತರಕ್ಷಣೆ ಮಾಡುವ ಮತ್ತು ಕೆಲವೊಂದು ಠೇವಣಿ ಸ್ವೀಕರಣಾ ಸಂಸ್ಥಾಪನೆಯು ಠೇವಣಿಗಳನ್ನು ಸ್ವೀಕರಿಸಿ ಸಕಾಲದಲ್ಲಿ ಹಿಂತಿರುಗಿಸದಿದ್ದಲ್ಲಿ ಅಥವಾ ಕಾನುನುಗಳಿಗೆ ವಿರುದ್ಧವಾಗಿ ಒಬ್ಬ ವ್ಯಕ್ತಿ ಅಥವಾ ಸಂಸ್ಥೆ ಅಥವಾ ಒಂದು ಕಂಪನಿ ಅಥವಾ ಯಾವುದೇ ರೂಪದ ಸಂಸ್ಥೆಯು ಮೋಸದ ಉದ್ದೇಶದಿಂದ ಠೇವಣಿ ಯೋಜನೆಗಳನ್ನು ರೂಪಿಸಿ, ಸದರಿ ಯೋಜನೆಗಳಲ್ಲಿ ತೊಡಗಿಸುವುದರಿಂದ ಹೆಚ್ಚಿನ ಲಾಭವಾಗುತ್ತದೆಯೆನ್ನುವ ಆಮಿಷವೊಡ್ಡಿ ಹೆಚ್ಚಿನ ಬಡ್ಡಿ ದರದ ಅಥವಾ ಹೆಚ್ಚಿನ ಮೊತ್ತವನ್ನು ಹಿಂತಿರುಗಿಸುವಾ ಪ್ರಲೋಭನೆಯ ಮೂಲಕ ಸಾರ್ವಜನಿಕರಿಂದ ಠೇವಣಿ ಸ್ವೀಕರಿಸುವುದನ್ನು ತಡೆಯುವ ಉದ್ದೇಶದಿಂದ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಮತ್ತು ಠೇವಣಿದಾರರ ಹಿತರಕ್ಷಣಾ ಮಸೂದೆ, 2015ನ್ನು (Banning of Unregulated Deposits Schemes and Protection of Depositors Interest Bill, 2015) ಇಂಟರ್ ಮಿನಿಸ್ಟ್ರಿಯಲ್ ಗ್ರೂಪ್‌ನ ಶಿಫಾರಸುಗಳ ಆಧಾರದ ಮೇಲೆ ಜಾರಿಗೆ ತರಲು ಉದ್ದೇಶಿಸಿ ಕಳೆದ ಮೂರು ವರ್ಷಗಳಿಂದ ಇದರ ರೂಪುರೇಷೆಗಳನ್ನು ಸಾರ್ವಜನಿಕರಿಗೆ ಮಾಹಿತಿಗಾಗಿ ಮತ್ತು ಪ್ರತಿಕ್ರಿಯೆಗಾಗಿ ಪ್ರಕಟ ಪಡಿಸಿತ್ತು. ನಂತರದಲ್ಲಿ ಕೆಲವು ಸೂಚಿತ ಬದಲಾವಣೆಗಳನ್ನು ಅಳವಡಿಸಿಕೊಂಡು ಮಸೂದೆಯನ್ನು ಪರಿಷ್ಕರಿಸಿ ಕಳೆದ ಲೋಕಸಭಾ ಅಧಿವೇಶನದಲ್ಲಿ ಮಂಡಿಸಿತ್ತಾದರೂ ರಾಜ್ಯಸಭೆಯಲ್ಲಿ ಅನುಮೋದನೆ ಪಡೆಯಲು ಕಾಲಾವಕಾಶವಿಲ್ಲವಾದ್ದರಿಂದ ಕೇಂದ್ರಸರ್ಕಾರವು ಈ ಮಸೂದೆಯನ್ನು ಅಧ್ಯಾದೇಶವನ್ನಾಗಿ (Ordinance) ಪರಿವರ್ತಿಸಿ ಜಾರಿಗೆ ತಂದಿರುತ್ತದೆ.

ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಅಧ್ಯಾದೇಶ, 2019ನ್ನು ದಿನಾಂಕ : 21–02–2019ರಿಂದ ಜಾರಿಗೆ ತರಲಾಗಿದೆ. ಈ ಅಧ್ಯಾದೇಶದ ವ್ಯಾಪ್ತಿಯಲ್ಲಿ ಯಾವುದೇ ಶಾಸನಬದ್ಧ/ ನಿಯಂತ್ರಕ ಸಂಸ್ಥೆಯಿಂದ ನಿಯಂತ್ರಿಸಲ್ಪಡದ ಸಂಸ್ಥೆಯಿಂದ ಸ್ವೀಕರಿಸಲ್ಪಡುವ ಠೇವಣಿ/ಠೇವಣಿಗಳನ್ನು ತರಲಾಗಿರುತ್ತದೆ.

ಸಂಸತ್ ಸದಸ್ಯರು ಮತ್ತು ಹಣಕಾಸು ಸ್ಥಾಯಿ ಸಮಿತಿಯ ಸದಸ್ಯರಾದ ಶ್ರೀ ನಿಶಿಕಾಂತ್ ದುಬೆಯವರ ಪ್ರಕಾರ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಅಧ್ಯಾದೇಶ, 2019ನ್ನು ಶಾರದಾ ಚಿಟ್ ಫಂಡ್, ಸಹರಾ ಹಾಗೂ ಪಿಎಸಿಎಲ್ ಕಂಪನಿಗಳಂತಹ ಹಗರಣಗಳು ಭವಿಷ್ಯದಲ್ಲಿ ನಡೆಯದಂತೆ ಮತ್ತು ಮುಗ್ಧ ಜನರು ಮೋಸ ಹೋಗದಂತೆ ತಡೆಯುವ ಉದ್ದೇಶದಿಂದ ಬ್ರಿಟನ್ನಿನ 'ವಿತ್ತೀಯ ಸೇವೆ ಅಧಿನಿಯಮ' (Financial Service Act)ನ್ನು ಮಾದರಿಯಾಗಿಟ್ಟುಕೊಂಡು ಜಾರಿಗೆ ತರಲಾಗುತ್ತಿದೆ.

### ನಕಲಿ ಮತ್ತು ಅನಧಿಕೃತ ಠೇವಣಿ ಯೋಜನೆ ಎಂದರೇನು? (What is a Ponzi scheme?)



ಜಗತ್ತಿನ ಅತಿ ದೊಡ್ಡ ಆರ್ಥಿಕ ವಂಚಕನಾದ ಇಟಲಿ ದೇಶದ ಚಾರ್ಲ್ಸ್ ಪೊಂಜಿ ನಡೆಸಿದ ವ್ಯವಹಾರದ ಮಾದರಿಯನ್ನು ಪೊಂಜಿ ಯೋಜನೆ ಎಂದು ಕರೆಯುತ್ತಾರೆ. ಇದೊಂದು ಹೂಡಿಕೆ ವಂಚನೆ ಯೋಜನೆ. ಹೂಡಿಕೆದಾರರಿಗೆ ಅತಿ ಹೆಚ್ಚಿನ ಬಡ್ಡಿ ಯಾ ಆದಾಯದ ಆಮಿಷ ನೀಡಿ ಹಣ ಸ್ವೀಕರಿಸುವುದು ಮತ್ತು ಪ್ರಸಕ್ತ ಠೇವಣಿದಾರರಿಗೆ ಆಶ್ವಾಸನೆ ನೀಡಿದ ಆದಾಯವನ್ನು ನೀಡಲು ಹೊಸದಾಗಿ ಠೇವಣಿಗಳನ್ನು ಸಂಗ್ರಹಿಸುವುದು ಹಾಗೂ ಹೊಸದಾಗಿ ಠೇವಣಿ ಸಂಗ್ರಹಿಸಲು ಪ್ರತಿನಿಧಿಗಳಿಗೆ, ಹೂಡಿಕೆದಾರರಿಗೆ ಮಿತಿ ಮೀರಿದ ಆಮಿಷ ಒಡ್ಡುವುದು, ನಂತರ ಒಂದು ದಿನ ಸಂಗ್ರಹಿಸಿದ ಎಲ್ಲ ಹಣವನ್ನು ತೆಗೆದುಕೊಂಡು ಆ ವ್ಯವಹಾರ

ನಡೆಸಿದ ಪ್ರದೇಶದ ಕಾನೂನು ವ್ಯಾಪ್ತಿ ಪ್ರದೇಶದ ಹೊರ ಹೋಗಿ ನೆಲೆಸುವುದು – ಇದಕ್ಕೆ ಪೂಂಜಿ ಯೋಜನೆ ಎಂದು ಕರೆಯುತ್ತಾರೆ.

ನಕಲಿ ಮತ್ತು ಅನಧಿಕೃತ ಠೇವಣಿ ಯೋಜನೆ ಎಂದರೆ ಪ್ರಚಲಿತದಲ್ಲಿರುವ ಕಾನೂನುಗಳಿಗೆ ವಿರುದ್ದವಾಗಿ ಒಬ್ಬ ವ್ಯಕ್ತಿ ಅಥವಾ ಸಂಸ್ಥೆ ಅಥವಾ ಕಂಪನಿ ಅಥವಾ ಯಾವುದೇ ರೂಪದ ಸಂಸ್ಥೆಯು ಮೋಸದ ಉದ್ದೇಶದಿಂದ ಠೇವಣಿ ಯೋಜನೆಗಳನ್ನು ರೂಪಿಸಿ, ಸದರಿ ಯೋಜನೆಗಳಲ್ಲಿ ತೊಡಗಿಸುವುದರಿಂದ ಹೆಚ್ಚಿನ ಲಾಭವಾಗುತ್ತದೆಯೆನ್ನುವ ಆಮಿಷವೊಡ್ಡಿ ಹೆಚ್ಚಿನ ಬಡ್ಡಿ ದರದ ಅಥವಾ ಹೆಚ್ಚಿನ ಮೊತ್ತವನ್ನು ಹಿಂತಿರುಗಿಸುವ ಪ್ರಲೋಭನೆಯ ಮೂಲಕ ಸಾರ್ವಜನಿಕರಿಂದ ಠೇವಣಿ ಸ್ವೀಕರಿಸುವುದಾಗಿರುತ್ತದೆ.

ಇದೀಗ ಕೇಂದ್ರ ಸರ್ಕಾರವು ಹೊರಡಿಸಿರುವ ಅಧ್ಯಾದೇಶವು ಆರು (8) ಅಧ್ಯಾಯಗಳು ಮತ್ತು ನಲವತ್ತೆರಡು (42) ಕಲಂಗಳನ್ನು ಹೊಂದಿರುತ್ತದೆ. ಈ ಅಧ್ಯಾದೇಶವು ಜಾರಿಗೆ ಬಂದ ನಂತರ ಠೇವಣಿಗಳನ್ನು ಸ್ವೀಕರಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕಾಯ್ದೆಯಲ್ಲಿ ಏನೇ ಹೇಳಿದ್ದರೂ ಮತ್ತು ಯಾವುದೇ ಪ್ರಾವಧಾನಗಳು ಅಸಮಂಜಸವಾಗಿದ್ದರೂ ಸಹ ಈ ಅಧ್ಯಾದೇಶದಲ್ಲಿ ತಿಳಿಸಿರುವ ಅಂಶಗಳೇ ಜಾರಿಗೆ ಬರುತ್ತದೆ.

### ವ್ಯಾಪ್ತಿ : (Applicability)

- ಇದು ಕೇಂದ್ರ ಸರ್ಕಾರದ ಅಧ್ಯಾದೇಶ
- ಜಮ್ಮು ಮತ್ತು ಕಾಶ್ಮೀರ ರಾಜ್ಯ ಹೊರತುಪಡಿಸಿ ಇಡೀ ಭಾರತ ದೇಶಕ್ಕೆ ಅನ್ವಯಿಸುತ್ತದೆ
- ಯಾವುದೇ ಶಾಸನಬದ್ದ / ನಿಯಂತ್ರಕ ಸಂಸ್ಥೆಯಿಂದ ನಿಯಂತ್ರಿಸಲ್ಪಡದ ಸಂಸ್ಥೆಗಳು ಸ್ವೀಕರಿಸುವ ಠೇವಣಿಗಳು ಈ ಅಧ್ಯಾದೇಶದ ವ್ಯಾಪ್ತಿಯಲ್ಲಿ ಬರುತ್ತವೆ
- ಹಾಗೆಯೇ ಯಾವುದೇ ಶಾಸನಬದ್ದ / ನಿಯಂತ್ರಕ ಸಂಸ್ಥೆಯಿಂದ ನಿಯಂತ್ರಿಸಲ್ಪಟ್ಟ ಸಂಸ್ಥೆಗಳು ಸ್ವೀಕರಿಸುವ ಠೇವಣಿಗಳೂ ಈ ಅಧ್ಯಾದೇಶದ ವ್ಯಾಪ್ತಿಯಲ್ಲಿ ಬರುತ್ತವೆ.

### ಉದ್ದೇಶಿತ ಅಧ್ಯಾದೇಶವು ಈ ಕೆಳಗಿನವರುಗಳಿಗೆ ಅನ್ವಯಿಸುತ್ತದೆ;

1. ವ್ಯಕ್ತಿಗಳು ಅಥವಾ ವ್ಯಕ್ತಿಗಳ ಗುಂಪುಗಳು;
2. ಮಾಲೀಕತ್ವದ ಸಂಸ್ಥೆಗಳು;
3. ಪಾಲುದಾರಿಕಾ ಸಂಸ್ಥೆಗಳು (ನೊಂದಾಯಿತ ಮತ್ತು ನೊಂದಾಯಿತವಲ್ಲದ);
4. ನಿಯಮಿತ ಜವಬ್ದಾರಿಯ ಪಾಲುದಾರಿಕೆ (Limited Liability Partinership);
5. ಕಂಪನಿ ಅಧಿನಿಯಮ, 2013ರಡಿ ನೋಂದಣಿಗೊಂಡಿರುವ ಕಂಪನಿ;
6. ಅಸೋಸಿಯೇಶನ್ ಆಫ್ ಪರ್ಸನ್ಸ್;
7. ನ್ಯಾಸಗಳು (ನೋಂದಾಯಿತ ಮತ್ತು ನೋಂದಾಯಿತವಲ್ಲದ);
8. ಸಹಕಾರ ಸಂಸ್ಥೆಗಳು;

ವಿಶೇಷ ಕಾಯ್ದೆಯ ಮೂಲಕ ಸ್ಥಾಪನೆಗೊಂಡ ನಿಗಮಗಳು, ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರಡಿ ನೋಂದಣಿಗೊಂಡ ಬ್ಯಾಂಕಿಂಗ್ ಕಂಪನಿ, ಈ ಅಧ್ಯಾದೇಶದ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಈ ಅಧ್ಯಾದೇಶದಲ್ಲಿ 'ನಿಯಂತ್ರಿತ' ಮತ್ತು 'ಅನಿಯಂತ್ರಿತ' ಠೇವಣಿ ಯೋಜನೆಗಳು ಯಾವುವು ಎಂಬುದರ ಕುರಿತು ಸಮಗ್ರವಾಗಿ ಯಾದಿಯನ್ನು ಒದಗಿಸಲಾಗಿರುತ್ತದೆ.

### ಸಹಕಾರಿಗಳಿಗೆ ಈ ಅಧ್ಯಾದೇಶದ ಅನ್ವಯಿಸುವಿಕೆ :

ಅಧ್ಯಾದೇಶದ ವ್ಯಾಪ್ತಿಗೆ ಸಹಕಾರಿ ಸಂಘಗಳು ಬರುವುದರ ಕುರಿತು ಹಲವಾರು ಗೊಂದಲಗಳಿರುತ್ತದೆ. ಈ ಅಧ್ಯಾದೇಶವು ಕೇವಲ ಅನಿಯಂತ್ರಿತ ಠೇವಣಿ ಯೋಜನೆಗಳನ್ನು ನಿಷೇಧಿಸುವುದಷ್ಟೆ ಅಲ್ಲದೆ ಠೇವಣಿದಾರರ ಹಿತರಕ್ಷಣೆಯ ಉದ್ದೇಶವನ್ನೂ ಸಹ ಹೊಂದಿರುತ್ತದೆ ಎಂಬುದು ಗಮನಾರ್ಹ.

ಉದ್ದೇಶಿತ ಅಧ್ಯಾದೇಶದಲ್ಲಿ 'ಠೇವಣಿ ಸ್ವೀಕರಣಾ ಸಂಸ್ಥಾಪನೆ', 'ಅನಿಯಂತ್ರಿತ ಠೇವಣಿ ಯೋಜನೆಗಳು' ಮತ್ತು 'ನಿಯಂತ್ರಿತ ಠೇವಣಿ ಯೋಜನೆ'ಗಳ ಕುರಿತು ನೀಡಲಾಗಿರುವ ವ್ಯಾಖ್ಯಾನವನ್ನು ಗಮನಿಸಿದಾಗ ಸಹಕಾರಿ ಸಂಘಗಳು ಸ್ವೀಕರಿಸುವ ಠೇವಣಿಗಳು 'ನಿಯಂತ್ರಿತ ಠೇವಣಿ ಯೋಜನೆ'ಗಳಾಗಿರುತ್ತವೆ. ಆದರೆ, ಯಾವುದೇ ಸಹಕಾರಿ ಸಂಸ್ಥೆ ತಾನು ಸ್ವೀಕರಿಸುವ ಠೇವಣಿಯನ್ನು ಸಕಾಲದಲ್ಲಿ ಹಿಂತಿರುಗಿಸದಿದ್ದಲ್ಲಿ ಠೇವಣಿದಾರರ ಹಿತರಕ್ಷಣೆಯನ್ನು ಕಾಪಾಡುವುದು ಅನಿವಾರ್ಯವೆಂದು ಸರ್ಕಾರ ಅಭಿಪ್ರಾಯಪಟ್ಟಲ್ಲಿ ಸದರಿ ಸಹಕಾರ ಸಂಸ್ಥೆಯ ವಿರುದ್ದ ಈ ಅಧ್ಯಾದೇಶದಡಿಯಲ್ಲಿ ಕ್ರಮ ಜರುಗಿಸುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ ಅಥವಾ ಸಹಕಾರ ಸಂಸ್ಥೆಯು ಠೇವಣಿಗಳನ್ನು ಕ್ರೋಢಿಕರಿಸುವುದಕ್ಕೆ ಜಾಹಿರಾತುಗಳನ್ನು ನೀಡುತ್ತಿದ್ದಲ್ಲಿ ಮತ್ತು ಯಾವುದೇ ವ್ಯಕ್ತಿಯು ಹೂಡಿಕೆ ಮಾಡುವಂತೆ ಇನ್ನೊಬ್ಬ ವ್ಯಕ್ತಿಯನ್ನು ಪ್ರಚೋದಿಸಿ ಹೂಡಿಕೆ ಮಾಡುವಂತೆ ಅಥವಾ ಸದಸ್ಯನಾಗುವಂತೆ ಅಥವಾ ಸ್ಕೀಂಗಳಿಗೆ ಭಾಗವಹಿಸುವಂತೆ ಮಾಡಿದಲ್ಲಿ ಅಂತಹ ವ್ಯಕ್ತಿಯೂ ಸಹ ಈ ಅಧ್ಯಾದೇಶದಡಿ ಅಪರಾಧಿಯೆಂದು ಪರಿಗಣಿತನಾಗುತ್ತಾನೆ.

ಈ ಮೇಲಿನ ರೀತಿಯಲ್ಲಿ ಸ್ವೀಕರಿಸಿದ ಠೇವಣಿಗಳನ್ನು ಅನಿಯಂತ್ರಿತ ಠೇವಣಿ ಯೋಜನೆಗಳಡಿ ಸ್ವೀಕರಿಸಿದ ಠೇವಣಿಗಳೆಂದು ಪರಿಗಣಿಸಿ ಈ ಅಧ್ಯಾದೇಶದಡಿ ಸದರಿ ಸಹಕಾರ ಸಂಸ್ಥೆಯ ವಿರುದ್ದ ಸೂಕ್ತ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

ಆದ್ದರಿಂದ ಸಹಕಾರ ಸಂಸ್ಥೆಗಳೂ ಸಹ ಈ ಅಧ್ಯಾದೇಶದ ವ್ಯಾಪ್ತಿಯಲ್ಲಿ ಬರುತ್ತದೆ.

### ಅಧ್ಯಾದೇಶದ ಸ್ವರೂಪ

- ಈ ಅಧ್ಯಾದೇಶವು ಎಂಟು (8) ಅಧ್ಯಾಯಗಳು ಮತ್ತು ನಲವತ್ತೆರಡು (42) ಕಲಂಗಳನ್ನು ಹೊಂದಿರುತ್ತದೆ.
- ಈ ಅಧ್ಯಾದೇಶವು ಜಾರಿಗೆ ಬಂದ ನಂತರ ಠೇವಣಿಗಳನ್ನು ಸ್ವೀಕರಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ರಾಜ್ಯ ಯಾ ಕೇಂದ್ರ ಕಾಯ್ದೆಯಲ್ಲಿ ಏನೇ ಹೇಳಿದ್ದರೂ ಮತ್ತು ಯಾವುದೇ ಪ್ರಾವಧಾನಗಳು ಅಸಮಂಜಸವಾಗಿದ್ದರೂ ಸಹ ಈ ಅಧ್ಯಾದೇಶದಲ್ಲಿ ತಿಳಿಸಿರುವ ಅಂಶಗಳೇ ಜಾರಿಗೆ ಬರುತ್ತವೆ.

### ಉದ್ದೇಶ :

- ಯಾವುದೇ ಠೇವಣಿ ಸ್ವೀಕರಣಾ ಸಂಸ್ಥಾಪನೆಯು ಠೇವಣಿಗಳನ್ನು ಸ್ವೀಕರಿಸಿ ಸಕಾಲದಲ್ಲಿ ಹಿಂತಿರುಗಿಸದಿದ್ದಲ್ಲಿ
- ಕಾನೂನುಗಳಿಗೆ ವಿರುದ್ದವಾಗಿ ಒಬ್ಬ ವ್ಯಕ್ತಿ ಯಾ ಸಂಸ್ಥೆ ಮೋಸದ ಉದ್ದೇಶದಿಂದ ಠೇವಣಿ ಯೋಜನೆಗಳನ್ನು ರೂಪಿಸಿದ್ದಲ್ಲಿ
- ತಮ್ಮ ಯೋಜನೆಗಳಲ್ಲಿ ತೊಡಗಿಸುವುದರಿಂದ ಹೆಚ್ಚಿನ ಲಾಭವಾಗುತ್ತದೆಯೆನ್ನುವ ಅಮಿಷವೊಡ್ಡುತ್ತಿದ್ದಲ್ಲಿ

- ಹೆಚ್ಚಿನ ಬಡ್ಡಿ ದರ ಅಥವಾ ಹೆಚ್ಚಿನ ಮೊತ್ತವನ್ನು ಹಿಂತಿರುಗಿಸುವ ಪ್ರಲೋಭನೆಯ ಮೂಲಕ ಸಾರ್ವಜನಿಕರಿಂದ ಠೇವಣಿ ಸ್ವೀಕರಿಸುತ್ತಿದ್ದಲ್ಲಿ ಅವುಗಳನ್ನು ತಡೆಯುವುದು ಈ ಅಧ್ಯಾದೇಶದ ಉದ್ದೇಶ.

### ನಿಯಂತ್ರಿತ ಠೇವಣಿ ಯೋಜನೆಗಳು : (Regulated Deposit Scheme)

ಈ ಅಧ್ಯಾದೇಶದಲ್ಲಿ ನಿಯಂತ್ರಿತ ಠೇವಣಿ ಯೋಜನೆಗಳು ಯಾವುವು ಎಂಬುದರ ಯಾದಿಯನ್ನು ನೀಡಲಾಗಿದ್ದು, ಯಾದಿ ಕೆಳಕಂಡಂತಿದೆ;

1. ಸೆಬಿಯಿಂದ ಪರವಾನಗಿ ಪಡೆದಿರುವ ಸಾಮೂಹಿಕ ಹೂಡಿಕೆ ಯೋಜನೆಗಳು.
2. ಸಹಕಾರ ಸಂಸ್ಥೆಗಳಲ್ಲಿ ಮತದಾನದ ಹಕ್ಕುಳ್ಳ ಸದಸ್ಯರಿಂದ ಸ್ವೀಕರಿಸುವ ಠೇವಣಿಗಳು.
3. ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಸ್ವೀಕರಿಸುವ ಠೇವಣಿಗಳು.
4. ಯಾವುದೇ ನಿಯಂತ್ರಿತ ವಿಮಾ ಕಂಪನಿಗಳ ವಿಮಾ ಯೋಜನೆಗಳು.
5. ಯಾವುದೇ ಅಧಿಕೃತ ಪಿಂಚಣಿ ಯೋಜನೆಗಳು.
6. ಕಂಪನಿ ಅಧಿನಿಯಮ, 2013ರಡಿ ನೋಂದಣಿ ಹೊಂದಿರುವ ಕಂಪನಿಗಳು ಪಡೆದಿರುವ ಠೇವಣಿಗಳು.
7. ಕಂಪನಿ ಅಧಿನಿಯಮ, 2013ರಡಿ ನೋಂದಣಿ ಹೊಂದಿರುವ ಕಂಪನಿಗಳು ಪಡೆಯುವ ನಿಧಿಗಳು.
8. ಚೀಟಿ ಅಧಿನಿಯಮ, 1982ರಡಿ ಚೀಟಿ ವ್ಯವಹಾರ ನಡೆಸುವ ಕಂಪನಿಗಳು ಸ್ವೀಕರಿಸುವ ಠೇವಣಿಗಳು.
9. ಕಂಪನಿಗಳು ನೀಡುವ ಶೇರ್ ಬೇಸ್ಡ್ ಎಂಪ್ಲಾಯೀಸ್ ಬೆನಿಫಿಟ್ ಸ್ಕೀಂ
10. ಬ್ಯುಸಿನೆಸ್ ಕರೆಸ್ಪಾಂಡನ್ಸ್‌ಗಳು ಮತ್ತು ಫೆಸಿಲಿಟೇಟರ್‌ಗಳು ಸ್ವೀಕರಿಸುವ ಠೇವಣಿಗಳು.
11. ಪ್ರೈಜ್ ಚಿಟ್ಸ್ ಮತ್ತು ಮನಿ ಸರ್ಕುಲೇಶನ್ ಸ್ಕೀಂ (ಬ್ಯಾನಿಂಗ್) ಆಕ್ಟ್, 1978ರಡಿ ಬಹುಮಾನದ ಚಿಟ್‌ಗಳು.
12. ಯಾವುದೇ ನಿಯಂತ್ರಣ ಪ್ರಾಧಿಕಾರದ ಅಡಿಯಲ್ಲಿ ಅಥವಾ ಪ್ರಾಧಿಕಾರದಿಂದ ನೋಂದಣಿ ಹೊಂದಿರುವ ಸಂಸ್ಥೆಯಿಂದ ಸ್ವೀಕರಿಸಲ್ಪಟ್ಟ ಠೇವಣಿಗಳು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಹಕಾರಿ ಸಂಸ್ಥೆಗಳು ತಾವು ನೋಂದಣಿಯಾದ ಕಾಯ್ದೆಯಡಿಯಲ್ಲಿ ಅನುಮತಿಸಬಹುದಾದಂತೆ ತನ್ನ ಸದಸ್ಯರಿಂದ ಸ್ವೀಕರಿಸಿದ ಠೇವಣಿಗಳು ಮಾತ್ರ ನಿಯಂತ್ರಿತ ಠೇವಣಿಯ ವ್ಯಾಪ್ತಿಯಲ್ಲಿ ಬರುತ್ತದೆ. ಆದಾಗ್ಯೂ ಸಹ ಯಾವುದೇ ಸಹಕಾರಿ ಸಂಸ್ಥೆಯು ತಾನು ಸ್ವೀಕರಿಸುವ ಠೇವಣಿಗಳನ್ನು ಸಕಾಲದಲ್ಲಿ ಹಿಂತಿರುಗಿಸದಿದ್ದಲ್ಲಿ ಹಾಗೂ ಠೇವಣಿಗಳನ್ನು ಕ್ರೋಡೀಕರಿಸುವುದಕ್ಕೆ ಜಾಹಿರಾತುಗಳನ್ನು ನೀಡುತ್ತಿದ್ದಲ್ಲಿ ಮತ್ತು ಯಾವುದೇ ವ್ಯಕ್ತಿಯು ಹೂಡಿಕೆ ಮಾಡುವಂತೆ ಇನ್ನೊಬ್ಬ ವ್ಯಕ್ತಿಯನ್ನು ಪ್ರಚೋದಿಸಿ ಹೂಡಿಕೆ ಮಾಡುವಂತೆ ಅಥವಾ ಸದಸ್ಯನಾಗುವಂತೆ ಅಥವಾ ಸ್ಕೀಂಗಳಿಗೆ ಭಾಗವಹಿಸುವಂತೆ ಮಾಡಿದಲ್ಲಿ ಅಂತಹವುಗಳನ್ನು ಅನಿಯಂತ್ರಿತ ಠೇವಣಿ ಯೋಜನೆಯೆಂದು ಪರಿಗಣಿಸಲಾಗುತ್ತದೆ ಮತ್ತು ಈ ಅಧ್ಯಾದೇಶದಡಿಯಲ್ಲಿ ವಿಚಾರಣೆ ನಡೆಸಲು ಯೋಗ್ಯವಾಗುತ್ತವೆ.

### ಠೇವಣಿ ಸ್ವೀಕರಿಸುವವ (Deposit Taker)

'ಠೇವಣಿ ಸ್ವೀಕರಿಸುವವ' ಎಂದರೆ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಅಥವಾ ಏಕವ್ಯಕ್ತಿ ಸಂಸ್ಥೆ, ಪಾಲುದಾರಿಕಾ ಸಂಸ್ಥೆ (ನೋಂದಾಯಿತ ಮತ್ತು ನೋಂದಾಯಿತವಲ್ಲದ), ನಿಯಮಿತ ಜವಬ್ದಾರಿಯ ಪಾಲುದಾರಿಕಾ ಸಂಸ್ಥೆಗಳು, ಕಂಪನಿ ಅಧಿನಿಯಮ,2013ರಡಿಯಲ್ಲಿ ನೋಂದಣಿ ಹೊಂದಿದ ಕಂಪನಿ, ಅಸೋಸಿಯೇಶನ್ ಆಫ್ ಪರ್ಸನ್ಸ್, ಸಹಕಾರಿ, ಬಹುರಾಜ್ಯ ಸಹಕಾರಿ ಸಂಘಗಳನ್ನು ಒಳಗೊಂಡಿರುತ್ತದೆ. ಆದರೆ ಈ ಕೆಳಗಿನವುಗಳನ್ನು ಒಳಗೊಂಡಿರುವುದಿಲ್ಲ;

- ಶಾಸನಸಭೆಯ ಮೂಲಕ ರಚನೆಗೊಂಡ ಕಾಯ್ದೆಯನ್ವಯ ರಚನೆಗೊಂಡ ನಿಗಮಗಳು.
- ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರಡಿ ನೋಂದಣಿಗೊಂಡಿರುವ ಬ್ಯಾಂಕಿಂಗ್ ಕಂಪನಿ, ಹೊಸ ಕರೆಸ್ಪಾಂಡಿಂಗ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅದರ ಸಹವರ್ತಿ ಬ್ಯಾಂಕುಗಳು.

### ಠೇವಣಿ ಎಂದರೇನು? (What is Deposit)

ಉದ್ದೇಶಿತ ಅಧ್ಯಾದೇಶದನ್ವಯ ಠೇವಣಿ ಎಂದರೆ; ಸಾಲ ರೂಪದಲ್ಲಿ ಪಡೆದುಕೊಂಡಿರುವ ಯಾವುದೇ ಮೊತ್ತ ಅಥವಾ ಮುಂಗಡ ಅಥವಾ ಯಾವುದೇ ಸಮಯದಲ್ಲಿ ಮತ್ತು ರೂಪದಲ್ಲಿ ಮರುಪಾವತಿಸಬೇಕಿರುವ ಮೊತ್ತವಾಗಿರುತ್ತದೆ.ಇದು ಠೇವಣಿ ಸ್ವೀಕಾರ ಸಂಸ್ಥಾಪನೆಯು ಲಾಭ ಅಥವಾ ಲಾಭ ರಹಿತವಾಗಿ, ನಗದು ಅಥವಾ ಬೇರೆ ರೂಪದಲ್ಲಿ ಒದಗಿಸುವ ಸೇವೆಯನ್ನು ಒಳಗೊಂಡಿರುತ್ತದೆ.

ಅಧ್ಯಾದೇಶದಲ್ಲಿನ 'ಠೇವಣಿ' ವ್ಯಾಖ್ಯಾನವು ಎಲ್ಲಾ ರೀತಿಯ ಠೇವಣಿಗಳ ಸಂಗ್ರಹವನ್ನು ಒಳಗೊಂಡಿರುತ್ತದೆ.ಕಾಯ್ದೆಯಲ್ಲಿ 'ಠೇವಣಿಗಳ' ವ್ಯಾಪ್ತಿಯಿಂದ ಯಾವೆಲ್ಲಾ ಅಂಶಗಳು ಹೊರತಾಗಿವೆ ಎಂಬುದರ ಕುರಿತಂತೆ ಸಮಗ್ರವಾದ ಯಾದಿಯನ್ನು ಒದಗಿಸಲಾಗುತ್ತದೆ.ಈ ಅಧ್ಯಾದೇಶದ ವ್ಯಾಪ್ತಿಯಲ್ಲಿ ಸಂಸ್ಥೆಗಳು/ ವ್ಯಕ್ತಿಗಳು ಕಾನೂನುಬಾಹಿರವಾಗಿ ಪಡೆದುಗೊಂಡಿರುವ ಠೇವಣಿ/ಮೊತ್ತವು ಬರುವುದನ್ನು ಖಚಿತಪಡಿಸುತ್ತದೆ.

### ಸಮುಚಿತ ಪ್ರಾಧಿಕಾರ (Competent Authority)

ರಾಜ್ಯ ಸರ್ಕಾರವು ಈ ಅಧ್ಯಾದೇಶದಡಿ ಯಾವುದೇ ವ್ಯಕ್ತಿ, ಸಂಸ್ಥೆ ಕುರಿತಂತೆ ವಿಚಾರಣಾ ಅಥವಾ ತನಿಖೆ ನಡೆಸಲು ಜಿಲ್ಲಾ ಮ್ಯಾಜಿಸ್ಟ್ರೇಟ್ ದರ್ಜೆಗೆ ಕಡಿಮೆಯಿಲ್ಲದ ವ್ಯಕ್ತಿಯನ್ನು ಸಮುಚಿತ ಪ್ರಾಧಿಕಾರವೆಂದು ನೇಮಕ ಮಾಡಬಹುದು.

### ನ್ಯಾಯಾಲಯಗಳ ಕಾರ್ಯವ್ಯಾಪ್ತಿ (Jurisdiction of Courts)

ಈ ಅಧ್ಯಾದೇಶದ ಪರಿಣಾಮಕಾರಿ ಜಾರಿಗಾಗಿ ಸತ್ರ ನ್ಯಾಯಾಲಯ ಅಥವಾ ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆಯನ್ನು ನಡೆಸಲಾಗುತ್ತದೆ.

ಈ ಅಧ್ಯಾದೇಶವು ಅನಿಯಂತ್ರಿತ ಠೇವಣಿ ಯೋಜನೆಗಳನ್ನು ಪ್ರಚಾರ ಮಾಡುವುದನ್ನು, ಜಾರಿಗೊಳಿಸುವುದನ್ನು, ಉತ್ತೇಜಿಸುವುದನ್ನು ನಿಷೇಧಿಸುತ್ತದೆ ಮತ್ತು ಇಂತಹ ಯೋಜನೆಗಳಡಿ ಸ್ವೀಕರಿಸುವ ಠೇವಣಿಗಳನ್ನು ಮರುಪಾವತಿಸಲು ವಿಫಲವಾದವರಿಗೆ ದಂಡವನ್ನು ವಿಧಿಸುವುದರ ಮೂಲಕ ಮುಗ್ಧ ಜನರು ತಾವು ಕಷ್ಟಪಟ್ಟು ದುಡಿದ ಹಣವನ್ನು ರಕ್ಷಿಸಲು ಆದ್ಯತೆ ನೀಡಲಾಗಿದೆ. ಮತ್ತು ಈ ಅಧ್ಯಾದೇಶದ ಜಾರಿಯ ಪೂರ್ವದಲ್ಲೇ ಅನಿಯಂತ್ರಿತ ಠೇವಣಿ ಯೊಜನೆಯಡಿ ಸ್ವೀಕರಿಸಿದ ಠೇವಣಿಗಳನ್ನು ಮರುಪಾವತಿಸಲು ವಿಫಲವಾಗಿರುವ ವ್ಯಕ್ತಿ / ಸಂಸ್ಥೆ / ಪಾಲುದಾರಿಕಾ ಸಂಸ್ಥೆ / ನಿಯಮಿತ ಹೊಣೆಗಾರಿಕೆಯ ಪಾಲುದಾರಿಕಾ

ಸಂಸ್ಥೆಗಳು ಈ ಅಧ್ಯಾದೇಶದ ವ್ಯಾಪ್ತಿಯಲ್ಲಿ ಬರುತ್ತವೆ ಎಂಬುದನ್ನೂ ಖಾತರಿಪಡಿಸಲಾಗಿದೆ.

ಈ ಅಧ್ಯಾದೇಶದಲ್ಲಿ ಕೇಂದ್ರ ಸರ್ಕಾರದಿಂದ ರಚಿತವಾದ ಉನ್ನತಾಧಿಕಾರಿಗಳ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯಲ್ಲಿ ವಿವಿಧ ಮಂತ್ರಾಲಯಗಳ ಪ್ರತಿನಿಧಿಗಳು, ಸೆಬಿ, ಭಾರತೀಯ ರಿಸರ್ವ್ ಬ್ಯಾಂಕ್, ಸಿಬಿಐ ಪ್ರತಿನಿಧಿಗಳು ಪ್ರಾತಿನಿಧಿತ್ವ ಹೊಂದಿರುತ್ತದೆ. ಈ ಸಮಿತಿಯು ಯಾವುದೆ 'ಠೇವಣಿ ಸ್ವೀಕಾರ ಸಂಸ್ಥಾಪನೆ'ಯ ವಿರುದ್ಧ ದೂರಿನ ಕುರಿತು ವಿಚಾರಣೆ ನಡೆಸುವ ಅಧಿಕಾರವನ್ನು ಹೊಂದಿರುತ್ತದೆ.

ಈ ಅಧ್ಯಾದೇಶದಲ್ಲಿ ಅಧಿಕೃತ ನ್ಯಾಯಾಲಯವು ನಕಲಿ ಅಥವಾ ಅನಧಿಕೃತ ಠೇವಣಿ ಯೋಜನೆಯ ಮೂಲಕ ಪಡೆದುಕೊಂಡಿರುವ ಮೊತ್ತದಿಂದ ಪಡೆದುಕೊಂಡಿರುವ ಆಸ್ತಿಗಳನ್ನು ಜಪ್ತಿ ಮಾಡಲು ಅಧಿಕಾರವನ್ನು ನೀಡಲಾಗಿದೆ. ಈ ಅಧ್ಯಾದೇಶದಡಿ ನ್ಯಾಯಾಲಯವು ಆಸ್ತಿ ಜಪ್ತಿಗೆ ಸಂಬಂಧಿಸಿದಂತೆ ಹೆಚ್ಚಿನ ಅಧಿಕಾರವನ್ನು ಹೊಂದಿರುತ್ತದೆ.

ಈ ಅಧ್ಯಾದೇಶದಡಿಯಲ್ಲಿನ ಅಪರಾಧವು ಸಂಜ್ಞೇಯ ಮತ್ತು ಜಾಮೀನು ರಹಿತ ಅಪರಾಧವಾಗಿರುತ್ತದೆ.

### ಶಿಕ್ಷೆ :

1. ಈ ಅಧ್ಯಾದೇಶದಲ್ಲಿ ಯಾವುದೇ ಠೇವಣಿ ಸ್ವೀಕರಣಾ ಸಂಸ್ಥೆಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಠೇವಣಿಯನ್ನು ಸ್ವೀಕರಿಸುವುದಕ್ಕೋಸ್ಕರ ಜಾಹಿರಾತು ನೀಡಿದಲ್ಲಿ, ಪ್ರಚಾರ ಮಾಡಿದಲ್ಲಿ ಅದನ್ನು ಅನಿಯಂತ್ರಿತ ಠೇವಣಿ ಸ್ವೀಕರಣಾ ಯೋಜನೆಯೆಂದು ಪರಿಗಣಿಸಲಾಗುತ್ತದೆ ಮತ್ತು ಇದಕ್ಕಾಗಿ ಕನಿಷ್ಟ ಮೂರು ವರ್ಷಗಳು ಆದರೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಶಿಕ್ಷೆ ಮತ್ತು ಕನಿಷ್ಟ ಐದು ಲಕ್ಷದಿಂದ ಇಂತಹ ಯೋಜನೆಯಲ್ಲಿ ಭಾಗವಹಿಸಿರುವವರಿಂದ ಪಡೆದಿರುವ ಒಟ್ಟು ಮೊತ್ತದ ಎರಡು ಪಟ್ಟು ಮೊತ್ತದವರೆಗೆ ಇದರಿಂದ ದಂಡಿತನಾಗತಕ್ಕದ್ದು.
2. ಈ ಅಧ್ಯಾದೇಶದಲ್ಲಿ ಠೇವಣಿ ಸ್ವೀಕರಣಾ ಸಂಸ್ಥಾಪನೆಯು ಸ್ವೀಕರಿಸುವ ಠೇವಣಿಯನ್ನು ನಿಯಂತ್ರಿತ ಠೇವಣಿ ಯೋಜನೆಯಡಿಯಲ್ಲಿ ಠೇವಣಿಯನ್ನು ಸ್ವೀಕರಿಸಿ, ಸಕಾಲದಲ್ಲಿ ಠೇವಣಿಯನ್ನು ಹಿಂತಿರುಗಿಸದೆ ವಂಚಿಸಿದರೆ ಅಂತಹ ಯಾವುದೇ ಸಂಸ್ಥೆ/ ವ್ಯಕ್ತಿಗೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಅಥವಾ ಐದು ಲಕ್ಷಕ್ಕೆ ಕಡಿಮೆ ಇಲ್ಲದ ಆದರೆ 25 ಕೋಟಿವರೆಗೆ ವಿಧಿಸಬಹುದಾದ ದಂಡ ಅಥವಾ ಮರುಪಾವತಿಸದೇ ವಂಚನೆ ಮಾಡಿರುವ ಮೊತ್ತದಿಂದ ಪಡೆದಿರುವ ಲಾಭದ ಮೂರು ಪಟ್ಟು ಇದರಲ್ಲಿ ಯಾವುದು ಹೆಚ್ಚೋ ಅದು ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.
3. ಈ ಅಧ್ಯಾದೇಶದಲ್ಲಿ ಸಾರ್ವಜನಿಕರಿಂದ ಠೇವಣಿಗಳನ್ನು ಸ್ವೀಕರಿಸುವ ಸಂಸ್ಥೆಗಳು / ವ್ಯಕ್ತಿಗಳಿಗೆ ದಂಡನೆ ಮತ್ತು ವಿತ್ತೀಯ ದಂಡನೆಗಳನ್ನು ವಿಧಿಸಲು ಹಾಗೂ ಸದರಿಯವರುಗಳ ಸ್ಥಿರ ಹಾಗೂ ಚರ ಆಸ್ತಿಗಳನ್ನು ಜಪ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

### ಸಹಕಾರ ಸಂಸ್ಥೆಗಳ ಮೇಲೆ ಪರಿಣಾಮ

ಬಹುರಾಜ್ಯ ಅಥವಾ ಯಾವುದೇ ರಾಜ್ಯದ ಸಹಕಾರಿ ಕಾಯ್ದೆಯಡಿಯಲ್ಲಿ ನೋಂದಣಿಯಾದ ಸಹಕಾರಿ ಸಂಸ್ಥೆಗಳು ಠೇವಣಿ ಸ್ವೀಕರಣಾ ಸಂಸ್ಥಾಪನೆಯ ವ್ಯಾಖ್ಯಾನದೊಳಗೆ ಬರುತ್ತವೆ.

ಹಾಗೆಯೇ ಈ ಅಧ್ಯಾದೇಶದಲ್ಲಿ ನೀಡಲಾಗಿರುವ ವ್ಯಾಖ್ಯಾನವನ್ನು ಗಮನಿಸಿದಾಗ ಸಹಕಾರ ಸಂಸ್ಥೆಗಳು ತಾವು ನೋಂದಣಿಯಾದ ಕಾಯ್ದೆಯಡಿಯಲ್ಲಿ ಅನುಮತಿಸಬಹುದಾದಂತೆ ತನ್ನ ಸದಸ್ಯರಿಂದ ಸ್ವೀಕರಿಸುವ ಠೇವಣಿಗಳು ಮಾತ್ರ ನಿಯಂತ್ರಿತ ಠೇವಣಿ ಯೋಜನೆಗಳಾಗಿರುತ್ತವೆ. ಅಂದರೆ ಸೌಹಾರ್ದ ಸಹಕಾರ ಸಂಸ್ಥೆಗಳು ತನ್ನ ನಾಮಮಾತ್ರ ಸದಸ್ಯರಿಂದ ಸ್ವೀಕರಿಸುವ ಠೇವಣಿಗಳು ಅನಿಯಂತ್ರಿತ ಠೇವಣಿಯಾಗುತ್ತವೆ ಎಂಬುದು ಗಂಭೀರವಾಗಿ ಪರಿಗಣಿಸಬೇಕಾದ ವಿಷಯ.

ಅದಲ್ಲದೆ, ಯಾವುದೇ ಸಹಕಾರಿಯು ತಾನು ಸ್ವೀಕರಿಸಿದ ಠೇವಣಿಯನ್ನು ಸಕಾಲದಲ್ಲಿ ಹಿಂತಿರುಗಿಸದಿದ್ದಲ್ಲಿ ಮತ್ತು ಅಂತಹ ಠೇವಣಿದಾರರ ಹಿತರಕ್ಷಣೆ ಮಾಡುವುದು ಅನಿವಾರ್ಯವೆಂದು ಸರ್ಕಾರ ಅಭಿಪ್ರಾಯಪಟ್ಟಲ್ಲಿ ಸದರಿ ಸಹಕಾರಿಯ ವಿರುದ್ಧ ಈ ಅಧ್ಯಾದೇಶದಡಿಯಲ್ಲಿ ಕ್ರಮ ಜರುಗಿಸುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

ಸಹಕಾರಿಯು ಠೇವಣಿಗಳನ್ನು ಕ್ರೋಢೀಕರಿಸುವುದಕ್ಕೆ ಜಾಹಿರಾತುಗಳನ್ನು ನೀಡುತ್ತಿದ್ದಲ್ಲಿ ಮತ್ತು ಯಾವುದೇ ವ್ಯಕ್ತಿಯನ್ನು ಪ್ರಚೋದಿಸಿ ಹೂಡಿಕೆ ಮಾಡುವಂತೆ ಅಥವಾ ಸದಸ್ಯನಾಗುವಂತೆ ಅಥವಾ ಸ್ಕೀಂಗಳಿಗೆ ಭಾಗವಹಿಸುವಂತೆ ಮಾಡಿದಲ್ಲಿ ಸಹ ಈ ಅಧ್ಯಾದೇಶದಡಿ ಅಪರಾಧವಾಗುತ್ತದೆ

ಅಂತೆಯೇ ಸಹಕಾರಿಯು ತಾನು ಸ್ವೀಕರಿಸುವ ಠೇವಣಿಗಳ ಮೇಲೆ ಅಸಮಂಜಸ ದರದಲ್ಲಿ ಬಡ್ಡಿಯನ್ನು ಪಾವತಿಸುತ್ತಿದ್ದಲ್ಲಿ ಅಥವಾ ಅಂತಹ ದರದಲ್ಲಿ ಬಡ್ಡಿ ಪಾವತಿಸಲಾಗುವುದೆಂಬ ಭರವಸೆ ನೀಡಿದ್ದಲ್ಲಿ ಸಹ ಈ ಅಧ್ಯಾದೇಶದಡಿ ಅಪರಾಧವಾಗುತ್ತದೆ

ಸಹಕಾರಿಯು ತಾನು ಸ್ವೀಕರಿಸುವ ಠೇವಣಿಗಳ ಮೇಲಿನ ಬಡ್ಡಿ ಆಕರಣೆ ಪದ್ಧತಿಯಲ್ಲಿ ಅಸಮರ್ಪಕ ಮಾರ್ಗವನ್ನು ಅನುಸರಿಸುತ್ತಿದ್ದಲ್ಲಿ ಮತ್ತು ಅಂತಹ ಮಾರ್ಗಗಳಿಂದ ಠೇವಣಿದಾರರಿಗೆ ಪ್ರಲೋಭನೆಯಾಗುತ್ತಿದೆಯೆಂದು ಕಂಡುಬಂದಲ್ಲಿ ಸಹ ಈ ಅಧ್ಯಾದೇಶದಡಿ ಕ್ರಮ ಜರುಗಿಸಬಹುದಾಗಿರುತ್ತದೆ.

ಈ ಮೇಲಿನ ಯಾವುದೇ ಅಂಶಗಳಿದ್ದಲ್ಲಿ ಸಹಕಾರಿಯು ಸ್ವೀಕರಿಸಿದ ಠೇವಣಿಗಳನ್ನು ಅನಿಯಂತ್ರಿತ ಠೇವಣಿ ಯೋಜನೆಗಳಡಿ ಸ್ವೀಕರಿಸಿದ ಠೇವಣಿಗಳೆಂದು ಪರಿಗಣಿಸಿ ಈ ಅಧ್ಯಾದೇಶದಡಿ ಸದರಿ ಸಹಕಾರಿಯ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

ಈ ಅಧ್ಯಾದೇಶದ ಕಲಂ 10ರ ಪ್ರಕಾರ ಈ ಅಧ್ಯಾದೇಶ ಜಾರಿಗೆ ಬರುವ ದಿನಾಂಕದಂದು ವ್ಯವಹರಿಸುತ್ತಿರುವ ಅಥವಾ ನಂತರದಲ್ಲಿ ವ್ಯವಹಾರ ಪ್ರಾರಂಭಿಸುವ ಪ್ರತಿಯೊಬ್ಬ ಠೇವಣಿ ಸ್ವೀಕರಿಸುವವನೂ (ಡಿಪಾಸಿಟ್ ಟೇಕರ್) ನಿಗದಿತ ನಮೂನೆಯಲ್ಲಿ ಸಮುಚಿತ ಪ್ರಾಧಿಕಾರಕ್ಕೆ (ಕಾಂಪಿಟೆಂಟ್ ಅಥಾರಿಟಿಗೆ) ಮಾಹಿತಿ ನೀಡಬೇಕಿರುತ್ತದೆ.

ಈ ಮೇಲಿನ ಎಲ್ಲ ಅಂಶಗಳನ್ನು ಗಮನಿಸಿ ನಮ್ಮ ಸಹಕಾರ ಸಂಸ್ಥೆಗಳು ತಮ್ಮ ಠೇವಣಿ ಸ್ವೀಕರಣಾ ವ್ಯವಹಾರವನ್ನು ನಡೆಸಬೇಕಿರುತ್ತದೆ.

**(ಈ ಅಧ್ಯಾದೇಶದಲ್ಲಿ ಸಹಕಾರಿಗಳಿಗೆ ಅನ್ವಯಿಸುವ ಪ್ರಮುಖ ಅಂಶಗಳನ್ನು ಕ್ರೋಢೀಕರಿಸುವಲ್ಲಿ ಎಲ್ಲ ರೀತಿಯ ಜಾಗರೂಕತೆಯನ್ನು ವಹಿಸಲಾಗಿದೆಯಾದರೂ ನಿರ್ಧಾರಗಳನ್ನು ತೆಗೆದುಕೊಳ್ಳುವ ಮುನ್ನ ತಜ್ಞರ ಸಲಹೆಗಳನ್ನು ಪಡೆಯುವುದು ಸೂಕ್ತ ಎಂಬುದು ನಮ್ಮ ಅಭಿಪ್ರಾಯವಾಗಿದೆ. – ಬಿ.ವಿ.ರವೀಂದ್ರನಾಥ್)**

# ನಮಗೆ ತಿಳಿದಿರಬೇಕು – ಲೆಕ್ಕ ಪತ್ರಗಳ ವರ್ಷ

▶▶ ಭಾವುರಾವ್ ಕುಲಕರ್ಣಿ, ವ್ಯವಸ್ಥಾಪಕರು, ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು

ನಮಗೆಲ್ಲಾ, ಜನವರಿ 1 ಅಂದರೆ ಹೊಸ ವರ್ಷದ ಆರಂಭ, ಹೊಸದಾದ ಗುರಿ ತಲುಪಲು ನಿರ್ಣಯ ಕೈಗೊಳ್ಳಲು ಮತ್ತು ಅಪೂರ್ಣವಾಗಿ ಉಳಿದ ಹಳೆಯ ನಿರ್ಣಯಗಳ ನವೀಕರಣಕ್ಕೆ ಮತ್ತೊಂದು ಹೊಸ ಅವಕಾಶ!. ವಾಸ್ತವಿಕವಾಗಿ ಜನವರಿ 1 ಭಾರತೀಯರಿಗೆ ಹೊಸ ವರ್ಷವಲ್ಲ ಆದರೂ ವ್ಯವಹಾರಿಕವಾಗಿ ದಿನಾಂಕ ಮತ್ತು ತಿಂಗಳುಗಳನ್ನು ಎಲ್ಲರು ನೆನಪಿಟ್ಟುಕೊಳ್ಳಲು ಸುಲಭವಾಗುವುದರಿಂದ ಆಚರಣೆಯಲ್ಲಿದೆ. ಆದರೆ, ನಮ್ಮ ದೇಶದಲ್ಲಿ ಕೇಂದ್ರ ಸರಕಾರಕ್ಕೆ, ರಾಜ್ಯ ಸರಕಾರಕ್ಕೆ, ವ್ಯಾಪಾರಸ್ಥರಿಗೆ, ಹೂಡಿಕೆದಾರರಿಗೆ ಮತ್ತು ತೆರಿಗೆ ಪಾವತಿದಾರರಿಗೆ ಹೊಸ ವರ್ಷವೆಂದರೆ ಅದು ಏಪ್ರಿಲ್ 1.

ಈಗಾಗಲೆ, ಭಾರತದಲ್ಲಿ ಏಪ್ರಿಲ್ 1ರಿಂದ ಮಾರ್ಚ್ 31 ರವರೆಗಿನ ಹನ್ನೆರಡು ತಿಂಗಳ ಅವಧಿಯನ್ನು ಲೆಕ್ಕ ಪತ್ರಗಳ ವಾರ್ಷಿಕ ಅವಧಿ ಅಥವಾ ಹಣಕಾಸು ವ್ಯವಹಾರದ ವರ್ಷ ಎಂದು ವ್ಯಾಪಕವಾಗಿ ಜಾರಿಯಲ್ಲಿದೆ. ಈ ವ್ಯವಸ್ಥೆಯನ್ನು ಬ್ರಿಟೀಷ್ ಸರಕಾರವು ತನ್ನ ಆರ್ಥಿಕ ವರ್ಷಕ್ಕೆ ಹೊಂದಾಣಿಕೆಯಾಗುವಂತೆ, ಭಾರತದಲ್ಲಿ ತನ್ನ ಆಡಳಿತ ಅವಧಿಯಲ್ಲಿ ಜಾರಿಗೆ ತಂದಿತು. ಇದಕ್ಕೂ ಮೊದಲು ಭಾರತದಲ್ಲಿ, ಮೇ 1ರಿಂದ ಏಪ್ರಿಲ್ 30 ರವರೆಗಿನ ಹನ್ನೆರಡು ತಿಂಗಳ ಅವಧಿಯ ಲೆಕ್ಕ ಪತ್ರಗಳ / ಆರ್ಥಿಕ ವ್ಯವಹಾರದ ವರ್ಷ ಜಾರಿಯಲ್ಲಿತ್ತು.

ಭಾರತದಲ್ಲಿ, ಬಹುತೇಕ ಕಂಪನಿಗಳು ಮತ್ತು ವ್ಯಾಪಾರಿ ಸಂಸ್ಥೆಗಳು ಏಪ್ರಿಲ್ – ಮಾರ್ಚ್ ಅವಧಿಯ ಪುನರ್ ಆವೃತ್ತಿಯ ಅವಧಿಯನ್ನೆ ವಾರ್ಷಿಕ ಲೆಕ್ಕ ಪತ್ರಗಳ ಅವಧಿಯನ್ನಾಗಿ ಅಳವಡಿಸಿಕೊಂಡಿವೆ. ಈ ವ್ಯವಸ್ಥೆ ಸರಕಾರದ ವಾರ್ಷಿಕ ಲೆಕ್ಕ ಪತ್ರಗಳ ಅವಧಿಯೊಂದಿಗೂ ಹೊಂದಾಣಿಕೆಯಾಗುತ್ತದೆ. ಆದರೆ, ಕೆಲವೊಂದು ಕಂಪನಿಗಳು ಬೇರೆ ಬೇರೆ, ವಾರ್ಷಿಕ ಲೆಕ್ಕ ಪತ್ರಗಳ ಅವಧಿಯನ್ನು ಅನುಸರಿಸುತ್ತಿವೆ. ಉದಾಹರಣೆಗೆ, ನೆಸ್ಲೆ ಇಂಡಿಯಾ ಜನವರಿ–ಡಿಸೆಂಬರ್, ಗಿಲ್ಲೆಟ್ ಇಂಡಿಯಾ – ಜುಲೈ–ಜೂನ್. ಎಲ್ಲಾ ಕಂಪನಿಗಳ / ವ್ಯಾಪಾರಿ ಸಂಸ್ಥೆಗಳ ವಾರ್ಷಿಕ ಲೆಕ್ಕ ಪತ್ರಗಳ ಅವಧಿಯು ಏಕ ರೂಪವಾಗಿರಬೇಕೆಂಬ ಉದ್ದೇಶದಿಂದ ಇತ್ತೀಚೆಗೆ ಕಂಪನಿ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಹೀಗಾಗಿ, ಕಂಪನಿಗಳು ವಾರ್ಷಿಕ ಲೆಕ್ಕ ಪತ್ರಗಳ ಅವಧಿಯನ್ನು ಏಪ್ರಿಲ್–ಮಾರ್ಚ್ ಅವಧಿಗೆ ಮರು ಹೊಂದಾಣಿಕೆ ಮಾಡಿಕೊಳ್ಳುತ್ತಿವೆ. ಸಹಕಾರ ಸಂಘಗಳು / ಸೌಹಾರ್ದ ಸಹಕಾರಿಗಳ ವಾರ್ಷಿಕ ಲೆಕ್ಕ ಪತ್ರಗಳ ಅವಧಿಯೂ ಏಪ್ರಿಲ್ – ಮಾರ್ಚ್ ಆಗಿರುವುದು ನಮಗೆ ತಿಳಿದೆ ಇದೇ.

ಭಾರತೀಯ ರಿಸರ್ವ ಬ್ಯಾಂಕ್ ಸಹ ತನ್ನದೇ ಆದ ವಾರ್ಷಿಕ ಲೆಕ್ಕ ಪತ್ರಗಳ ಅವಧಿಯನ್ನು ಅನುಸರಿಸುತ್ತಿದೆ ಕಾರಣ ಅದು, ಎಲ್ಲಾ ಬ್ಯಾಂಕುಗಳ ವಾರ್ಷಿಕ ಆರ್ಥಿಕ ಫಲಿತಾಂಶಗಳನ್ನಾಧರಿಸಿ ವರದಿ ನೀಡಬೇಕಾಗಿರುವುದರಿಂದ, ಅಂಥ ಬ್ಯಾಂಕುಗಳು ತಮ್ಮ ವಾರ್ಷಿಕ ಲೆಕ್ಕ ಪತ್ರಗಳ ವರ್ಷ ಮುಕ್ತಾಯದ ನಂತರ ಆರ್ಥಿಕ ಫಲಿತಾಂಶಗಳ ಘೋಷಣೆ ಮಾಡುವುದರಿಂದ, ಆ ವರದಿಗಳನ್ನು ಒಟ್ಟುಗೂಡಿಸಿ, ಕ್ರೋಢಿಕೃತ ತಃಖ್ತೆಗಳನ್ನು ತಯಾರಿಸಬೇಕಾಗುತ್ತದೆ. ಹೀಗಾಗಿ ಭಾರತೀಯ ರಿಸರ್ವ ಬ್ಯಾಂಕ್ ಮೂರು ತಿಂಗಳು ವಿಳಂಬವಾಗಿ ಅಂದರೆ, ಜುಲೈ–ಜೂನ್ ಅವಧಿಯನ್ನು ವಾರ್ಷಿಕ ಲೆಕ್ಕ ಪತ್ರಗಳ ಅವಧಿಯನ್ನಾಗಿ ಅನುಸರಿಸುತ್ತಿದೆ.

ವಾರ್ಷಿಕ ಲೆಕ್ಕ ಪತ್ರಗಳ ಅವಧಿ ಯಾಕೆ ಮುಖ್ಯವಾಗುತ್ತದೆ? ವಾರ್ಷಿಕ ಲೆಕ್ಕ ಪತ್ರಗಳ ಅವಧಿಯೆಂದರೆ, ಇದೊಂದು ನಿಗದಿತ ಅವಧಿ. ಈ ಅವಧಿಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅಂದಾಜು ಆಯ–ವ್ಯಯ ಪಟ್ಟಿಯನ್ನು ತಯಾರಿಸುತ್ತವೆ. ಆರ್ಥಿಕ ಗುರಿಗಳನ್ನು ತಲುಪುವುದಕ್ಕಾಗಿ ಮತ್ತು ನಿಧಿಗಳ ಕ್ರೋಢಿಕರಣ / ಸಂಗ್ರಹಕ್ಕಾಗಿ ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸಬೇಕಾಗುತ್ತದೆ. ಈ ಎಲ್ಲಾ ಯೋಜನೆಗಳನ್ನು ಬರುವ ಆರ್ಥಿಕ ವರ್ಷಕ್ಕಾಗಿದ್ದರೂ ಚಾಲ್ತಿ ವರ್ಷದ ಕೊನೆಯಲ್ಲಿಯೆ ವಾರ್ಷಿಕ ಆಯ–ವ್ಯಯ (ಬಜೆಟ್) ಮಂಡಿಸಬೇಕಾಗುತ್ತದೆ. ಸರಕಾರಗಳಿಗೆ ತೆರಿಗೆ ಹಣವೇ ಆದಾಯದ ಮೂಲವಾಗಿದೆ. ಕಂಪನಿಗಳು, ವ್ಯಾಪಾರಿ ಸಂಸ್ಥೆಗಳು ಮತ್ತು ವ್ಯಕ್ತಿಗಳು ಪಾವತಿಸುವ ತೆರಿಗೆ ಮೊತ್ತವೇ ಸರಕಾರದ ಆದಾಯದ ಮೂಲವಾಗಿದೆ.

ಸರಕಾರದ ವಾರ್ಷಿಕ ತೆರಿಗೆ ಸಂಗ್ರಹದ ಅವಧಿಯು ಮತ್ತು ಪ್ರಸ್ತುತ ಜಾರಿಯಲ್ಲಿರುವ ವಾರ್ಷಿಕ ಲೆಕ್ಕ ಪತ್ರಗಳ ಅವಧಿಯು ಭಾರತದ ಮುಂಗಾರು ಋತುಮಾನಕ್ಕೆ ಹೊಂದಾಣಿಕೆಯಾಗುತ್ತಿಲ್ಲ ಎನ್ನುವ ಕಾರಣಕ್ಕೆ, ಕೇಂದ್ರ ಸರಕಾರವು ಸದರಿ ಅವಧಿಯನ್ನು ಜನವರಿ–ಡಿಸೆಂಬರ್ ಅವಧಿಗೆ ಬದಲಾಯಿಸಲು ಯೋಜಿಸಿತ್ತು ಆದರೆ ಅದು ಇನ್ನೂ ಕಾರ್ಯಗತವಾಗಿಲ್ಲ. ಮುಂಬರುವ ವರ್ಷಗಳಲ್ಲಿ ಬದಲಾವಣೆಯಾದರು ಆಗಬಹುದು.

ಅಂದರೆ, ಕಂಪನಿಗಳು, ವ್ಯಾಪಾರಿ ಸಂಸ್ಥೆಗಳು ಮತ್ತು ವ್ಯಕ್ತಿಗಳ ಎಲ್ಲಾ ಆರ್ಥಿಕ ವ್ಯವಹಾರಗಳ ಆರಂಭ ಮತ್ತು ಮುಕ್ತಾಯದ ವರ್ಷವು ಏಪ್ರಿಲ್ – ಮಾರ್ಚ ಎಂದಾಯಿತು. ಲೆಕ್ಕಪರಿಶೋಧನೆ, ಕಲಂ 80ಸಿ ಅಡಿ ಹೂಡಿಕೆ ಮಾಡುವುದು, ಆದಾಯ ತೆರಿಗೆ ತಃಖ್ತೆಗಳನ್ನು ಸಲ್ಲಿಸುವುದು ಎಲ್ಲವು ಈ ಅವಧಿಯಲ್ಲಿಯೇ ಆಗಬೇಕು.

ಕೊನೆ ಹನಿ, ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ವಾರ್ಷಿಕ ಲೆಕ್ಕ ಪತ್ರಗಳ ಅವಧಿಯು ಏಪ್ರಿಲ್–ಮಾರ್ಚ ಆಗಿದ್ದರೂ, ಆಡಳಿತ ಮಂಡಳಿಯ ಅಧಿಕಾರ ಅವಧಿಯು ಬೇರೆಯೇ ಆಗಿತ್ತು. ಉದಾಹರಣೆಗೆ, ಆಡಳಿತ ಮಂಡಳಿಯು ಫೆಬ್ರವರಿ ತಿಂಗಳಲ್ಲಿ ಅಧಿಕಾರ ವಹಿಸಿಕೊಂಡಿದ್ದರೂ ಮಾರ್ಚ ತಿಂಗಳ ಅಂತ್ಯಕ್ಕೆ, ಅಂದರೆ ಕೇವಲ ಎರಡೇ ಎರಡೇ ತಿಂಗಳಿಗೆ ಒಂದು ವರ್ಷ ಅಧಿಕಾರ ಪೂರೈಸಿದೆ ಎಂದು ಪರಿಗಣಿಸಲಾಗುತ್ತಿತ್ತು.! ಗಾಭರಿಯಾಗಬೇಡಿ. ಈ ವ್ಯವಸ್ಥೆ ಕಾಯ್ದೆ ತಿದ್ದುಪಡಿಗೂ ಮೊದಲು ಜಾರಿಯಲ್ಲಿತ್ತು. ಪ್ರಸ್ತುತ ಚುನಾವಣೆ ಫಲಿತಾಂಶ ಘೋಷಣೆಯಾದ ದಿನದಿಂದ ಪೂರ್ಣ ಐದು ವರ್ಷವಿದೆ.

# ಸಹಕಾರಿ ಸಂಸ್ಥೆಗಳು ಮತ್ತು ಸಾಮಾಜಿಕ ನ್ಯಾಯ

▶▶ ಶ್ರೀಮತಿ ದಿವ್ಯ ಟಿ.



**ಸಹಕಾರಿ ಸಂಸ್ಥೆಗಳು ಆರ್ಥಿಕ ಬದ್ಧತೆಯಿಂದ ಸೇವೆಯನ್ನು ಸಲ್ಲಿಸುವುದರ ಮೂಲಕ ಬಡ ಮತ್ತು ಕೆಳವರ್ಗದ ಜನರಿಗೆ ಬಡತನದ ಹೊರೆಯನ್ನು ಕಡಿಮೆ ಮಾಡುವಲ್ಲಿ ಸಹಕಾರಿಯಾಗುತ್ತಿದೆ. ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಗೆ ಉಳಿತಾಯ ಸೌಲಭ್ಯಗಳನ್ನು ಒದಗಿಸುವ ಮೂಲಕ ವೈದ್ಯಕೀಯ ತುರ್ತು ಅಗತ್ಯಗಳಂತಹ ಆಘಾತದ ಅಪಾಯಗಳನ್ನು ಕಡಿಮೆ ಮಾಡಲು ಸಹಕಾರಿಯಾಗುತ್ತಿದೆ. ಸೆನೆಗಲ್‌ನಲ್ಲಿ ಆರೋಗ್ಯ ರಕ್ಷಣೆಗೆ ಸಂಬಂಧಿಸಿದಂತೆ ಪಿಎಂಇಸಿಎಎಸ್ ಕಡಿಮೆ ಆದಾಯವನ್ನು ಹೊಂದಿರುವ ಕುಟುಂಬಗಳಿಗೆ ಉಳಿತಾಯ ಮತ್ತು ಅನಾನೂಕೂಲ ಪರಿಸ್ಥಿತಿಯಲ್ಲಿ ಆರೋಗ್ಯ ರಕ್ಷಣೆಗಾಗಿ ಕೈಗೆಟಕುವ ದರದಲ್ಲಿ ವಿಮೆಯನ್ನು ಒದಗಿಸುತ್ತಿದೆ.**

ಸಹಕಾರಿ ಸಂಸ್ಥೆಗಳಿಗೆ ಬೆಂಬಲ ನೀಡಿ, ಅವುಗಳನ್ನು ಬಲಪಡಿಸಿದಾಗ ಸಾಮಾಜಿಕ ನ್ಯಾಯದ ಕೊರತೆಯನ್ನು ನೀಗಿಸಲು ಸಹಕಾರಿಯಾಗುತ್ತದೆ.

ಇಂದು, ವಿಶ್ವದಲ್ಲಿರುವ ಅನೇಕ ಸಾಮಾಜಿಕ ಗುಂಪುಗಳು ಮತ್ತು ವರ್ಗಗಳು ಸಮಾಜದಲ್ಲಿರುವ ಇತರ ಗುಂಪುಗಳಿಂದ ಅದರದೇ ಆದ ಗೌರವವನ್ನು ಪಡೆಯದೇ ಇರುವ ಹಿನ್ನೆಲೆಯಲ್ಲಿ ಸಮಾಜವು ವಿಭಜನೆಗೊಂಡಿದೆ. ಆದ್ದರಿಂದ, ಸಮಾಜವನ್ನು ಎಲ್ಲರಿಗಾಗಿ ಸೃಷ್ಟಿಸಲು ಮತ್ತು ಅಭಿವೃದ್ಧಿಪಡಿಸಲು ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಸಾಮಾಜಿಕ ನ್ಯಾಯವು ತುರ್ತು ಅಗತ್ಯ ಮತ್ತು ಬೇಡಿಕೆಯಾಗಿದೆ.

ಸಮಾಜದಲ್ಲಿರುವ ಪ್ರತಿಯೊಬ್ಬರಿಗೂ ಸಮಾನ ಅವಕಾಶವನ್ನು ನೀಡುವಲ್ಲಿ ಸಾಮಾಜಿಕ ನ್ಯಾಯದ ಕೊರತೆಯನ್ನು ಕಾಣಬಹುದು. ಇದು ಪ್ರತಿಯೊಬ್ಬರ ಘನತೆಯನ್ನು ಕೇಂದ್ರೀಕರಿಸುತ್ತದೆ. ಸಾಮಾಜಿಕ ನ್ಯಾಯವು ಪ್ರತಿಯೊಬ್ಬರನ್ನು ಅವರ ಸಮಾಜದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ಮತ್ತು ಅಭಿವೃದ್ಧಿಯ ಪ್ರತಿಫಲವನ್ನು ಪಡೆಯಲು ಉತ್ತೇಜಿಸುತ್ತದೆ. ಇದು ಸಾಧ್ಯ ಎಂದು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ಹಲವಾರು ಸಂಸ್ಥೆಗಳಿಗಿದೆ. ಆದಾಗ್ಯೂ ಸಹ, ಸಾಮಾಜಿಕ ನ್ಯಾಯವು ಇಲ್ಲದಿರುವುದಕ್ಕೆ ಅನೇಕ ನಿದರ್ಶನಗಳಿವೆ.

**ಸಾಮಾಜಿಕ ನ್ಯಾಯಕ್ಕಾಗಿ ಸಹಕಾರಿ ಸಂಸ್ಥೆಗಳ ಮಹತ್ವ :** ಸಹಕಾರಿ ಸಂಸ್ಥೆಗಳು ಸಾಮಾಜಿಕ ನ್ಯಾಯದ ಸಮಸ್ಯೆಗಳ ಕುರಿತು ನೇರವಾಗಿ ತಿಳಿಸುವ ತತ್ವಗಳು ಹಾಗೂ ಮೌಲ್ಯಗಳನ್ನಾಧರಿಸಿದೆ. ಹೆಚ್ಚಿನ ಸಾಂಪ್ರದಾಯಿಕ ಸಹಕಾರಿ ಸಂಸ್ಥೆಗಳು ವಿಶ್ವದಲ್ಲಿನ ಸಹಕಾರಿ ಸಂಸ್ಥೆಗಳಿಗಾಗಿ ಇರುವ ಅಪೆಕ್ಸ್ ಸಂಸ್ಥೆಯಾದ ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ (ಇಂಟರ್ ನ್ಯಾಷನಲ್ ಕೋ ಆಪರೇಟಿವ್ ಅಲೈನ್ಸ್–ಐಸಿಎ) ಇವರಿಂದ ಪ್ರಾಯೋಜಿತವಾಗಿರುವ ಸಹಕಾರಿ ಗುರುತಿನ ಏಳು ತತ್ವಗಳನ್ನು ಅನುಸರಿಸುತ್ತಿವೆ. ಈ ತತ್ವಗಳು ಪ್ರಜಾಪ್ರಭುತ್ವ, ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮತ್ತು ಐಕ್ಯತೆಗೆ ಕರೆ ನೀಡುತ್ತವೆ. ಅಲ್ಲದೇ, ಸಹಕಾರಿ ಸಂಸ್ಥೆಗಳು ಪ್ರಾಮಾಣಿಕತೆ, ಮುಕ್ತತೆ, ಸಾಮಾಜಿಕ ಜವಾಬ್ದಾರಿ ಮತ್ತು ಇತರರ ಕಾಳಜಿ ಈ ನೈತಿಕ ಮೌಲ್ಯಗಳನ್ನು ಸಹ ಅಳವಡಿಸಿಕೊಂಡಿವೆ.

ಸಾಮಾನ್ಯವಾಗಿ ಸಹಕಾರಿಯ ತತ್ವಗಳು ಮತ್ತು ಮೌಲ್ಯಗಳೊಂದಿಗೆ ಸಹಕಾರಿ ಸಂಸ್ಥೆಗಳಲ್ಲಿನ ಕಾರ್ಯಚಟುವಟಿಕೆಗಳ ಕೇಂದ್ರಬಿಂದುವಾಗಿದ್ದು, ಸಮಾಜದಲ್ಲಿರುವ ಬಡ, ಹೊರಗುಳಿದ ಮತ್ತು ದುರ್ಬಲ ವಲಯಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಈ ವಿಷಯವನ್ನು ಆರ್ಥಿಕ ವಲಯವು ಉತ್ತಮವಾಗಿ ನಿರೂಪಿಸಿದೆ.ಸಹಕಾರಿ ಸಂಸ್ಥೆಗಳು ಆರ್ಥಿಕ ವ್ಯವಸ್ಥೆಯ ಮೂಲಕ ಬಡ ಜನರಿಗೆ ಸಣ್ಣ ಹಣಕಾಸು ಸೌಲಭ್ಯವನ್ನು ಒದಗಿಸುವ ಅತಿ ದೊಡ್ಡ ಪೂರೈಕೆದಾರರಾಗಿದ್ದಾರೆ. ಜಾಗತಿಕವಾಗಿ ಸಹಕಾರಿ ಸಂಸ್ಥೆಗಳು ದಿನಕ್ಕೆ $2 ನಷ್ಟು ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವ 78 ಮಿಲಿಯನ್ ಜನರಿಗೆ ತಲುಪುತ್ತಿದೆ ಎಂದು ಅಂದಾಜಿಸಲಾಗಿದೆ. ಹೀಗಾಗಿ ಸಹಕಾರಿ ಸಂಸ್ಥೆಗಳು ಬಡ ಜನರನ್ನೊಳಗೊಂಡಂತೆ ಅಂತರ್ಗತ ಹಣಕಾಸು ಕ್ಷೇತ್ರದ ಸಾಧನೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ.

ಸಹಕಾರಿ ಸಂಸ್ಥೆಗಳು ಆರ್ಥಿಕ ಬದ್ಧತೆಯಿಂದ ಸೇವೆಯನ್ನು ಸಲ್ಲಿಸುವುದರ ಮೂಲಕ ಬಡ ಮತ್ತು ಕೆಳವರ್ಗದ ಜನರಿಗೆ ಬಡತನದ ಹೊರೆಯನ್ನು ಕಡಿಮೆ ಮಾಡುವಲ್ಲಿ ಸಹಕಾರಿಯಾಗುತ್ತಿದೆ. ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಗೆ ಉಳಿತಾಯ ಸೌಲಭ್ಯಗಳನ್ನು ಒದಗಿಸುವ ಮೂಲಕ ವೈದ್ಯಕೀಯ ತುರ್ತು ಅಗತ್ಯಗಳಂತಹ ಆಘಾತದ ಅಪಾಯಗಳನ್ನು ಕಡಿಮೆ ಮಾಡಲು ಸಹಕಾರಿಯಾಗುತ್ತಿದೆ. ಸೆನೆಗಲ್‌ನಲ್ಲಿ ಆರೋಗ್ಯ ರಕ್ಷಣೆಗೆ ಸಂಬಂಧಿಸಿದಂತೆ ಪಿಎಂಇಸಿಎಎಸ್ ಕಡಿಮೆ ಆದಾಯವನ್ನು ಹೊಂದಿರುವ ಕುಟುಂಬಗಳಿಗೆ ಉಳಿತಾಯ ಮತ್ತು ಅನಾನೂಕೂಲ ಪರಿಸ್ಥಿತಿಯಲ್ಲಿ ಆರೋಗ್ಯ ರಕ್ಷಣೆಗಾಗಿ ಕೈಗೆಟಕುವ ದರದಲ್ಲಿ ವಿಮೆಯನ್ನು ಒದಗಿಸುತ್ತಿದೆ. ಅದೇ ರೀತಿ, ಕೀನ್ಯಾದಲ್ಲಿರುವ ಸಿಐಸಿ ಇನ್ಸೂರೆನ್ಸ್ ಗ್ರೂಪ್‌ನವರು ವಿಮಾ ಕಂಪನಿಗಳ ಮುಖ್ಯ ವಾಹಿನಿಯಿಂದ ದೂರ ಉಳಿದಿರುವ ಜನರಿಗೆ ಕೈಗೆಟಕುವಂತೆ ಇನ್ಸೂರೆನ್ಸ್ ಸೌಲಭ್ಯವನ್ನು ಒದಗಿಸುತ್ತಿವೆ. ಜೊತೆಗೆ, ಬಡ ಮತ್ತು ಅನಾನೂಕೂಲತೆಯನ್ನು ಹೊಂದಿರುವ ಜನರಿಗೆ ಅಪಾಯದಿಂದ ರಕ್ಷಣೆಯ ಸೇವೆಗಳನ್ನು ಒದಗಿಸುತ್ತಿದೆ. ಸಿಐಸಿ ಇದು ಕೀನ್ಯಾದಲ್ಲಿ ಸೂಕ್ಷ್ಮ ವಿಮೆಯನ್ನು ಒದಗಿಸುವ ದೊಡ್ಡ ಪೂರೈಕೆದಾರರಾಗಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಆಂತರಿಕ ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಮತ್ತು ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸಲು ಹಾಗೂ ವಿಸ್ತರಿಸಲು ಎರಡರಲ್ಲಿಯೂ ಸಹ ಸಹಕಾರಿ ಸಂಸ್ಥೆಗಳು ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಸಹಕಾರಿ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಉಳಿತಾಯವನ್ನು ಹೊಂದಿಲ್ಲದಿರುವ ಮತ್ತು ವಾಣಿಜ್ಯ ಬ್ಯಾಂಕುಗಳಿರದೇ ಇರುವ ಸ್ಥಳಗಳಲ್ಲಿ ಸದಸ್ಯರಿಗೆ ಪತ್ತಿನ ಸೌಲಭ್ಯವನ್ನು ಒದಗಿಸುತ್ತಿವೆ. ಇದು ಕಡಿಮೆ ಆದಾಯದ ನಿರೀಕ್ಷೆಗಳಿರುವ, ಹೆಚ್ಚಿನ ಹೊಣೆಗಾರಿಕೆಗಳು ಅಥವಾ ವ್ಯವಹಾರದ ಹೆಚ್ಚಿನ ವೆಚ್ಚಗಳ ಕಾರಣದಿಂದಾಗಿ ಹಣಕಾಸು ಪೂರೈಕೆದಾರರು ಇಲ್ಲದೇ ಇರುವ ಮಾರುಕಟ್ಟೆಯಲ್ಲಿ ಮಹತ್ವದ್ದಾಗಿದೆ. ಅಲ್ಲದೇ, ಇದು ಹಣಕಾಸಿನ ಸೇವೆಗಳನ್ನು ಪಡೆಯಲು ಹಾಗೂ ಸಣ್ಣ ಮತ್ತು ಸೂಕ್ಷ್ಮ ವ್ಯವಹಾರಗಳನ್ನು ನಡೆಸಲು ಉತ್ತೇಜಿಸುತ್ತದೆ.

ಕೃಷಿ ಉತ್ಪಾದನೆಯನ್ನು ಬಲಪಡಿಸಲು ಮತ್ತು ಬಡ ರೈತರನ್ನು ಅಭಿವೃದ್ಧಿಪಡಿಸಲು ಅದರಲ್ಲೂ ಮುಖ್ಯವಾಗಿ ನ್ಯಾಯ ಸಮ್ಮತವಾದ ವ್ಯವಹಾರ ವ್ಯವಸ್ಥೆಯಲ್ಲಿ ತೊಡಗಿಸಿಕೊಳ್ಳಲೂ ಸಹ ಸಹಕಾರಿ ಸಂಸ್ಥೆಗಳಿಂದ ಸಾಧ್ಯ.ತಮ್ಮ ಸ್ವಂತ ವ್ಯವಹಾರವನ್ನು ನಡೆಸಲು ಮತ್ತು ವಿಸ್ತರಿಸಲು ತೊಂದರೆಯನ್ನುಭವಿಸುತ್ತಿರುವ ಸಣ್ಣ ರೈತರ ಕೃಷಿ ಆದಾಯವನ್ನು ಹೆಚ್ಚಿಸಲು, ಕಡಿಮೆ ಮಾರುಕಟ್ಟೆ ಮತ್ತು ಮಾಹಿತಿ ಸಂಗ್ರಹಣೆ ವೆಚ್ಚಗಳಿಂದಾಗಿ ಸ್ವಂತವಾಗಿ ಮಾಡಲು ಸಾಧ್ಯವಿಲ್ಲದಿರುವಲ್ಲಿ ಹೆಚ್ಚಿನ ಮೌಲ್ಯದ ಪೂರೈಕೆ ಸರಪಳಿಗೆ ಪ್ರವೇಶಿಸಲು ಸಾಧ್ಯವಾಗುತ್ತದೆ.

ಪೆರುವಿನಲ್ಲಿ ದಿ ಸೆಂಟ್ರಲ್ ಅಸೋಸಿಯೇಷನ್ ಆಫ್ ಸ್ಮಾಲ್ ಪ್ರೊಡ್ಯೂಸರ್ಸ್ ಆಫ್ ಆರ್ಗಾನಿಕ್ ಬನಾನಾಸ್ ಇದರ ಸಾಂಸ್ಥಿಕ ಮತ್ತು ತಾಂತ್ರಿಕ ಸಾಮರ್ಥ್ಯವು, ಸಹಕಾರಿಯನ್ನು ನ್ಯಾಯಯುತವಾದ ವ್ಯವಹಾರ ವ್ಯವಸ್ಥೆಯಲ್ಲಿ ನಡೆಸುತ್ತಿದ್ದು, ವಾಣಿಜ್ಯ ಸರಪಳಿಯಲ್ಲಿ ನ್ಯಾಯಯುತವಾದ ವ್ಯವಹಾರವನ್ನು ಉತ್ತೇಜಿಸಲು ಮತ್ತು ಉತ್ಪಾದಕ ವ್ಯವಸ್ಥೆಯನ್ನು ಸಮರ್ಥ ರೀತಿಯಲ್ಲಿ ವಿಸ್ತರಿಸಲು ಉತ್ತೇಜಿಸುತ್ತಿದೆ.

ಅಸೋಸಿಯೇಷನ್‌ನ ಲಾಭವು ತ್ವರಿತವಾಗಿ ಬೆಳವಣಿಗೆಯಾಗಿದೆ ಮತ್ತು ಆಹಾರ ಭದ್ರತೆಯನ್ನು ಸದೃಢಗೊಳಿಸಿದೆ ಮತ್ತು ತನ್ನ ಸದಸ್ಯರ ಹಾಗೂ ಸಮುದಾಯದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಪರಿಸರ ಪರಿಸ್ಥಿತಿಗಳನ್ನು ಸುಧಾರಿಸಿದೆ.ಬೆಲಿಜ್‌ರಿಯಲ್ಲಿ ಟೊಲೆಡೊ ಕೋಕೋ ಗ್ರೋವರ್ಸ್ ಅಸೋಸಿಯೇಷನ್‌ನ ಸದಸ್ಯರ ಆದಾಯವು ಕೋಕೋ ಉತ್ಪಾದನೆಯ ಮೇಲೆ ಅವಲಂಬಿಸಿದೆ. ಸದಸ್ಯರಿಗೆ ನ್ಯಾಯಯುತ ವ್ಯವಹಾರದ ಕಂತುಗಳ ಮೂಲಕ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಮತ್ತು ಅವರನ್ನು ಕೆಲಸಕ್ಕೆ ಮನೆಯಲ್ಲಿಯೇ ಇರಿಸುವುದು ಇದರ ನಡುವಿನ ವ್ಯತ್ಯಾಸವನ್ನು ಅರ್ಥೈಸಿದೆ. ಪ್ಲುರಿನೇಷನಲ್ ಸ್ಟೇಟ್ ಆಫ್ ಬೊಲಿವಿಯಾದಲ್ಲಿ ಇಎಲ್ ಸೈಬೋ ಕೋಕೋ ಕೋ ಆಪರೇಟಿವ್ ನ್ಯಾಯಯುತ ವ್ಯವಹಾರದಿಂದ ರೈತರಿಗೆ ಹಿಂದಿನ ದೋಷಪೂರಿತ ಮತ್ತು ಶೋಷಿತ ವ್ಯವಸಾಯ ರಫ್ತು ವ್ಯವಸ್ಥೆಯಿಂದ ಮತ್ತೊಂದಕ್ಕೆ ಬದಲಾಯಿಸಿ, ಹೊಸ ಸ್ವಾತಂತ್ರ್ಯ ಮತ್ತು ಸಬಲೀಕರಣವನ್ನು ನೀಡಿದೆ.

**ಸಹಕಾರಿ ಸಂಸ್ಥೆಗಳ ಕಾರ್ಯಗಳನ್ನು ಉತ್ತಮಗೊಳಿಸಲು ಕಾರ್ಯತಂತ್ರದ ವಿಧಾನಗಳು :** ಹೆಚ್ಚಿನ ಸಂಶೋಧನೆಯ ಅವಶ್ಯಕತೆಯನ್ನು ನಿರಾಕರಿಸಲಾಗದಿದ್ದರೂ, ಸಹಕಾರಿ ಸಂಸ್ಥೆಗಳಿಗೆ ಸೂಕ್ತವಾದ ಬೆಂಬಲಿಸುವ ವಾತಾವರಣವನ್ನು ನೀಡಿದಲ್ಲಿ ಸಾಮಾಜಿಕ ನ್ಯಾಯದ ಕೊರತೆಯನ್ನು ನೀಗಿಸಲು ಸಹಕಾರಿಯಾಗುತ್ತದೆ.

ಸಹಕಾರಿ ಸಂಸ್ಥೆಗಳನ್ನು ಸಬಲೀಕರಣಗೊಳಿಸಿ, ಅದರ ಸಾಮರ್ಥ್ಯವನ್ನು ಹೆಚ್ಚಿಸುವುದರ ಮೂಲಕ ಸಾಮಾಜಿಕ ನ್ಯಾಯಕ್ಕೆ ಉತ್ತಮ ಕೊಡುಗೆಯನ್ನು ನೀಡಲು ಉತ್ತಮ ನೀತಿ ಮತ್ತು ಶಾಸನಾತ್ಮಕ ಚೌಕಟ್ಟು ಅಗತ್ಯವಾಗಿದೆ.ಇದಕ್ಕಾಗಿ ಈಗಾಗಲೇ ಕೆಲವು ಮಾರ್ಗಸೂಚಿಗಳು ಅಸ್ತಿತ್ವದಲ್ಲಿದೆ.2001ರಲ್ಲಿ ಸರ್ಕಾರವು ಸಹಕಾರಿ ಸಂಸ್ಥೆಗಳ ಕುರಿತಾದ ಸಂಯುಕ್ತ ರಾಷ್ಟ್ರಗಳ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡಿದೆ.2002ರಲ್ಲಿ ಐಎಲ್‌ಓ ಶಿಫಾರಸ್ಸು ಸಂಖ್ಯೆ 193 ಅನ್ನು ಸರ್ಕಾರವು ಅಳವಡಿಸಿಕೊಂಡಿದೆ, ಇದು ಸಹಕಾರಿ ಸಂಸ್ಥೆಗಳ ವ್ಯವಹಾರದ ಕಾರ್ಯಕ್ಷಮತೆಯನ್ನು ಉತ್ತೇಜಿಸುವ ಅಗತ್ಯತೆಯನ್ನು ಒತ್ತಿ ಹೇಳುತ್ತದೆ, ಆದ್ದರಿಂದ, ಸಾಮಾಜಿಕ ನ್ಯಾಯದ ತುರ್ತು ಅವಶ್ಯಕತೆಗಳಿಗನುಗುಣವಾಗಿ ಸುಸ್ಥಿರ ಅಭಿವೃದ್ಧಿ ಮತ್ತು ಯೋಗ್ಯ ಉದ್ಯೋಗಕ್ಕೆ ಕೊಡುಗೆ ನೀಡುತ್ತದೆ. ಕೆಲವು ರಾಷ್ಟ್ರಗಳು ಇವುಗಳನ್ನು ಮತ್ತು ಕೆಲವು ಮಾರ್ಗದರ್ಶನಗಳನ್ನು ಅಳವಡಿಸಿಕೊಳ್ಳುವ ಮೂಲಕ ಪರಿಸರವನ್ನು ಸಹಕಾರಿ ಉದ್ಯಮಗಳಿಗೆ ಪರಿಣಾಮಕಾರಿ ನೀತಿಯನ್ನು ರೂಪಿಸಲು ಬಳಸಿಕೊಂಡಿದ್ದರೂ, ನಿರ್ಣಯ ಕೈಗೊಳ್ಳುವ ಎಲ್ಲಾ ಹಂತಗಳಲ್ಲಿಯೂ ಸಹ ಇವುಗಳನ್ನು ಬಳಸಿಕೊಳ್ಳಲು ಅರಿವು ಮೂಡಿಸಲು ಇನ್ನೂ ಹೆಚ್ಚಿನ ಕಾರ್ಯಗಳನ್ನು ಮಾಡಬೇಕಾಗಿದೆ.

ವಿಶ್ವಸಂಸ್ಥೆಯಿಂದ 2012ರಲ್ಲಿ ಘೋಷಿಸಲ್ಪಟ್ಟ ಅಂತರರಾಷ್ಟ್ರೀಯ ಸಹಕಾರಿಗಳ ವರ್ಷದ ಅರ್ಥವು ಜಾಗೃತಿ ಮೂಡಿಸುವುದಾಗಿದೆ.ಈ ಅಂತರರಾಷ್ಟ್ರೀಯ ಸಹಕಾರಿಗಳ ವರ್ಷವು ಜಾಗೃತಿ ಮೂಡಿಸುವುದು ಮಾತ್ರವಲ್ಲದೇ, ಸಹಕಾರಿ ಉದ್ಯಮವನ್ನು ಮಾದರಿ ಮತ್ತು ಸಾಮಾಜಿಕ ಅಭಿವೃದ್ಧಿಗೆ ಸಮರ್ಥನೀಯ ಕೊಡುಗೆಗಳನ್ನು ನೀಡುವುದಾಗಿದೆ. ಸಹಕಾರಿ ಸಂಸ್ಥೆಗಳಿಗೆ ಜಾಗೃತಿ ಮೂಡಿಸುವ ಮೂಲಕ – ಅವರು ಏನು ಮತ್ತು ಅವರು ಏನು ಮಾಡಬೇಕು – ಅಂತರ ರಾಷ್ಟ್ರೀಯ ಸಹಕಾರಿಗಳ ವರ್ಷವು ಸಹಕಾರಿಗಳನ್ನು ಸಬಲೀಕರಣಗೊಳಿಸುವುದರ ಮೂಲಕ ಅವರ ಸಾಮಾಜಿಕ ನ್ಯಾಯದ ಮೌಲ್ಯಗಳನ್ನು ಪ್ರಚಾರ ಮಾಡಲು ಮತ್ತು ಅಗತ್ಯವಿರುವ ಕಡೆಗಳಲ್ಲಿ, ಬೆಂಬಲ ನೀತಿ ಮತ್ತು ಶಾಸನಾತ್ಮಕ ಚೌಕಟ್ಟನ್ನು ರಚಿಸಲು ಸರ್ಕಾರವನ್ನು ಉತ್ತೇಜಿಸುತ್ತದೆ.

ಈ ಬೆಂಬಲದೊಂದಿಗೆ, ಸಹಕಾರ ತತ್ವಗಳನ್ನು ಮತ್ತು ಮೌಲ್ಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಸವಾಲವನ್ನು ಕಡೆಗಣಿಸಲು ಸಾಧ್ಯವಿಲ್ಲ. ಸಹಕಾರಿ ಸಂಸ್ಥೆಗಳ ಆಡಳಿತವು ಸಹಕಾರಿ ಮೌಲ್ಯಗಳು ಮತ್ತು ತತ್ವಗಳಿಗೆ ಸಮರ್ಪಿತವಾದ, ಸುಸಂಘಟಿತ ಮತ್ತು ಸಕ್ರಿಯ ಸದಸ್ಯತ್ವದ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ. ಸಾಮಾಜಿಕ ನ್ಯಾಯಕ್ಕಾಗಿ ಸಹಕಾರಿ ಸಂಸ್ಥೆಗಳು ಸಮರ್ಥ ಮಾಧ್ಯಮವಾಗಿದ್ದು, ದುರ್ಬಲ ಅಥವಾ ಅನ್ಯಾಯವನ್ನು ನಿರ್ವಹಿಸುವುದು, ಸ್ಥಳೀಯ ರಾಜಕಾರಣಿಗಳಿಂದ ಹಿಡಿದಿಟ್ಟುಕೊಳ್ಳುವುದು ಅಥವಾ ಬೇರೆ ಘರ್ಷಣೆಗಳಿಗೆ ದಾರಿ ತಪ್ಪಿಸುವುದು, ಸಾಮಾಜಿಕ ನ್ಯಾಯದ ಸಮಸ್ಯೆಗಳಿಂದ ಸಹಕಾರಿ ಸಂಸ್ಥೆಗಳನ್ನು ಬೇರೆಡೆ ತಿರುಗಿಸಲು ಬಲವಾದ ಸದಸ್ಯತ್ವ, ಒಬ್ಬ ಸದಸ್ಯರಿಗೆ ಒಂದು ಮತದ ಪ್ರಜಾಪ್ರಭುತ್ವ ತತ್ವವು ಅತ್ಯವಶ್ಯಕವಾಗಿದೆ.



# RBI News - February 2019

▸▸ **K. Vittal Shetty,** Banking Consultant, kohimavittal@Hotmail.com, Mobile : 9845699904

| The next meeting of the MPC is scheduled from April 2 to 4, 2019. | |
|---|---|
| **Policy Rates. Effective from February 07, 2019** | **%** |
| Policy Repo Rate | 6.25% |
| Reverse Repo Rate | 6.00% |
| Marginal Standing Facility Rate | 6.50% |
| BANK RATE | 6.50% |
| **RESERVE RATIOS** | |
| Cash Reserve Ratio. (CRR) | 4.00% |
| Statutory Reserve Ratio. (SLR). Effective from January 05, 2019 | 19.25% |

**Feb 28, 2019**

**Scheduled Banks' Statement of Position in India as on Friday, February 15, 2019**

| (Amount in Billions of ₹) | | | | | | | |
|---|---|---|---|---|---|---|---|
| | | SCHEDULED COMMERCIAL BANKS | | | ALL SCHEDULED BANKS | | |
| | | 16-FEB-2018 | 01-FEB-2019* | 15-FEB-2019* | 16-FEB-2018 | 01-FEB-2019* | 15-FEB-2019* |
| | a) Deposits | 110022.74 | 121227.03 | **121211.77** | 112986.18 | 124313.44 | **124339.07** |
| | i) Demand | 11277.65 | 12439.02 | **12877.19** | 11548.52 | 12722.58 | **13162.78** |
| | ii) Time | 98745.09 | 108787.93 | **108334.63** | 101437.66 | 111590.79 | **111176.34** |
| VII | INVESTMENTS | 34028.05 | 33581.21 | **33542.99** | 34933.18 | 34526.74 | **34477.68** |
| VIII | BANK CREDIT | 82232.08 | 94295.28 | **94034.99** | 84745.77 | 97082.86 | **96838.45** |

## I. IMPORTANT NEWS

1). Feb 07, 2019: - Sixth Bi-monthly Monetary Policy Statement, 2018-19 Resolution of the Monetary Policy Committee (MPC) Reserve Bank of India

On the basis of an assessment of the current and evolving macroeconomic situation at its meeting today, the Monetary Policy Committee (MPC) decided to:

• reduce the policy repo rate under the liquidity adjustment facility (LAF) by 25 basis points from 6.5 per cent to 6.25 per cent with immediate effect.

Consequently, the reverse repo rate under the LAF stands adjusted to 6.0 per cent, and the marginal standing facility (MSF) rate and the Bank Rate to 6.5 per cent.

The MPC also decided to change the monetary policy stance from calibrated tightening to neutral.

These decisions are in consonance with the objective of achieving the medium-term target for consumer price index (CPI) inflation of 4 per cent within a band of +/- 2 per cent, while supporting growth. The next meeting of the MPC is scheduled from April 2 to 4, 2019.

**2). Feb 07, 2019:** - Statement on Developmental and Regulatory Policies

Regulation and Supervision

Review of Instructions on Bulk Deposit

In terms of extant instructions, banks have been given discretion to offer differential rate of interest on the bulk deposits as per their requirements and Asset-Liability Management (ALM) projections. The instructions in this regard, last reviewed in January 2013, defined “bulk deposits” as single rupee deposits of 1 crore and above. With a view to enhancing the operational freedom of banks in raising deposits, it is proposed

i. to revise the definition of bulk deposits as single rupee deposits of 2 crore and above; and,

ii. that henceforth banks shall maintain their bulk deposit interest rate cards in the core banking system for supervisory review.

Guidelines in this regard will be issued by the end of February 2019.

Umbrella Organisation for Urban Cooperative Banks

The structure, size, lack of avenues for raising capital funds and limited area of operation of the Primary (Urban) Co-operative Banks (UCBs) add to their financial vulnerabilities. A long-term solution to make the UCB sector financially resilient and to enhance the depositors' confidence is to set up an Umbrella Organization (UO) as prevalent in many countries. The UO, apart from extending liquidity and capital support to its member UCBs, would also be expected to set up Information and Technology (IT) infrastructure for shared use of members to enable them to widen their range of services in the wake of advances in information and communication technology at a relatively lower cost. The UO can also offer fund management and other consultancy services.

The idea of setting up of UO for the UCB sector was first mooted in the year 2006 by the Working Group (Chairman: Shri N S Vishwanathan) set up by the Reserve Bank on Augmentation of Capital of UCBs. It was examined in greater detail by the Working

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages - 36

Group on Umbrella Organization and Constitution of Revival Fund for Urban Cooperative Banks (Chairman: Shri V S Das) in 2009 and the Expert Committee on Licensing of New Urban Co-operative Banks (Chairman: Shri Y H Malegam) in the year 2011. The need for UO has also been stressed by the High Powered Committee on UCBs (Chairman: Shri R Gandhi) in the year 2015.

The Reserve Bank has received a proposal for setting up an UO from the National Federation of Urban Cooperative Banks and Credit Societies Ltd. (NAFCUB). A decision on the specifics of the UO proposal will be taken by the Reserve Bank shortly.

Payment and Settlement Systems

Regulation of Payment Gateway Service Providers and Payment Aggregators

The Reserve Bank had in November 2009 issued directions regarding maintenance of nodal accounts of intermediaries like payment gateway providers and payment aggregators. In the "Payment and Settlement Systems - Vision 2018" Document, the Reserve Bank had indicated that given the increasing role and importance of such entities, these guidelines would be revised. Accordingly, the Reserve Bank has been examining the need and feasibility of regulating Payment Gateway Service Providers and Payment Aggregators. A discussion paper on comprehensive guidelines covering payments related activities of these entities will be placed in the public domain for consultation with the stakeholders.

**3). Feb 7, 2019: -**Credit Flow to Agriculture- Collateral free agricultural loans

Refer to paragraph 13 of the Statement on Development and Regulatory Policies of the Sixth Bi-Monthly Monetary Policy Statement for 2018-19 released on February 7, 2019.

Refer to RBI circular RPCD.PLFS.BC.No 85/05.04.02/2009-10 dated June 18, 2010 on the captioned subject.

Keeping in view the overall inflation and rise in agriculture input cost over the years since 2010, it has been decided to raise the limit for collateral free agricultural loans from the existing level of 1 lakh to 1.6 lakh. Accordingly, banks may waive margin requirements for agricultural loans up to 1.6 lakh.

As announced in the Sixth Bi-monthly Monetary Policy Statement, 2018-19, today, it has been decided by the Monetary Policy Committee (MPC) to reduce the policy Repo rate under the Liquidity Adjustment Facility (LAF) by 25 basis points from 6.50 per cent to 6.25 per cent with immediate effect.

## II. Directions, Withdrawals, Penalties & Cancellation of Licences of Urban Co-operative Banks & Banks.

**1). Feb 04, 2019: -** Bidar Mahila Co-operative Bank Ltd., Bidar, Karnataka.

**2). Feb 05, 2019: -** Shri Kanyaka Nagari Sahakari Bank Ltd., Chandrapur.

**3). Feb 05, 2019: -** Reserve Bank of India imposes monetary penalty of 2 million (Two Million) on Axis Bank Limited.

**4). Feb 05, 2019: -** Reserve Bank of India imposes monetary penalty of 10 million on Syndicate Bank.

**5). Feb 05, 2019: -** Reserve Bank of India imposes monetary penalty of 20 million (Rupees Twenty Million) on Axis Bank Limited.

**6). Feb 05, 2019: -** Reserve Bank of India imposes monetary penalty of 20 million (Rupees Twenty Million) on UCO Bank

**7). Feb 08, 2019: -** RBI extends Directions to The Vaish Co-operative Commercial Bank Ltd., New Delhi

**8). Feb 13, 2019: -** The Karimnagar Co-operative Urban Bank ltd, Karimnagar, Telangana

**9). Feb 13, 2019 :** The Chittoor Co-operative Town Bank Ltd., Chittoor, Andhra Pradesh

**10). Feb 20, 2019 :** HCBL Co-operative Bank Ltd, Lucknow (U.P.) –Penalised imposed a monetary penalty of 1,00,000/- (Rupees One Lakh only)

**11). Feb 20, 2019 :** Directions under Section 35A read with Section 56 of the Banking Regulation Act, 1949 – The Mapusa Urban Co-operative Bank of Goa Ltd, Goa

**12). Feb 21, 2019 :** The Srikalahasti Co-operative Town Bank ltd, Srikalahasti, Andhra Pradesh

**13). Feb 22, 2019 :** RBI issues Directions to Dr. Shivajirao Patil Nilangekar Urban Co-operative Bank Ltd. Nilanga, District Latur, Maharashtra.

**14). Feb 27, 2019 :** Directions under Section 35A of the Banking Regulation Act, 1949 (AACS) – Rupee Co-operative Bank Ltd, Pune, Maharashtra

**15). Feb 28, 2019 :** Directions under Section 35A of the Banking Regulation Act, 1949 (AACS) – The CKP Co-operative Bank Ltd, Mumbai, Maharashtra.

**Source: www.rbi.org.in**

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ, (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ. : 080–23449933/34.
ಬೆಂಗಳೂರು ಪ್ರಾಂತೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ಪ್ರಾಂತೀಯ ಕಛೇರಿ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010